(MR. SPEAKER.)

State by law not to disqualify its holder".

Such an item of legislation has been passed and the disqualification has been removed by the Mysore Legislature (Prevention of Disqualification Act, 1956. As the disqualification has been removed, the Deputy Ministers are entitled to sit in this House and draw their salary.

But I must tell the Hon'ble Member that there is this difference. If the Deputy Ministers take their oath before the Governor, they become actually Members of the Council of Ministers. If they do not take their oath before the Governor, but take oath before the Chief Minister, they cannot be called as Members of the Council of Ministers. But they do not cease to be Deputy Ministers. They will not be able to hold cabinet rank.

There is also this distinction: if they take their oath before the Governor, they will be entitled to sit in the Upper House and act on behalf of the Government. If they take the oath before the Chief Minister, they are not entitled to sit in the Upper House. They are only entitled to sit in this House because they happen to be members of this House and they can take part in the debates. They can also act on behalf of the Government in this House. But since the Deputy Ministers sitting here have not taken oath before the Governor, they cannot go to the Upper House and take part in its proceedings, and, as facts stand, they have not been sitting in the Upper House. They cannot act on behalf of the Government in the Upper House.

The matter, I suppose, is quite clear and I am sorry, I cannot uphold the point of breach of privilege raised by the Hon'ble Member Shri Muckannappa.

SRI M. C. NARASIMHAN (Kolar Gold Fields).—I had a request to make with reference to the copies of the Report submitted by the Government of Mysore to the Finance Commission. I had made a request last time almost at the beginning of the Session and so far we have not been supplied with any copies.

MR. SPEAKER.—I will see that as early as possible, copies of the Reports are given to the Hon'ble Members.

9-30 A.M.

BUDGET FOR 1957-58.
GENERAL DISCUSSION—(*Continued*).

*ಶ್ರೀ ಬಿ. ಕೆ. ಪಟ್ಟರಾಮಯ್ಯ (ಚನ್ನಪಟ್ಟಣ).—ಸ್ವಾಮೀ, ಈಗಾಗಲೇ ನನ್ನ ಮಾನ್ಯ ಮಿತ್ರರನೇಕರು ಹಣಕಾಸಿನ ಆಯುವ್ಯಯದ ಅಂಕಿಅಂಶಗಳ ಮೇಲೆ ಮಾತನಾಡಿದ್ದಾರೆ. ನಾನು ಕೆಲವು ವಿಷಯಗಳನ್ನು ಮಾತ್ರ ಮಾತನಾಡಲು ಇಚ್ಛಿಸುತ್ತೇನೆ. ಈ ಸಭೆಯಲ್ಲಿ ಸರ್ಕಾರದ ಆಡಳಿತದ ವಿಷಯದಲ್ಲಿ ಹೆಚ್ಚು ಟೀಕಿಸಲು ಎರಡು ಅವಕಾಶಗಳು ನಮ್ಮ ಮುಂದೆ ಇವೆ. ಒಂದು ರಾಜ್ಯಪಾಲರ ಭಾಷಣದ ಸಮಯದಲ್ಲಿ, ಎರಡನೆಯದು ಈ ಬಡ್ಜೆಟ್ಟಿನ ಜನರಲ್ ಡಿಸ್‌ಕಷನ್ನಿನ ಸಮಯದಲ್ಲಿ. ನಾವು ಸರ್ಕಾರದಆಡಳಿತದ ಲೋಪ ದೋಷಗಳನ್ನು ಸರ್ಕಾರದ ಮುಂದೆ ಹೇಳಿ ಅವರಿಂದ ಸರಿಯಾದ ಉತ್ತರ ಪಡೆಯಲು ಇರತಕ್ಕ ಅವಕಾಶ ಇವೆರಡೇ ಆಗಿವೆ.

ಈಗಾಗಲೇ ಈ ಸಭೆಗೆ ಗೊತ್ತಿರುವಂತೆ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಗಳಾಗಿ ಸರ್ಕಾರದ ಪರವಾಗಿ ಮಾನ್ಯ ಮಂತ್ರಿಗಳು ಮಾತನಾಡುವಾಗ ಅನೇಕ ಟೀಕೆ ಟಿಪ್ಪಣಿಗಳಗೆ ಸರಿಯಾದ ಉತ್ತರಗಳನ್ನು ಕೂಡ ಕೊಡದೆ ಕೆಲವನ್ನು ಇಗ್ನೋರ್ ಮಾಡಿದ್ದಾರೆ. ಉದಾಹರಣೆಗಾಗಿ ಒಂದು ವಿಷಯವನ್ನು ಹೇಳುತ್ತೇನೆ. ಚನ್ನಪಟ್ಟಣದಲ್ಲಿ ಆಗಿರತಕ್ಕಂಥ ಪೋಲೀಸು ದೌರ್ಜನ್ಯದ ವಿಷಯದಲ್ಲಿ ಎಷ್ಟೋಂದು ಜನತೆಗೆ ಹಿಂಸೆಯಾಯಿತು ಎನ್ನುವುದನ್ನು ಪರಿಶೀಲಿಸಲು ಸರಕಾರವು ಒಂದು ಜುಡಿಷಿಯಲ್ ಎಕ್ಕ್ವೈರಿ ಕಮಿಟಿಯನ್ನು ನೇಮಕ ಮಾಡಬೇಕೆಂದು ಈ ಸಭೆಯ ಗಮನಕ್ಕೆ, ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ಮತ್ತು ಕೇಂದ್ರ ಸರ್ಕಾರದ ಪ್ರಧಾನಿಗಳ ಗಮನಕ್ಕೆ ತಂದಿದ್ದಾಗ್ಯೂ ಕೂಡ ಈ ಸರ್ಕಾರದಿಂದ ಏನನ್ನೂ ಮಾಡಲಾಗಲಿಲ್ಲ. ಈ ದೌರ್ಜನ್ಯದಿಂದ ನೂರಾರು ಜನಗಳಿಗೆ ಚಿತ್ರಹಿಂಸೆಗಳಾದವು ಮತ್ತು ತೊಂದರೆಗಳಾದವು. ನನಗೆ ಬಹುಶಃ ಸರಕಾರದವರು ಇದೇ ಸ್ಥಿತಿಯಲ್ಲಿ ಉಳಿಯುತ್ತಾರೆಯೋ ಇಲ್ಲವೋ ಎನ್ನುವ ಒಂದು ಶಂಕೆಯಿದೆ. ಮನುಷ್ಯನ ಅಳಿವು ಮತ್ತು ಉಳಿವು ಭಗವಂತನ ಕೈಯಲ್ಲಿದೆ. ಆದರೆ ಅಂತಹ ಭಗವಂತನನ್ನೂ ಕೂಡ ಇವರುಗಳ ಮರೆಯುತ್ತಿರುವಂತೆ ಕಾಣುತ್ತದೆ. ಹೀಗಿರುವಾಗ ಪ್ರತಿಯೊಂದು ಸಣ್ಣ ಪುಟ್ಟ ವ್ಯವಹಾರಗಳಲ್ಲಿಯೂ ಮಂತ್ರಿ ಮಂಡಲ ಕೈಹಾಕುತ್ತಿದೆ. ಸಾಧಾರಣವಾದ ಒಂದು ಪೋಲೀಸು ಕಾನ್‌ಸ್ಟೇಬಲ್ ಏನಾದರೂ ಈ ಮಂತ್ರಿಮಂಡಲದವರ ಪೈಕಿ ಯಾರ ಮಾತನ್ನಾದರೂ ಆಡಿದರೆ ಆ ಬಡ ಕಾನಸ್ಟೇಬಲ್ ಕೂಡ ಉಳಿಯುವುದಕ್ಕೆ ಈ ದಿವಸ ಸಾಧ್ಯವಿಲ್ಲ. ಇನ್ನು ತಾಲ್ಲೂಕಿನಲ್ಲಿರುವ ಅಮಲ್ದಾರರುಗಳು ಇವರ ಕೈಗೊಂಬೆಗಳಾಗಿದ್ದಾರೆ. ಇವರುಗಳಿಗೆಲ್ಲ ಈ ಮಂತ್ರಿಗಳೇ ಸಂಬಳ ಕೊಡುತ್ತಿರುವರೆಂಬ ಭಾವನೆ ಬಂದಿದೆ. ದೇಶದ ಪ್ರತಿಯೊಬ್ಬ ಪ್ರಜೆಯಿಂದ ಬಂದಿರತಕ್ಕ ಹಣದಿಂದ ಇವರುಗಳು ಜೀವನ ಮಾಡುತ್ತಿರುವರೆಂಬ ಅರಿವು ಇರಬೇಕು. ಈ ದಿವಸ ಆ ರೀತಿಯಾಗಿ ವರ್ತಿಸದೆ ಇರುವುದರಿಂದ ಬಡ ಜನತೆಗೆ ಬಹಳ ತೊಂದರೆಯಾಗುತ್ತಿದೆ. ಸರ್ಕಾರದಿಂದ ದೊಡ್ಡ ದೊಡ್ಡ ಸಂಬಳಗಳನ್ನು ತೆಗೆದು

ಕೊಂಡಿರುವ ಆಫೀಸರುಗಳನ್ನು ಇಟ್ಟಿರುವುದು ಎಲ್ಲರ ಸೌಕರ್ಯಕ್ಕಾಗಿ ಎಂಬುದನ್ನು ತಿಳಿದುಕೊಳ್ಳಬೇಕು. ಹಾಗೆ ತಿಳಿಯದೆ ಕೆಲಸ ಮಾಡಿದರೆ ಜನರಿಗೆ ಅವರಿಂದ ಏನೂ ಅನುಕೂಲವಾಗುವುದಿಲ್ಲ. ಆದರೆ ಇವೊತ್ತಿನ ದಿವಸ ಬಡ ಜನತೆಯ ಮೇಲೆ ಅನೇಕ ವಿಧವಾದ ಸುಲಿಗೆಗಳನ್ನು ಮಾಡಿ, ಒಂದು ರೀತಿಯಾಗಿ ಸ್ಯಾಕ್ರಿಫೈಸು ಮಾಡಬೇಕೆಂದು ಹೇಳಿ ಒಂದು ಸಾವಿರ ರೂಪಾಯಿಗಳನ್ನು ಕೂಡಿಸಲು ಪ್ರಯತ್ನ ಮಾಡುತ್ತಿರುವುದು ಇವರೇ ಹೇಳಿದಂತೆ ಎಷ್ಟರಮಟ್ಟಿಗೆ ಇದು ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ಎಂದೆನಿಸಿಕೊಳ್ಳುತ್ತದೋ ನನಗೇನೂ ಗೊತ್ತಾಗುವುದಿಲ್ಲ. ಇದೊಂದು ಯೋಚನೆ ಮಾಡಬೇಕಾದ ಅಂಶ.

ಈ ಸಭೆಯಲ್ಲಿ ಹಣಕಾಸಿನ ಮಸೂದೆಯ ಮೇಲೆ ಮಾತನಾಡುವಾಗ ಮುಖ್ಯಮಂತ್ರಿಗಳು ಇದ್ದಿದ್ದರೆ ನಮಗೆಲ್ಲರಿಗೂ ಬಹಳ ಸಂತೋಷವಾಗುತ್ತಿತ್ತು. ಅಲ್ಲದೆ ನಾವು ಏನನ್ನು ಹೇಳಬೇಕೋ ಅವುಗಳನ್ನು ಹೇಳಲು ನಮಗೆ ಬಹುಶಃ ಹೆಚ್ಚಿನ ಮನಸ್ಸು ಬರುತ್ತಿತ್ತು. ಅದರಿಂದ ಅವರು ಇಲ್ಲದೆ ಇರುವುದು ಇಂತಹ ಒಂದು ಸಂದರ್ಭದಲ್ಲಿ ಬಹಳ ವಿಷಾದವಾದ ಅಂಶವಾಗಿದೆ. ಎಷ್ಟೇ ಗುರುತರವಾದ ಕೆಲಸಗಳು ಇದ್ದರೂ ಇಂತಹ ಹಣಕಾಸಿನ ವಿಷಯಗಳನ್ನು ಮಾತನಾಡುವಾಗ ಮುಖ್ಯಮಂತ್ರಿಗಳು ಇರಬೇಕಾದುದು ಅವರ ಕರ್ತವ್ಯವೆಂದು ನಾನು ಭಾವಿಸಿದ್ದೇನೆ. ಅವರಿಲ್ಲದಿದ್ದರೆ ನಾವು ಇಲ್ಲಿ ಏಕೆ ಹೇಳಬೇಕೋ ಮತ್ತು ಇಲ್ಲಿಗೆ ಏಕೆ ಬರಬೇಕೋ ಎಂದೆನಿಸುತ್ತದೆ. ಏಕೆಂದರೆ ಇಲ್ಲಿರುವ ಇತರ ಮಂತ್ರಿಗಳು ಪ್ರತಿಗಾಮಿ ಮನೋಭಾವನೆಯುಳ್ಳವರು ಮತ್ತು ಇವರು ಪ್ರಗತಿಗಾಮಿಗಳಲ್ಲ. ಅಲ್ಲದೆ ಈ ಕರ್ಣಾಟಕ ರಾಜ್ಯವಾಗುವಾಗ ಕರ್ಣಾಟಕ ರಾಜ್ಯದ ಮುಖ್ಯ ಮಂತ್ರಿಗಳಾಗಿರುವವರು ಪ್ರಗತಿಗಾಮಿಗಳಾಗಿ ಜನತೆಗೆ ಸರಿಯಾದ ನಾಯಕರಾಗಿರಬೇಕು. ದೇಶಕ್ಕೆ ಒಳ್ಳೆಯದನ್ನು ಮಾಡುತ್ತಾರೆಂದು ಜನ ಇಂತಹ ಒಬ್ಬ ನಾಯಕರನ್ನು ಚುನಾಯಿಸಿದ್ದಾರೆ. ಈ ದಿವಸ ಅವರು ಮಾಡಿರತಕ್ಕ ಕೆಲಸ, ಅವರು ನೇಮಕ ಮಾಡಿರತಕ್ಕ ಮಂತ್ರಿಮಂಡಲ ಇವೆಲ್ಲವನ್ನೂ ನೋಡಿದರೆ, ಹಿಂದೆ ಅವರು ಯಾವುದೋ ಒಂದು ಹೆಸರನ್ನು ಪಡೆದಿದ್ದರೆಂದು ತಿಳಿದು ಅದೇ ರೀತಿಯಾಗಿ ಈಗಲೂ ನಡೆಯುತ್ತಿರುವುದು ಸರಿಯಾದುದಲ್ಲ. ತಮ್ಮ ಕೈಯಲ್ಲಿ ಅಧಿಕಾರವಿದೆ ಎಂದು ಹೆಮ್ಮೆಯಿಂದ ಏನು ಮಾಡಿದರೂ ಮಾಡಬಹುದು ಎಂದು ತಿಳಿದುಕೊಂಡು ಆ ರೀತಿಯ ಭಾವನೆಯಿಂದ ಹೀಗೆಲ್ಲ ಮಾಡುತ್ತಿದ್ದಾರೋ ಏನೋ ಎನ್ನುವಂತೆ ತೋರುತ್ತಿದೆ; ಅಲ್ಲದೆ ಮತ್ತಾವ ಉದ್ದೇಶದಿಂದ ಹೀಗೆ ಮಾಡುತ್ತಿದ್ದಾರೋ ನನಗೇನೂ ಗೊತ್ತಾಗುವುದಿಲ್ಲ. ಆದರೆ ಜನಗಳಿಂದ ಚುನಾಯಿಸಲ್ಪಟ್ಟು ಜನತೆಯು ಹೇಳುತ್ತಿರುವ ಮಾತುಗಳನ್ನು ಗಮನದಲ್ಲಿಟ್ಟುಕೊಂಡು ಈ ಮಂತ್ರಿಮಂಡಲವನ್ನು ರಚನೆ ಮಾಡಿದ್ದರೆ ಜನತೆಗೆ ಬಹುಶಃ ಒಳ್ಳೆಯದಾಗುತ್ತಿತ್ತೋ ಏನೋ ಎನ್ನುವ ಭಾವನೆ ನನಗಿತ್ತು. ಸ್ವಾಮೀ, ಈಗ ಇವರು ನೇಮಕ ಮಾಡಿರುವ ವಿಷಯವಾಗಿ ಹೇಳುವುದಾದರೆ, ಕಾಂಗ್ರೆಸ್ಸಿನಲ್ಲೇ ಬೇಕಾದಷ್ಟು ಲೆಜಿಸ್ಲೇಟರುಗಳಿದ್ದರು. ಎಲೆಕ್ಟೆಡ್ ರೆಪ್ರೆಸೆಂಟಿವ್‌ಗಳಿದ್ದರು. ಇವರನ್ನೆಲ್ಲ ಬಿಟ್ಟು ಹೊರಗಡೆ ಹೋಗಿ ಲೆಜಿಸ್ಲೇಟಿವ್ ಅಸೆಂಬ್ಲಿ ಮೆಂಬರಲ್ಲದವರನ್ನು ಈಗ ವಿದ್ಯಾ ಮಂತ್ರಿಗಳನ್ನಾಗಿ ನೇಮಕ ಮಾಡಿದ್ದಾರೆ. ಹೀಗೆ ನೇಮಕ ಮಾಡಲು ಇವರಿಗೆ ಕಾನೂನಿರಬಹುದು, ಆದರೆ ಆ ಕಾನೂನನ್ನು ದುರುಪಯೋಗ ಪಡಿಸಬಾರದು. ಈ ರೀತಿಯಾಗಿ ನೇಮಕವನ್ನು ಏಕೆ ಮಾಡಬೇಕು? ಇದರ ಆವಶ್ಯಕತೆ ಇದೆಯೇ? ಅಥವಾ ದೇಶದಲ್ಲಿ ಅಂತಹ ಅವ್ಯವಸ್ಥೆಗಳೇನಾದರೂ ಆಗಿದ್ದಿತೇ ಎಂದರೆ ಅಂತಹ ಅಲ್ಲಕಲ್ಲೋಲವಾಗುವ ಪರಿಸ್ಥಿತಿಯೇನೂ ಬಂದಿರಲಿಲ್ಲ. ಆದರೆ ಕೇಂದ್ರ ಸರಕಾರದಲ್ಲಿ ಹಿಂದೆ ಪಾರ್ಲಿಮೆಂಟಿನಲ್ಲಿದ್ದ ಕೇಂದ್ರದ ಫೈನಾನ್ಸ್ ಮಂತ್ರಿಗಳಾಗಿದ್ದ ಶ್ರೀ ದೇಶಮುಖರನ್ನು ಇದೇ ರೀತಿಯಾಗಿ ನೇಮಕ ಮಾಡಿದರೆಂಬ ಒಂದು ನೀತಿಯನ್ನು ಅನುಸರಿಸಿ ಇಲ್ಲಿಯೂ ಮಾಡಿದೆ ಎಂದು ಹೇಳಬಹುದು. ಆದರೆ ಇಲ್ಲಿ ಅಂತಹ ಪರಿಸ್ಥಿತಿಯೇನೂ ಇರಲಿಲ್ಲ, ಮತ್ತು ಇಂತಹ ನೇಮಕದ ಅಗತ್ಯವೂ ಇರಲಿಲ್ಲ. ಮತ್ತು ನಾನು ಹೀಗೆ ಹೇಳುತ್ತಿದ್ದೇನೆಂದು ಯಾರೂ ತಪ್ಪು ತಿಳಿದುಕೊಳ್ಳಬಾರದು. ಹೀಗೆ ನೇಮಕ ಮಾಡಲು ತಜ್ಞರೂ ಮತ್ತು ದಕ್ಷರೂ ಇದ್ದರೂ ಕೂಡ ಇವರನ್ನೇಕೆ ನೇಮಕ ಮಾಡಿ ಈ ರೀತಿಯ ಒಂದು ಅವಕಾಶವನ್ನು ಏಕೆ ಕೊಟ್ಟಿದ್ದಾರೆಯೋ ನನಗೇನೂ ಅರ್ಥವಾಗುತ್ತಿಲ್ಲ. ಇವರಿಗಿಂತ ದಕ್ಷರಾದವರಿರಲಿಲ್ಲವೇ? ಇವರಿಗಿಂತ ಹೆಚ್ಚಿನ ಮೇಧಾವಿಗಳಿರಲಿಲ್ಲವೇ? ಹಾಗಿದ್ದರೂ ಕೂಡ ಈ ಸಭೆಯ ಸದಸ್ಯರಲ್ಲದ ಒಬ್ಬರನ್ನು ಹೊರಗಿನಿಂದ ತಂದು ನೇಮಿಸಿರುವುದು ಸರಿಯಾದುದಲ್ಲ. ನಮ್ಮ ಶ್ರೀ ವೀರಣ್ಣಗೌಡರ ತ್ಯಾಗವನ್ನೂ ತಿಳಿದಿದೇನೆ ಮತ್ತು ಅವರ ಕಾರ್ಯದಕ್ಷತೆಯೂ ನನಗೆ ಗೊತ್ತಿದೆ. ಬಹುಕಾಲದಿಂದಲೂ ಅವರನ್ನು ಬಲ್ಲೆ, ಮತ್ತು ಇವರು ಪ್ರಗತಿಗಾಮಿಯಾಗಿದ್ದಾರೆಂದು ನಂಬಿದ್ದೇನೆ. ಈಚೆಗೆ ಅವರ ವಿಷಯವಾಗಿ ಹೆಚ್ಚಿಗೆ ಹೇಳಲು ನನಗೆ ಸಾಧ್ಯವಿಲ್ಲ. ಶ್ರೀ ವೀರಣ್ಣಗೌಡರು ಮಾತನಾಡುತ್ತ ನನ್ನ ಮಿತ್ರರಾದ ಶ್ರೀ ಮುಕ್ಕಣ್ಣಪ್ಪನವರು ಕ್ಷಮಾಪಣೆ ಬರೆದುಕೊಟ್ಟು ಜೈಲಿನಿಂದ ಹೊರಕ್ಕೆ ಬಂದರೆಂದು ಹೇಳಿದರು.

ನಿಜ ಇರಬಹುದು ಅಥವಾ ಇಲ್ಲದಿರಬಹುದು. ಅಂತು ಅದು ಬೇರೆ ವಿಷಯ. ಏನೂ ಇಲ್ಲದೆ ಅವರು ಹೇಳುತ್ತಾರೆಂದು, ನಾನು ಅಷ್ಟಾಗಿ ಅವರ ಮಾತಿನ ವಿಷಯದಲ್ಲಿ ಅಪನಂಬಿಕೆಯಿಟ್ಟು ಮಾತನಾಡಬಯಸುವುದಿಲ್ಲ. ಅವರೇನೋ ಜೈಲಿಗೆ ಹೋಗಿ, ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿ, ದೇಶವನ್ನು ಅಲ್ಲಕಲ್ಲೋಲ ಮಾಡಲು ಮುಂಚೆ ಪ್ರಯತ್ನಪಟ್ಟರು. ಆಮೇಲೆ ಏನು ಅನಾನುಕೂಲವಿತ್ತೋ ತಮ್ಮ ಸ್ವಂತ ವ್ಯವಹಾರವೇನಿತ್ತೋ, ಅಂದಿನ ತಮ್ಮ ಪರಿಸ್ಥಿತಿಗನುಗುಣವಾಗಿ ಏನೋ ಹೊರಗೆ ಬಂದಿರಬಹುದು. ಆದರೆ, ಹೀಗೆಲ್ಲಾ ಹೇಳಿದವರು, ಮಾನ್ಯ ತಮ್ಮ ಮಿತ್ರರೊಬ್ಬರು ಅಂಥವರು ಪಕ್ಕದಲ್ಲೇ ಕುಳಿತಿದ್ದಾರೆ—ವಿದ್ಯಾ ಮಂತ್ರಿಗಳು ಎಷ್ಟು ಸಾರಿ ಜೈಲಿಗೆ ಹೋಗಿದ್ದಾರೆ? ಅವರ ವಿಚಾರವೇಕೆ ಮಾತನಾಡಲಿಲ್ಲ? ಶಿವಪುರ ಕಾಂಗ್ರೆಸ್ ಅಧಿವೇಶನ ಮಾಡಿದಾಗ ಶ್ರೀ ವೀರಣ್ಣಗೌಡರೇನೋ ಭಾರಿಯಾಗಿ ಕೆಲಸ ನಡೆಸಿದರು; ಗುಂಡಿನೇಟಿಗೆ ಕೂಡ ಸಿದ್ಧವಾಗಿದ್ದರು. ಅದೇ ಇವರ ವಿಷಯದಲ್ಲೇನಿದೆ? ಶ್ರೀ ಚೆಂಗಲರಾಯರೆಡ್ಡಿಯವರು ಜೈಲಿಗೆ ಹೋದರು, ವೀರಣ್ಣಗೌಡರು ಜೈಲಿಗೆ ಹೋಗುತ್ತಾರೆಂದು, ಆ ತದಂಗದಲ್ಲಿ ವೆಂಕಟಪ್ಪನವರ ಹೆಸರನ್ನೂ ಜೊತೆಗೆ ಸೇರಿಸಿ ಇಬ್ಬರೂ ಕಾಂಗ್ರೆಸ್ ಅಧ್ಯಕ್ಷರಾಗುತ್ತಾರೆಂದು ಘೋಷಣೆಯಾಯಿತು; ಅದರ ಮೇಲೆ ವಿಧಿಯಿಲ್ಲದೆ ವೆಂಕಟಪ್ಪನವರು ಒಂದು ದಿವಸ ಜೈಲಿಗೆ ಹೋಗಬೇಕಾಗಿ ಬಂತು, ಅಷ್ಟೆ. ಅದು ಬಿಟ್ಟು ಯಾವತ್ತಾದರೂ ಅಂಥ ಹೋರಾಟಮಾಡಿ ಹೆಚ್ಚಿನ ಕಾರ್ಯಾಚರಣೆ ಮಾಡಿದ್ದುಂಟೇ? ಈ ಸಭೆಯಲ್ಲಿ ಏನೋ ಭಾಷಣ ಮಾಡಿರಬಹುದು. ನನಗೂ ಇಂಥ ಭಾಷಣ ಮಾಡುವುದಕ್ಕೆ ಬರುತ್ತದೆ.

Sri H. S. RUDRAPPA (Minister for Agriculture).—It is a personal

(SRI H. S. RUDRAPPA)
insinuation, the Hon'ble Member is making.

Sri A. V. NARASIMHA REDDY (Bangalore South).—Sir, the discussion is on the Budget. My friend is narrating the life history of an individual here. I do not know how it is relevant to the discussion before the House. I would like to know whether it is correct.

Mr. SPEAKER.—Hon'ble Member may just excuse me, because I have not taken the final decision. I am just watching what the Hon'ble Member is saying.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಈ ಬಡ್ಜೆಟ್ಟಿನಲ್ಲಿ ವಿದ್ಯಾಖಾತೆ ಸೇರಿದೆ. ಅದಕ್ಕಾಗಿ ಒಟ್ಟು ಆದಾಯದ $\frac{1}{3}$ ಭಾಗದಷ್ಟನ್ನು ಖರ್ಚು ಮಾಡಬೇಕೆಂದು ಹೇಳಿದೆ. ಇದನ್ನು ಖರ್ಚು ಮಾಡುವುದಕ್ಕೆ ಎಂಥವರು ಆಡಳಿತ ದಲ್ಲಿರಬೇಕು ಎಂಬ policy ಪ್ರಶ್ನೆಯಿದೆ. ಹೀಗೆ ದೇಶದ ಒಟ್ಟು ಹಣದ $\frac{1}{3}$ ಭಾಗದಷ್ಟು ಹಣವನ್ನು ಈ ಖಾತೆಗೆ ಕೊಡಬೇಕಾಗಿರುವ ಸಂದರ್ಭವಿರುವುದರಿಂದ ನಾನು ಈ ಮಾತುಗಳನ್ನು ಹೇಳಬೇಕಾಗಿದೆ.

Sri A. V. NARASIMHA REDDY.—It involves the policy of the Government.

Mr. SPEAKER.—The Hon'ble Member should not pass defamatory remarks.

Sri B. K. PUTTARAMIYA.—I do not pass any defamatory remarks.

Sri A. V. NARASIMHA REDDY.—I raise a point of order. He has been repeating the old arguments he has stated on the previous occasions.

Mr. SPEAKER.—There is no point of order. The Hon'ble Member may repeat what he has already stated. If he has not passed any remarks previously he may advance them now. But if the Hon'ble Member is making any defamatory remarks I can stop him. If he is critical about the Treasury Benches I cannot help it. The Treasury Bench can look after themselves.

Sri A. V. NARASIMHA REDDY.—He is casting a reflection. That is forbidden under the rules.

Sri B. K. PUTTARAMIYA.—Sir, my time is taken away by these arguments.

Sri A. V. NARASIMHA REDDY.—He cannot repeat the old arguments. It is forbidden under the rules.

Mr. SPEAKER.—I have understood the Hon'ble Member. What is the use of taking his time? Because, he is very anxious to speak what he wants to say. As I have already stated I am watching and if he makes any defamatory remarks I will stop him.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಅಧ್ಯಕ್ಷರೇ, ತಾವೇ ನೋಡಿದ ಹಾಗೆ ನಾನು ಮಾತನಾಡುವ ಕಾಲ ಹೀಗೆ ಕಳೆದುಹೋಗಿದೆ. ಕಳೆದುಹೋದ ಕಾಲವನ್ನು ನನಗೆ ಕೊಡಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

Sri T. SUBRAMANYA (Turuvekere).—I would like to say that some sort of insinuation is made against an Hon'ble Minister and it may not be in keeping with the dignity of the House. I have heard my friend and I request him through you that it is better if he avoids such personal attacks against the Ministers.

Mr. SPEAKER.—I must say again that I am watching what the Hon'ble Member is saying. I cannot stop him if he makes any caustic remarks against a member of the Treasury Bench. If it is of a defamatory or insinuating character, I can stop him.

Sri T. SUBRAMANYA.--I am speaking about the dignity of the House.

Mr. SPEAKER.--After all I am guided by the rules regarding the debates. If the rules permit of such a discussion I cannot stop him. I request the Hon'ble Member Sri B. K. Puttaramiya to be as dignified as possible, as he happens to be a member of this House.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಸ್ವಾಮೀ, ನನಗೂ ಜವಾಬ್ದಾರಿಯಿದೆ, ನಾನೂ ಈ ಸಭೆಯ ಸದಸ್ಯನೆಂಬು ದನ್ನು ನಮ್ಮ ಮಿತ್ರರೂ ತಿಳಿದುಕೊಳ್ಳಬೇಕು. ನಾನು ಹೀಗೆ ಮಾತನಾಡುತ್ತಿರುವಾಗ ನನ್ನ thoughtsನ್ನು ಬೇರೆ ಕಡೆಗೆ ಹೊರಳಿಸುವ ಉದ್ದೇಶದಿಂದ ಈ ರೀತಿ ಮಾಧ್ಯಸ್ಥಿಕೆ ಮಾಡುತ್ತಿದ್ದಾರೆ. ಇದು ಅವರಿಗೆ ಸರಿ ಯಾದದ್ದಲ್ಲ.

ಹೀಗೆ ನಾನು ಹೇಳುವಾಗ, ನಮ್ಮ ಮುಖ್ಯ ಮಂತ್ರಿ ಗಳು ಒಂದು ಪ್ರಗತಿಗಾಮಿ ಮಂತ್ರಿ ಮಂಡಳವನ್ನು ರಚನೆ ಮಾಡುವುದರಲ್ಲಿ ಹಿಂದೆ ಬಿದ್ದಿದ್ದಾರೆಂದು ಹೇಳ ಬೇಕಾಗಿದೆ. ಶ್ರೀ ವೀರಣ್ಣಗೌಡರು ತಮ್ಮ ಕಡೆ ಯಿರುವ ತಪ್ಪನ್ನೂ ಒಪ್ಪಿಕೊಳ್ಳಬೇಕಾದದ್ದು ನ್ಯಾಯ. ಆದ್ದರಿಂದಲೇ ನಾನು ಹೇಳುತ್ತಿದ್ದೇನೆ. ಜೊತೆಗೆ, ಪ್ರತಿಗಾಮಿ ಮಂತ್ರಿ ಮಂಡಳವನ್ನು ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ರಚನೆ ಮಾಡಲಿಲ್ಲವೆಂದು ಹೇಳು ವುದಕ್ಕೆ ಕಾರಣ, ಕಾಂಗ್ರೆಸ್ಸಿಗೂ ಮುಂಚೆ ಸೇರದಿದ್ದ ಇಂಥವರನ್ನು ಸೇರಿಸಿಕೊಂಡಿರುವುದಕ್ಕೆ. ಪ್ರಜಾ ಪಕ್ಷ ವೆಂದು ಯಾವುದೋ ಒಂದು ಪಕ್ಷ—ಕೋಮುವಾರು ಪಕ್ಷ—ಇತ್ತು. ಶ್ರೀ ವೀರಣ್ಣಗೌಡರೇನೂ ಅದರಲ್ಲಿರ ಲಿಲ್ಲ. ಶ್ರೀ ವೆಂಕಟಪ್ಪನವರು ಮತ್ತು ಶ್ರೀ ಮರಿ ಯಪ್ಪನವರು ಅಂಥ ಪಕ್ಷದ ಸದಸ್ಯರಾಗಿದ್ದರು. ಇಂಥ ಒಂದು ಕೋಮುವಾರು ಪಕ್ಷದಲ್ಲಿದ್ದವರು, ಇದ್ದಕ್ಕಿದ್ದ

ಹಾಗೆ, ದೇಶದಲ್ಲಿ ಕಾಂಗ್ರೆಸ್ ಬೆಳೆದು ಹೋರಾಟ ನಡೆಸಿ ಮುಂದುವರಿಯುತ್ತಿರುವಾಗ, ತಮಗೇನೋ ದೊಡ್ಡ ಅನುಕೂಲವಾಗುತ್ತದೆಂದು ತಿಳಿದು, ಎಲ್ಲಾ ಅನುಕೂಲವೂ ಬ್ರಾಹ್ಮಣರಿಗೊಬ್ಬರಿಗೇ ಸಿಕ್ಕಿಬಿಡುತ್ತದಲ್ಲಾ ಎಂಬ ಭಾವನೆಯಿಂದ ತಾವೂ ಸೇರಿಕೊಳ್ಳೋಣ, ತಾವೂ ಮಂತ್ರಿ ಮಂಡಳಕ್ಕೆ ಸೇರಿಕೊಳ್ಳಬಹುದು ಎಂಬ ಆಸೆಯಿಂದ ಒಟ್ಟಿಗೆ ಒಂದು ರಾತ್ರಿ ಸೇರಿಕೊಂಡರು. ಇಂಥವರು ಪ್ರಗತಿಗಾಮಿಗಳೇ ? ಇವರ ಊರಿನಲ್ಲೇ ಒಂದು ಪ್ರೈಮರಿ ಸ್ಕೂಲಿರಲಿಲ್ಲ. ಮೆಂಬರಾದ ಮೇಲೆ ನಾನು ಹೋರಾಡಿ ಇವರ ಊರಾದ ತಿಟ್ಟವಾರನಹಳ್ಳಿಗೆ ಒಂದು ಸ್ಕೂಲು ಕೊಡಿಸಿದೆ. ತಮ್ಮ ಊರಿಗೇ ಒಂದು ಸ್ಕೂಲು ಕೊಡಿಸಲಾಗದವರು ಇನ್ನೆಷ್ಟರಮಟ್ಟಿಗೆ ದೇಶದ ಎಲ್ಲಾ ಕಡೆಯಲ್ಲೂ ವಿದ್ಯಾಪ್ರಗತಿ ಸಾಧಿಸಬಲ್ಲರು ? ನಮ್ಮ ಊರಿನಲ್ಲಿ ಒಂದು ಹಾಸ್ಟಲ್ ಇರಲಿಲ್ಲ. ಯಾರೋ ಒಬ್ಬರು ಧರ್ಮಾರ್ಥವಾಗಿ ಒಂದು ಹಾಸ್ಟಲ್ ಕಟ್ಟಿಸಿಕೊಟ್ಟಿದ್ದರು. ಧರ್ಮದ ಹಾಸ್ಟಲ್ ಬೇಡ, ಜನರಲ್ ಹಾಸ್ಟಲ್ ಕೊಡಿ ಎಂದರೆ, ಆ ಧರ್ಮದ ಹಾಸ್ಟಲ್ಲೇ ಸರ್ಕಾರಕ್ಕೆ ಇರಬೇಕು, ಅದರ ಆಡಳಿತವೂ ತಮ್ಮ ಕೈಯಲ್ಲೇ ಇರಲೆಂದು ಹೇಳಿ ಅದನ್ನು ಕಿತ್ತುಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ.

ಹೀಗೆಲ್ಲಾ ವಿಷಯಗಳಿರುವಾಗ, ಈಗಲೂ ನಮ್ಮ ಮುಖ್ಯ ಮಂತ್ರಿಗಳು ಸರಿಯಾಗಿ ಯೋಚನೆಮಾಡಿ ಸರಿಯಾದವರನ್ನು ಈ ಸ್ಥಾನಕ್ಕೆ ನೇಮಿಸಿಕೊಳ್ಳಬೇಕು. ಅನ್ಯಾಯಗಳಾಗಿರುವುದನ್ನು judicial enquiryಗೆ ಒಳಪಡಿಸಬೇಕು. ಮುಖ್ಯ ಮಂತ್ರಿಗಳು ಸರಿಯಾಗಿ ನೇಮಕ ಮಾಡದೆ ಇದ್ದರೆ, ಅವರ ವಿಷಯದಲ್ಲಿ ಜನತೆ ಯಾವ ಭಾವನೆಯಿಟ್ಟಿದ್ದಾರೋ ಆ ಭಾವನೆಯನ್ನು ಹೋಗಲಾಡಿಸಿಕೊಳ್ಳುತ್ತಾರೆ. ಜನರು ಅವರಲ್ಲಿಟ್ಟಿರುವ ಸದ್ಭಾವನೆಯನ್ನು ಕಳೆದುಕೊಳ್ಳುವುದಕ್ಕೆ ಅವರು ತಯಾರಾಗಿದ್ದರೆ, ಇಂಥದಕ್ಕೆ ಅವಕಾಶ ಕೊಡಲಿ. ಹಿಂದೆ ರಾಜ ಮಹಾರಾಜರುಗಳು ಜನತೆ ತಮ್ಮ ವಿಷಯದಲ್ಲಿ ಏನು ಆಡಿಕೊಳ್ಳುತ್ತಿದ್ದಾರೆಂಬುದನ್ನು ತಿಳಿದುಕೊಳ್ಳುವುದಕ್ಕೆ ಸಿ.ಐ.ಡಿ. ಗಳನ್ನು ನೇಮಿಸುತ್ತಿದ್ದಂತೆ, ಇವರೂ ಸಿ.ಐ.ಡಿ.ಗಳನ್ನಿಟ್ಟು ಜನತೆ ಏನೆಂದುಕೊಳ್ಳುತ್ತಿದ್ದಾರೆಂಬುದನ್ನು ತಿಳಿದುಕೊಳ್ಳಲೆಂದು ನಾನು ಅವರಿಗೆ ತಿಳಿಸುತ್ತೇನೆ.

ಆಮೇಲೆ, ಈ 1957-58ರ ಬಡ್ಜೆಟ್ ವಿಷಯ ಹೇಳುವುದಾದರೆ, ಇದರಲ್ಲಿ ಯಾವ ಹೊಸ ಮಾರ್ಪಾಟಿನ ವಿಷಯವೂ ಇರುವಂತೆ ಕಾಣುವುದಿಲ್ಲ. ನಮಗೂ ಮಾತನಾಡಬೇಕೆಂದು ಒಂದು ಉದ್ವೇಗ, ಅವರಿಗೂ 50 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆಂದು ಒಂದು ಉದ್ವೇಗ—ಇವಿಷ್ಟೂ ಇಂದು ಕಾಣಬರುತ್ತಿದೆಯೇ ಹೊರತು ಇನ್ನೇನೂ ಇಲ್ಲ. ಹಣದ ಖೋತಾ ಒಂದು ಕಾಣಬರುತ್ತಿದೆ; ಜೊತೆಗೆ ಬರವಣಿಗೆಯ ಖೋತಾ ಕೂಡ ಆಗಿರುವಂತಿದೆ. ಹಿಂದೆ ಬಡ್ಜೆಟ್ಟುಗಳನ್ನು ತಯಾರಿಸುವುದರಲ್ಲಿ ಒಂದೊಂದು ಇಲಾಖೆಯನ್ನೂ ತೆಗೆದುಕೊಂಡು ದೊಡ್ಡ ದೊಡ್ಡ ಹುದ್ದೆಗಳೆಷ್ಟು, ಸಣ್ಣ ಸಣ್ಣ ಹುದ್ದೆಗಳೆಷ್ಟು, ಅವರ ಸಂಬಳಗಳೇನು, ಎಂದೆಲ್ಲಾ ಪ್ರತಿಯೊಂದು ಖರ್ಚನ್ನೂ ಬಡ್ಜೆಟ್ಟಿನಲ್ಲಿ ಕಾಣಿಸುತ್ತಿದ್ದರು. ಇಂದು ಅದನ್ನೆಲ್ಲಾ ಖೋತಾ ಮಾಡಿದ್ದಾರೆ. ಆ ಬರವಣಿಗೆಯೇ ಬೇಡವೆಂದು ಹೇಳಿ ಒಂದು ಇಲಾಖೆಗೆ ಒಟ್ಟು ಎಷ್ಟು ಹಣ ಬೇಕಾಗುತ್ತದೆ ಎಂದು ತಿಳಿಸಿದ್ದಾರೆ ಅಷ್ಟೆ.

ದೇಶದ ಉತ್ಪತ್ತಿಯಲ್ಲಿ ಮಾತ್ರವೇ ಖೋತಾ ಆಗಿಲ್ಲ. ಬಡ್ಜೆಟ್ ತಯಾರಿಕೆಯ ಬರವಣಿಗೆಯಲ್ಲಿ ಕೂಡ ಖೋತಾ ಆಗಿದೆ. ಹೀಗೆ ಬಡ್ಜೆಟ್ಟನ್ನು ತಯಾರಿಸುವುದರಲ್ಲಿ ಈ ಮಂತ್ರಿ ಮಂಡಲದವರು ಏಕಿಷ್ಟು ತಾತ್ಸಾರ ಮನೋಭಾವ ತಾಳಿದ್ದಾರೆಂಬುದೇ ನನಗೆ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು.—ಇನ್ನು ಸಾಕು. ತಾವು ತಮ್ಮ ಭಾಷಣವನ್ನು ಬಂದ್ ಮಾಡಿ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಆರ್ಥಿಕ ಸಚಿವರು ಯಾವ ಒಂದು ಹೊಸ ತೆರಿಗೆಯನ್ನೂ ಹಾಕದಂತೆ ಈ ಬಡ್ಜೆಟ್ಟನ್ನು ತಯಾರಿಸಿದ್ದೇವೆಂದು ಹೇಳಿದ್ದಾರೆ. ಆದರೆ 1949-50 ರಲ್ಲಿ ದೇಶದ ಖರ್ಚು ವೆಚ್ಚಗಳಿಗಾಗಿ ಹತ್ತು ಕೋಟಿ ರೂಪಾಯಿಗಳು ಮಾತ್ರ ಖರ್ಚಾಗುತ್ತಿತ್ತು. ಆದರೆ ಈ ದಿವಸ ಆ ವೆಚ್ಚ 60 ಕೋಟಿಗೇರಿದೆ. ಏನು ಒಂದು ವಿಷ ಈ ದಿವಸ ಹೀಗೆ ಏರಿದೆಯೋ ಇದರಲ್ಲಿ ಅರ್ಧ ಭಾಗಕ್ಕೂ ಮೇಲ್ಪಟ್ಟು ಖರ್ಚು ದೇಶದ ಜನತೆಗಾಗಿ ಆಗದೆ, ಅದು ಕೇವಲ ನೌಕರರ ಸಂಬಳ ಸಾರಿಗೆಗಾಗಿ ಖರ್ಚಾಗುತ್ತಿದೆ. ಸುಮಾರು ಎರಡು ಮೂರು ಕೋಟಿಗಳಿಗೂ ಮೀರಿದಷ್ಟು ಹಣವನ್ನು ಸರ್ಕಾರದಲ್ಲಿರತಕ್ಕ ಭಾರಿ ಭಾರಿ ಅಧಿಕಾರಿಗಳಿಗೆ ಕೊಡಲಾಗುತ್ತಿದೆ. ಸಣ್ಣಪುಟ್ಟ ನೌಕರರುಗಳಿಗೇನೂ ಅನುಕೂಲವಿಲ್ಲ. ಸಂಬಳ ಸಾರಿಗೆಯ ಅನುಕೂಲವೆಲ್ಲ ಭಾರಿ ಭಾರಿ ನೌಕರರುಗಳಿಗೆ ಮಾತ್ರ. ಆದರೆ ಹೀಗೆ ಕೇವಲ ಸಂಬಳ ಸಾರಿಗೆಗೋಸ್ಕರವಾಗಿ ಇಷ್ಟು ಹಣ ಖರ್ಚಾಗುತ್ತಿರುವುದು ನ್ಯಾಯವಾದುದೇ ಅಥವಾ ಅಲ್ಲವೇ ಎಂಬುದನ್ನು ಕಂಡು ಹಿಡಿಯಲು ಒಬ್ಬ ಆರ್ಥಿಕ ತಜ್ಞರ ಸಹಾಯ ಬೇಕಾಗಿದೆಯೆಂದು ಮಾನ್ಯ ಮಂತ್ರಿಗಳು ಹೇಳುತ್ತಿರುವುದರಿಂದ ನಮ್ಮ ಮಾನ್ಯ ಮುಖ್ಯ ಮಂತ್ರಿಗಳಿಗೆ ಈ ಏಕನಾಮಿಯನ್ನು ಜಾರಿಗೆ ತರುವ ವಿಚಾರದಲ್ಲಿ ಇವರಿಗೂ ಸ್ವಲ್ಪ ಅನುಭವ ಕಡಮೆ ಎಂತಲೇ ನಾವು ಅರ್ಥಮಾಡಿಕೊಳ್ಳಬೇಕಾಗಿದೆ.

*Sri MAHMOOD SHARIFF (Broadway).—Mr. Speaker, Sir, the speech of the Finance Minister, a printed copy of which has been made available to us, gives a picture of the financial condition of the State during the year 1957-58. As observed by him, it was difficult for the Government to give details of these estimates exactly as they are by reason of the integration of five different areas with different systems of taxation laws. Nevertheless, he has given an idea of the anticipated income and expenditure. We can well imagine the difficulties which the Government was put under on account of the emergence of a new State with vast territories and it is gratifying to see that all figures have revolved round the central idea which was pointed out by the Governor in his speech delivered by him the other day to the joint session of the Assembly and the Council. His Highness has given a summary of the different development schemes and has also pointed out the different programmes

(SRI MAHMOOD SHARIFF)

and the policy which the Government have placed before them in order to further ameliorate the condition of the pepole. The key-note of the whole speech consists in the Governor having drawn our attention to the goal which the Centre as well as the State have kept before them, namely, re-orientation of their ideas of the State upon which it is based. The policy of *laissez faire* has become outmoded. Therefore it is time that all persons who are placed in authority should see that every person irrespective of the status lives a comfortable and fuller life. It is with this idea that the Central Government launched upou the First Five-Year Plan which has resulted in substantial gains to the society. Regard being had to the fact that ours is a vast sub-continent, we have got a legacy of a very unsatisfactory condition with regard to certain factors, and it is necessary that we shall have to continue our efforts in order to further ameliorate the condition of the people.

So far as the First Five-Year Plan is concerned, as the Hon'ble Minister has pointed out, the national income has increased by 18 per cent. Although we have done much to improve the condition of the people and also progressed in different avenues of life, yet I must say that we are still on the fringes of things. Therefore it is necessary for us to put our shoulders to the wheel and see that the goal which we have got berore us comes into fruition.

In this connection I wish to say that we have got to see whether the Budget estimates that have been presented to us are such as would further the goal before us or whether they are going to retard or quicken the pace. We have got to see these from an examination of the anticipated receipts and expenditure. Government have been trying to see that the goal just now referred to is implemented. Although I know that there is a gap of eight crores between the income and expenditure, regard being had to the scope of the problems before us, I do not think it is going to be too much. I therefore appeal to all the members on the floor of this House, whether they belong to the Congress Party or Opposition, to see without any differences that the goal which we have got before us, the programme we have before us, is fulfilled. In this connection I cannot refrain from pointing out two or three things which are of importance. Firstly, regarding the constituency which I am representing, namely, Civil Area, I would like to mention that so far as the aspects of economic and commercial importance are concerned, it is put back. There is no need for me to say that once upon a time, at least five years back, Civil Area was a very important centre of trade and commerce and other avenues of life. Unfortunately what has happened now is, Civil Area has lost its importance. When compared to the City with the same population, its importance is being lessened. Therefore something has to be done. Some industry has got to be started in this area. I, therefore, urge upon the attention of the Government that they should start some industries in this area so that it may regain the prominent place it once occupied.

One more thing I want to add is that hides and skins are an important trade so far as the people of Cantonment are concerned. The Cantonment used to export nearly eight crores worth of leather and there were about 60 to 70 tanneries. Now, the number has dwindled down to seven and consequently a large number of people has been thrown out of employment.

MR. SPEAKER.—We will now rise for the recess and the Hon'ble Member may resume his speech after the recess.

The House adjourned at two Minutes past Ten of the Clock and re-assembled at Thirty Minutes past Ten of the Clock.

[MR. SPEAKER in the Chair].

SRI MAHMOOD SHARIFF.—Sir, I was speaking about the Civil Area and I was saying that the conditions there have deteriorated considerably. All of us know that once upon a time it

was a military station and on this account it used to provide the wherewithal required for the life of the people living over there. But subsequent to the removal of the military from that place, the people have become very very poor. In this connection, I was referring to the leather trade and I was submitting, Sir, that it was one of the topmost industries so far as the Civil Area was concerned. There were about 70 to 80 tanneries working there, but now, on account of the withdrawal of the several concessions necessary for the growth of this industry, it has also deteriorated. The pepole of this area were exporting nearly rupees seven to eight crores worth of leather and it was really a very good source of income for these people. Rs. 8 lakhs have been provided in the Second Five-Year Plan for the improvement of this particular industry and I request the Member in charge to see that a sufficiently big slice is allotted for the improvement of the leather industry so that it may be rehabilitated. I also request that, besides this industry, other industries should be started there so that the people will be able to lead a happy and contented life.

In this connection, I wish to refer to the Mysore City. As members are aware, the people throughout the country are drawn towards it on account of its beauty, salubrious climate and other aspects. Unfortunately, its condition is dwindling day-by-day. Being a former capital of the Mysore State, I think it is very necessary that steps should be taken to see that its condition is improved. In this connection, I would urge upon the attention of the Government that the Satyamangalam survey should be completed in order to bring about the connection between Satyamangalam and Mysore City. I feel that if this is done, the conditions in Mysore City will improve.

Sir, I take this opportunity of submitting the case of minorities. Some of the gentlemen in the Opposition were asking for safeguards for the minorities. I do submit that things are not being done properly so far as the minorities are concerned. I am not accusing anybody. One of the Hon'ble Members referred to the observations of Mahatma Gandhi, namely, that no State would be sufficiently happy unless the interests of minorities were safeguarded. There are several lakhs of Muslims in this State and regard being had to the enormity of their population, I submit that such treatment should be meted out to them as will satisfy them.

Now, I want to refer to the Mysore High Court. Large parts of Hyderabad have been integrated with Mysore State and there are about 200 to 300 files in Urdu and still there no Urdu-knowing Judge appointed for the disposal of these cases. It is very necessary that this matter should be considered very seriously.

Again, so far as the holidays are concerned, there is vast disparity between the holidays granted by the Central Government and the State Government. The Muslims of this State have been given only one holiday and that is for Moharram. They do not get holidays even for Ramzan, Id and such other important religious functions. Why should they be denied the holidays which the Central Government is granting ?

As the Muslims were economically backward and numerically small, they deserved to get freeships and they were enjoying them from primary classes upto university classes. This was a very important concession as it helped them to educate themselves. This concession has been taken away now as a result of which they are greatly handicapped and their education is suffering.

Then, I come to the Text-Book Committee. Here, Urdu, Arabic and Persian languages were current and in spite of that fact there is not a single Urdu-knowing person on this committee to suggest improvements and see that they are carried out. This matter has been repeatedly pressed upon the attention of the Government for the last 6 or 7 years, but I am sorry to say that nothing has been done in this matter. I, therefore, request the Government to take up this matter as early as possible.

(SRI MAHMOOD SHARIFF)

Another thing I wanted to bring to your notice is this. Now, Hyderabad is quite a different area. We have been brought into a unit and we have become one. But I have to say with great regret that still they are not near one another. In order to bring about the integration of the thoughts and emotions of the people, free passes must be given to the members of this House just as it is being done by the Central Government to the members of the Parliament. They have been provided with free railway passes to go wherever they want to go so that they can have first hand information of what is happening in various places and suggest measures for the improvement of the condition. Government may say that railways do not come under the State Government and so they cannot issue free passes on the railways. But I would say that even if Government have to incur some expenditure for the issue of free passes on railways to the members of the Legislature, that expenditure would be well spent because that would help to bring the people of the different areas near each other.

Then, another point that I want to bring to your notice is regarding wakf lands. Lots of lands have been donated by people. If one were to calculate their value, that would come to crores of rupees. Unfortunately, there is no proper Board to control them and to see that the income from these are well spent for the purpose for which they have been donated. I would urge upon Government to see that these moneys are well spent.

Then, there is another point which I want to bring to your notice.

Mr. SPEAKER.—The time of the Hon'ble Member is up.

ಶ್ರೀ ಎಚ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಸ್ವಾಮಿ, 1957-58ನೇ ಸಾಲಿನ ಆಯವ್ಯಯ ಪಟ್ಟಿಯ ಮೇಲೆ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಸರ್ಕಾರದ ಹಣ ಕಾಸಿನ ಮಂತ್ರಿಗಳು ನಮ್ಮ ಮುಂದೆ ಇಟ್ಟಿರತಕ್ಕ ಆಯವ್ಯಯ ಪಟ್ಟಿಯನ್ನು ನೋಡುವುದಾದರೆ ಅದು ಕೊರತೆಯ ಬಡ್ಜೆಟ್ ಆಗಿದೆ. ಮಾನ್ಯ ಮಂತ್ರಿಗಳು ಈ ಡೆಫಿಸಿಟ್ ಬಡ್ಜೆಟ್ಟನ್ನು ಹೇಗೆ ಸರಿತೂಗಿಸುವುದು ಎಂದು ತಿಳಿಸಿಲ್ಲ. ಕಾಂಗ್ರೆಸ್ ಸರ್ಕಾರ ಆಡಳಿತಕ್ಕೆ ಬಂದ ಮೇಲೆ ಪ್ರತಿ ಸಂಸ್ಥಾನದಲ್ಲಿಯೂ ಡಿಫೆಸಿಟ್ ಬಡ್ಜೆಟ್ಟನ್ನು ತೋರಿಸುತ್ತಿದ್ದಾರೆ. ಈ ರೀತಿ ಡಿಫಿಸಿಟ್ ಬಡ್ಜೆಟ್ ಆಗಲು ಕಾರಣವೇನೆಂಬುದನ್ನು ನಮ್ಮಗಳ ಮುಂದೆ ಇಟ್ಟಿಲ್ಲ. ಇದರಲ್ಲಿ ತೋರಿಸಿರುವ ಎಂಟು ಕೋಟಿ ಚಿಲ್ಲರೆ ರೂಪಾಯಿಗಳನ್ನು ಹೇಗೆ ಸರಿಪಡಿಸುವುದು ಯಾವಯಾವ ಬಾಬಿನಲ್ಲಿ ಖರ್ಚನ್ನು ಕಡಮೆ ಮಾಡ ಬಹುದೆಂಬುದನ್ನು ನಮೂದು ಮಾಡಬೇಕಾಗಿತ್ತು. ಆ ರೀತಿಯಾಗಿ ಮಾಡಿಲ್ಲ. ಅಲ್ಲದೆ ಜನಗಳ ಮೇಲೆ ಹೆಚ್ಚಿನ ಭಾರ ಬೀಳದೆ ಬಡ್ಜೆಟ್ಟಿನಲ್ಲಿ ತೋರಿಸಿರುವ ಡಿಫಿಸಿಟ್ಟನ್ನು ತೂಗಿಸುವುದಕ್ಕೆ ಅವಕಾಶವಿದೆಯೇ ಎನ್ನುವುದು ನಮ್ಮಗಳಿಗೆ ಕಾಣಿಸುತ್ತಿಲ್ಲ. ನಾವು ಈ ಬಡ್ಜೆಟ್ಟಿನ ಮೇಲೆ ಟೀಕಿಸುವುದಾದರೆ, ಅಥವಾ ಅಂಕಿ ಅಂಶಗಳನ್ನು ನೋಡುವುದಾದರೆ, ಇದರಲ್ಲಿ ಹಿಂದಿನ ವರ್ಷದ ಬಡ್ಜೆಟ್ಟಿನ ಪ್ರಕಾರ ನಡೆದಿರುವ ಕೆಲಸ ಕಾರ್ಯಗಳ ಬಗ್ಗೆ ಏನನ್ನೂ ಕೊಟ್ಟಿಲ್ಲ. ಮುಂದೆ 1958-59ನೆ ಸಾಲಿನ ಬಡ್ಜೆಟ್ಟನ್ನು ಮಂಡಿಸುವಾಗ ಈ ವರ್ಷದ ಬಡ್ಜೆಟ್ಟಿನಲ್ಲಿ ನಮೂದಿಸಿರತಕ್ಕ, ಆಗಿರತಕ್ಕ ಕೆಲಸಕಾರ್ಯಗಳ ಬಗ್ಗೆ ಒಂದು ವರದಿಯನ್ನು ಈ ಸಭೆಯ ಮುಂದೆ ಇಟ್ಟರೆ ನಿಜವಾಗಿಯೂ ಈ ಮಂತ್ರಿಮಂಡಲ ಏನು ಕೆಲಸ ಮಾಡಿದೆ ಎನ್ನುವುದನ್ನು ನಾವು ತಿಳಿದು ಕೊಳ್ಳಬಹುದು.

ಮುಖ್ಯವಾಗಿ ಇಲ್ಲಿಗೆ ಆರಿಸಿ ಬಂದಿರತಕ್ಕ ಸದಸ್ಯರಲ್ಲಿ ನೂರಕ್ಕೆ ತೊಂಭತ್ತು ಭಾಗ ಹಳ್ಳಿಗಾಡಿನ ಪ್ರದೇಶಗಳಿಂದ ಬಂದಿರುವವರು. ಹಳ್ಳಿಗಾಡಿನಿಂದ ಎಂದರೆ ಅವಿದ್ಯಾವಂತರಿಂದ, ಬಡ ರೈತರಿಂದ ಆರಿಸಿ ಬಂದಿರುವವರು. ನಾವುಗಳು ಇಲ್ಲಿ ಬಂದು ಬಡ ರೈತರಿಗೆ ಮತ್ತು ಇತರರಿಗೆ ಅನುಕೂಲವಾಗತಕ್ಕಂಥ ಕಾರ್ಯಕಲಾಪಗಳನ್ನು ಸರ್ಕಾರದ ಮುಖಾಂತರ ಮಾಡಿಸಬಹುದು, ಅವರಿಗೆ ಅನುಕೂಲ ಮಾಡಬಹುದು ಎನ್ನುವುದನ್ನು ಜನಗಳು ತಿಳಿದುಕೊಂಡಿದ್ದಾರೆ. ಮಂತ್ರಿಗಳಾದಿಯಾಗಿ ನಾವೆಲ್ಲರೂ ಇಲ್ಲಿಗೆ ಬಂದಿರುವುದು ಹಳ್ಳಿಯವರ ಓಟಿನ ದೆಸೆಯಿಂದ ನಮ್ಮ ಮುಂದೆ ಇರುವ ಬಡ್ಜೆಟ್ಟನ್ನು ನೋಡಿದರೆ ಹಳ್ಳಿಗಾಡಿನವರ ಅಭಿವೃದ್ಧಿಗೆ ಸಾಕಷ್ಟು ಹಣವನ್ನೊದಗಿಸಿಲ್ಲ. ನೌಕರರು ಸ್ಟ್ರೈಕ್ ಮಾಡುತ್ತೇವೆಂದರೆ ಅವರಿಗೆ ಅನುಕೂಲ ಮಾಡುತ್ತೀರಿ, ಜಾಡಮಾಲಿಗಳು ಸ್ಟ್ರೈಕ್ ಮಾಡುತ್ತೇವೆಂದರೆ ಅವರಿಗೂ ಅನುಕೂಲ ಮಾಡಿಕೊಡುತ್ತೀರಿ ಆದರೆ ರೈತರ ಪುರೋಭಿವೃದ್ಧಿಗೆ ಬೇಕಾದ ಯಾವ ಅನುಕೂಲಗಳನ್ನೂ ಮಾಡುತ್ತಿಲ್ಲ. ಬಡ್ಜೆಟ್ಟಿನಲ್ಲಿ ತೋರಿಸಿರುವ ಹಣದಲ್ಲಿ ರೈತರಿಗೆ ಎಷ್ಟು ಹಣ ನೇರವಾಗಿ ಸಂದಾಯವಾಗುತ್ತದೆಂದರೆ, ಶೇಕಡ ಹತ್ತರಷ್ಟು ಸಹ ಸಂದಾಯವಾಗುತ್ತಿಲ್ಲ. ಬೇರೆಬೇರೆ ಖರ್ಚು ಬಾಬುಗಳಲ್ಲಿ ಹಣ ಖರ್ಚಾಗುತ್ತಿದೆಯೇ ವಿನಾ ನಿಜವಾಗಿಯೂ ಬಡಜನರಿಗೆ ಏನೂ ಅನುಕೂಲ ದೊರೆಯುತ್ತಿಲ್ಲ.

ರೈತರು ಈಗಾಗಲೇ ಸಾಲಸೋಲಗಳ ಹೊರೆಯಿಂದ ಮುಳುಗಿ ಹೋಗುತ್ತಿದ್ದಾರೆ. ಹಿಂದೆ ಕಾಂಗ್ರೆಸ್‌ನವರು, "ಕಾಂಗ್ರೆಸ್ ಸರಕಾರ ಬಂದ ಮೇಲೆ ನಿಮ್ಮಗಳ ಜೀವನ ಮಟ್ಟವನ್ನು ಜಾಸ್ತಿ ಮಾಡುತ್ತೇವೆ" ಎಂಬುದಾಗಿ ವೇದಿಕೆಗಳ ಮೇಲೆ ಭಾಷಣಗಳನ್ನು ಮಾಡುತ್ತಿದ್ದರು. ಇವೊತ್ತಿನ ದಿವಸ ಅದೇ ಪಕ್ಷದವರು ಅಧಿಕಾರದಲ್ಲಿದ್ದು ಅದೇ ಜನರೇ ಮಂತ್ರಿಗಳಾಗಿದ್ದರೂ, ರೈತರ ವಿಷಯದಲ್ಲಿ ಏನು ಮಾಡಬೇಕೆಂಬುದನ್ನು ಮರೆತಿದ್ದಾರೆ ಎಂಬುದನ್ನು ಬಹಳ ವಿಷಾದದಿಂದ ಅವರ ಗಮನಕ್ಕೆ ತರಬೇಕಾಗಿದೆ. ರೈತರ ವಿಷಯದಲ್ಲಿ, ಅವರಿಗಿರುವ ಸಾಲಸೋಲಗಳ ವಿಷಯದಲ್ಲಿ ಒಂದು ಸರ್ವೆ ಮಾಡಿಸಿ ಅವರಿಗಿರತಕ್ಕ ಸಾಲಸೋಲಗಳನ್ನು ಐದು ಅಥವಾ ಹತ್ತು ವರ್ಷ

ಗಳಲ್ಲಿ ತೀರಿಸುವ ಹಾಗೆ ಒಂದು ಯೋಜನೆಯನ್ನು ಸರ್ಕಾರದವರು ಕೂಡಲೇ ತಯಾರು ಮಾಡಿ ಅವರಿಗಿರುವ ಸಾಲಗಳನ್ನು ತೀರಿಸುವ ವ್ಯವಸ್ಥೆಯನ್ನು ಮಾಡಬೇಕು.

ಜಮೀನುಗಳನ್ನು ಉಳುಮೆ ಮಾಡತಕ್ಕ ವಿಷಯದಲ್ಲಿ ಹೇಳಬೇಕಾದರೆ, ಈಗ ಮೂರು ನಾಲ್ಕು ವರ್ಷಗಳಿಂದಲೂ ಕೂಡ ಟ್ರಾಕ್ಟರುಗಳನ್ನು ಅನೇಕರು ಉಪಯೋಗಿಸುತ್ತಿದ್ದಾರೆ. ಮಾನ್ಯ ಸದಸ್ಯರ ಪೈಕಿ ಅನೇಕ ದೊಡ್ಡ ಜಮೀನ್ದಾರರಿದ್ದಾರೆ. ಅವರು ನೇಗಿಲಿನಿಂದ ಹೆಚ್ಚು ಜಮೀನು ಇರತಕ್ಕವರು ಉಳುಮೆ ಮಾಡತಕ್ಕ ಪದ್ಧತಿಯನ್ನು ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಆದ್ದರಿಂದ ದೊಡ್ಡ ವ್ಯವಸಾಯಗಾರರಿಗೆ ಟ್ರಾಕ್ಟರುಗಳು ಅತ್ಯಾವಶ್ಯಕ. ಈ ಟ್ರಾಕ್ಟರುಗಳಿಗೆ ಹಿಂದೆ ದಿನ ಒಂದಕ್ಕೆ ಹನ್ನೆರಡು ರೂಪಾಯಿಗಳ ಬಾಡಿಗೆ ಇತ್ತು. ಅದನ್ನು ಇತ್ತೀಚೆಗೆ ಹದಿನೆಂಟು ರೂಪಾಯಿ ಮಾಡಿದ್ದಾರೆ. ಟ್ರಾಕ್ಟರುಗಳ ಮೇಲಿನ ಬಾಡಿಗೆಯನ್ನು ಹದಿನೆಂಟು ರೂಪಾಯಿಗಳಿಂದ ಹನ್ನೆರಡು ರೂಪಾಯಿಗಳಿಗೆ ಇಳಿಸಿ ರೈತರಿಗೆ ವ್ಯವಸಾಯಕ್ಕೆ ಸಾಕಷ್ಟು ಅನುಕೂಲ ಮಾಡಿಕೊಡಬೇಕೆಂದು ನಾನು ಈ ಮೂಲಕ ಸಲಹೆ ಮಾಡುತ್ತೇನೆ.

ಸಬ್ಸಿಡಿ ವಿಷಯದಲ್ಲಿ ಹೇಳುವುದಾದರೆ ಈ ಬಡ್ಜೆಟ್ಟಿನಲ್ಲಿ ಅಂಕಿ ಅಂಶಗಳಿಂದ ಏನೂ ಕಾಣುತ್ತಿಲ್ಲ. ವರ್ಷೇ ವರ್ಷೇ ಬಹಳ ಕಡಮೆಯಾಗುತ್ತಿದೆ. ಮುಂಚೆ ಒಂದು ಸಾವಿರ ರೂಪಾಯಿಗಳ ಸಬ್ಸಿಡಿ ಕೊಡುತ್ತಿದ್ದರು. ಇವೊತ್ತಿನ ದಿವಸ 250 ರೂಪಾಯಿಗಳನ್ನು ಮಾತ್ರ ಕೊಡುತ್ತಿದ್ದಾರೆ. ಈ ಹಣವನ್ನು ಕೊಡುವಾಗಲೂ ಸಹ, ಕೆಲಸ ಕಾರ್ಯಗಳೆಲ್ಲ ಪೂರ್ತಿಯಾದ ಮೇಲೆ ಕೊಡಬೇಕೆಂದು ಮಾಡಿದ್ದಾರೆ. ಈಗ ಕೊಡುವ 250 ರೂಪಾಯಿಗಳ ಸಬ್ಸಿಡಿ ಸಾಲುವುದಿಲ್ಲವಾದ್ದರಿಂದ, ಈ ಮೊಬಲಗನ್ನು ಮುಂಚಿತವಾಗಿಯೇ ಒಂದು ಸಾವಿರ ರೂಪಾಯಿಗಳಿಗೆ, ಕಾಂಗ್ರೆಸ್ ಸರ್ಕಾರದವರು ಕೂಡಲೆ ಏರಿಸುತ್ತಾರೆಂದು ನಾನು ನಂಬಿದ್ದೇನೆ.

ಇನ್ನು ಟ್ಯಾಕ್ಸೇಷನ್ ವಿಚಾರ. ಮಾನ್ಯ ಹಣಕಾಸಿನ ಮಂತ್ರಿಗಳು ನಮ್ಮ ಮುಂದೆ ಬಡ್ಜೆಟ್ಟನ್ನು ಇಡುವಾಗ ಜನರ ಮೇಲೆ ಯಾವ ತರಹ ತೆರಿಗೆಗಳನ್ನೂ ಹಾಕುವುದಿಲ್ಲವೆಂದು ಹೇಳಿದರು. ಅನಂತರ ಮಸೂದೆಗಳನ್ನು ನಮ್ಮಗಳ ಮುಂದೆ ಇಟ್ಟರು. ಇವುಗಳನ್ನು ನೋಡಿದರೆ ಪ್ರತಿನಿತ್ಯದ ಬಳಕೆಯ ವಸ್ತುಗಳ ಮೇಲೆ ತೆರಿಗೆ ಬೀಳುತ್ತದೆ! ಇದರ ಹೊರೆ ಹಳ್ಳಿಗಾಡಿನ ಸಾಮಾನ್ಯ ಪ್ರಜೆಯ ಮೇಲೆ, ರೈತರ ಮತ್ತು ಬಡವರ ಮೇಲೆ ಬೀಳುತ್ತದೆ. ತೆರಿಗೆಗಳನ್ನು ವಿಧಿಸತಕ್ಕ ಮಾರ್ಗ ಹೇಗಿದೆ ಎಂದರೆ ಒಂದು ಕಡೆ, ಇಂಡಿಯಾ ಸರ್ಕಾರದವರು ತೆರಿಗೆಗಳನ್ನು ಹಾಕುತ್ತಾರೆ, ಇನ್ನೊಂದು ಕಡೆ ಸಂಸ್ಥಾನ ಸರ್ಕಾರಗಳು ಹಾಕುತ್ತವೆ. ಈ ಎರಡು ತೆರಿಗೆಗಳೂ ಬಡವರ ಮೇಲೆ ಬೀಳುತ್ತವೆ, ಇದನ್ನು ಯಾವರೀತಿ solve ಮಾಡುತ್ತಾರೆನ್ನುವುದು ನನಗೆ ಅರ್ಥವಾಗುವುದಿಲ್ಲ. ಒಟ್ಟಿನಲ್ಲಿ ಎರಡು ರೀತಿಯ ತೆರಿಗೆಗಳು ಬೀಳುತ್ತವೆ. ಇದು ಸಾಮಾನ್ಯವಾಗಿ ಕೊಳ್ಳುವವರ ಮೇಲೆ ಮತ್ತು ಹಳ್ಳಿಗಾಡಿನ ರೈತರ ಮೇಲೆ ಬೀಳುತ್ತದೆಯೇ ವಿನಾ, ಹಣಕಾಸಿನ ಮಂತ್ರಿಗಳು ಹೇಳಿದ ಹಾಗೆ, ಈ ತೆರಿಗೆಗಳು ದೊಡ್ಡ ವ್ಯಾಪಾರಸ್ಥರುಗಳ ಮೇಲೆ ಬೀಳತಕ್ಕದ್ದು ಎಂಬ ವಾದದಲ್ಲಿ ತಿರುಳಿಲ್ಲ. ದೊಡ್ಡ ವ್ಯಾಪಾರಸ್ಥರ ಮೇಲೆ ಬೀಳುವ ಸೇಲ್ಸ್ ಟ್ಯಾಕ್ಸ್ ಏನಿದೆಯೋ ಅದೆಲ್ಲವನ್ನೂ ಒಟ್ಟಿನ ಮೇಲೆ ಅವರು ಕೊಳ್ಳುವವರ ಪದಾರ್ಥದ ಮೇಲೆ ಹಾಕುತ್ತಾರೆಯೋ ವಿನಾ ಅವರು ಕೊಡುವುದಿಲ್ಲ.

ಸಾಮಾನ್ಯವಾಗಿ ಎಲ್ಲರೂ ಉಪಯೋಗಿಸತಕ್ಕ ಪದಾರ್ಥಗಳ ಮೇಲೆ ತೆರಿಗೆ ಹಾಕಿರುವುದು ನ್ಯಾಯವಾದುದಲ್ಲ. ಮೆಣಸಿನಕಾಯಿ, ತೆಂಗಿನಕಾಯಿಗಳ ಮೇಲೆ ತೆರಿಗೆ ಹಾಕುತ್ತೇವೆಂದು ಮಂತ್ರಿಗಳು ಹೇಳುತ್ತಿದ್ದಾರೆ. ನೂರಕ್ಕೆ ತೊಂಭತ್ತೆಂಟರಷ್ಟು ಜನ ಬಡ ರೈತರು, ಕೂಲಿಕಾರರು ಆಗಿದ್ದಾರೆ. ಅನುಕೂಲಸ್ಥರು, ಹೆಚ್ಚು ಸಂಬಳ ಬರುವವರು ನಮ್ಮ ದೇಶದಲ್ಲಿ ಬಹಳ ಜನರು ಇರುವುದಿಲ್ಲ. ಆದಕಾರಣ ಬಡ ಜನರಿಗೆ ಅನ್ಯಾಯವಾಗದಂತೆ ಮಾಡಬೇಕು. ಟ್ಯಾಕ್ಸ್ ಹಾಕುವುದಕ್ಕೆ ಮುಂಚೆ ಈ ವಿಷಯವನ್ನು ಪರ್ಯಾಲೋಚಿಸುವುದಕ್ಕೆ ಒಂದು ಸಮಿತಿಯನ್ನು ನೇಮಿಸಬೇಕು. ಟಾಕ್ಸ್ ಹಾಕುವುದರಿಂದ ಸರ್ಕಾರಕ್ಕೆ ಆದಾಯ ಹೆಚ್ಚಾಗುತ್ತದೆ. ಆದರೆ ಅದರಿಂದ ಜನತೆಗೆ ಹೊರೆಯಾಗುವಂತಾದರೆ ಅದು ನ್ಯಾಯವಲ್ಲ.

ಯೂನಿವರ್ಸಿಟಿಯ ವಿಷಯದಲ್ಲಿ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಹಾಸನ ಜಿಲ್ಲೆಯಲ್ಲಿ ಫಸ್ಟ್ ಗ್ರೇಡ್ ಕಾಲೇಜು ಕೊಡಬೇಕೆಂದು ಕಳೆದ ಹತ್ತು ವರ್ಷಗಳಿಂದ ಕೇಳುತ್ತಿದ್ದೇವೆ. ಹಾಸನ ಡಿಸ್ಟ್ರಿಕ್ಟಿಗೆ ಫಸ್ಟ್ ಗ್ರೇಡ್ ಕಾಲೇಜನ್ನು ತರಬೇಕೆಂದು ಮುಖ್ಯ ಮಂತ್ರಿಗಳಿಗೆ, ವಿದ್ಯಾಶಾಖೆಯ ಮಂತ್ರಿಗಳಿಗೆ, ಯೂನಿವರ್ಸಿಟಿ ವೈಸ್ ಚಾನ್ಸಲರಿಗೆ ಅನೇಕ ಸಾರಿ ನಾವು ವಿನಂತಿ ಮಾಡಿಕೊಂಡಿದ್ದೇವೆ. ಈ ಮೂರು ವರ್ಷದ ಡಿಗ್ರಿ ಕೋರ್ಸ್ ತರತಕ್ಕಂಥ ಕಾಲದಲ್ಲಿ ಈಗಿರುವ ಇಂಟರ್‌ಮೀಡಿಯಟ್ ಕಾಲೇಜನ್ನು ಯೂನಿವರ್ಸಿಟಿಯವರು ಫಸ್ಟ್ ಗ್ರೇಡ್ ಕಾಲೇಜನ್ನಾಗಿ ಮಾಡಬೇಕಾಗುತ್ತದೆಂದು ಕಾಣುತ್ತದೆ. ಏಕೆಂದರೆ, ಹಾಸನ ಡಿಸ್ಟ್ರಿಕ್ಟಿನಲ್ಲಿ ವಿದ್ಯಾರ್ಥಿಗಳು ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಕಾಲೇಜು ಶಿಕ್ಷಣ ಪಡೆಯುವುದಕ್ಕೆ ಹೆಣ್ಣು ಮಕ್ಕಳಿಗೆ ಇರುವ ಅವಕಾಶವನ್ನು ಕಿತ್ತುಕೊಂಡ ಹಾಗೆ ಆಗುತ್ತದೆ. ಈ ಅಂಶವನ್ನು ವಿದ್ಯಾಮಂತ್ರಿಗಳ ಮತ್ತು ಮುಖ್ಯಮಂತ್ರಿಗಳ ಗಮನಕ್ಕೆ ನಾನು ತರುತ್ತೇನೆ. ಆಡಳಿತದ ವಿಷಯದಲ್ಲಿ ಹೆಚ್ಚಿನ ಅಧಿಕಾರವೇನೋ ಯೂನಿವರ್ಸಿಟಿಗೆ ಇದೆ. ಆದರೆ ಕೂಡಲೇ ಹಾಸನ ಡಿಸ್ಟ್ರಿಕ್ಟಿಗೆ ಫಸ್ಟ್ ಗ್ರೇಡ್ ಕಾಲೇಜು ಪ್ರಾರಂಭಿಸುವಂತೆ ಯೂನಿವರ್ಸಿಟಿ ವೈಸ್ ಚಾನ್ಸಲರವರ ಗಮನಕ್ಕೆ ತರಬೇಕೆಂದು ನಾನು ತಮ್ಮನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಇಷ್ಟು ಗ್ರಾಂಟು ಕೊಡಬೇಕೆಂದು ಹೇಳುತ್ತಾರೆ. ಅನುಕೂಲಸ್ಥರಾದವರು ಮುಂದೆ ಬಂದು ಧನ ಸಹಾಯ ಮಾಡಿದರೆ ಕಾಲೇಜನ್ನು ಗ್ರಾಂಟುಮಾಡಬಹುದು ಎಂದು ಹೇಳಿದರೆ, ಧನ ಸಹಾಯ ಮಾಡಲು ಶಕ್ತಿ ಇಲ್ಲದೇ ಇದ್ದವರ ಕಡೆ ವಿದ್ಯಾಭ್ಯಾಸದ ಸೌಕರ್ಯವನ್ನು ಮೊಟಕು ಮಾಡುತ್ತೇವೆಂದು ಹೇಳುವುದು ನ್ಯಾಯವಾದುದಲ್ಲ. ಎಲ್ಲರಿಗೂ ಸಮಾನವಾಗಿ ವಿದ್ಯಾಭ್ಯಾಸ ಆಗುವಂತೆ ಮಾಡಬೇಕು.

ನಮ್ಮ ಹೊಸ ಮೈಸೂರು ರಾಜ್ಯದಲ್ಲಿ 18,000 ಗ್ರಾಮ ಪಂಚಾಯತಿಗಳು ಇವೆ. ಈಗಾಗಲೇ 1957ನೇ ಇಸವಿಯ ಗ್ರಾಮ ಪಂಚಾಯತಿಗಳ ಬಗ್ಗೆ ಇರುವ ಆಕ್ಟ ಮಾಡಿದ್ದಾದರೂ ಅದರ ಜೊತೆಗೆ ರೂಲ್ಸ್ ಸಹ ಮಾಡಬೇಕಾಗಿತ್ತು. ರೂಲ್ಸ್ ಜಾರಿಗೆ ಬಾರದೆ ಇದ್ದುದರಿಂದ ತೊಂದರೆಯಾಗುತ್ತಿದೆ. ಆದಕಾರಣ ಗ್ರಾಮಪಂಚಾಯತಿಗಳ ಬಗ್ಗೆ ಇರುವ ರೂಲ್ಸುಗಳನ್ನು ತೀವ್ರ ಮಾಡುತ್ತಾರೆಂದು ನಾನು ನಂಬಿದ್ದೇನೆ. ಹಳ್ಳಿಗಳಲ್ಲಿ ನೀರು ಸರಬರಾಯಿ ವಿದ್ಯುಚ್ಛಕ್ತಿ ಮುಂತಾದ ಅನುಕೂಲಗಳನ್ನು ಒದಗಿಸಿ ಕೊಡಬೇಕಾಗುತ್ತದೆ. ಆದರೆ ರೂಲ್ಸ್ ಇಲ್ಲದೇ ಇರುವುದರ ಮೂಲಕ ವಾಟರ ಟ್ಯಾಕ್ಸ್ ಹಾಕುವುದಕ್ಕೆ ಗ್ರಾಮ ಪಂಚಾಯತಿ

(ಶ್ರೀ ಎಚ್. ಜಿ. ನರಸಿಂಹೇಗೌಡ)

ಕಾನೂನಿನಲ್ಲಿ ಅವಕಾಶವಿಲ್ಲ. ಈ ಅವಕಾಶವನ್ನು ಒದಗಿಸಿ ಕೊಡುವಂತೆ ಮಾಡಬೇಕು.

ಕಾಂಗ್ರೆಸ್ ಸರ್ಕಾರವು 1947ರಲ್ಲಿ ಅಧಿಕಾರಕ್ಕೆ ಬರುವ ಮುಂಚೆ, ಕೋಮುವಾರು ಭಾವನೆ ಇರಕೂಡದೆಂದು ಕಾಂಗ್ರೆಸ್ಸು ಸದಸ್ಯರೂ ಹೇಳುತ್ತಿದ್ದರು. ಯಾಕೆಂದರೆ ಕೋಮುವಾರು ಭಾವನೆಯಿಂದ ದೇಶವು ಹಾಳಾಗುತ್ತದೆ. ಆದರೆ ಕಾಂಗ್ರೆಸ್ ಸರ್ಕಾರವು ಅಧಿಕಾರಕ್ಕೆ ಬಂದ ನಂತರ ಏನು ಆಗಿದೆ ಎಂಬುದನ್ನು ಹೇಳುವದಾದರೆ ಸುಮಾರು ಒಂದು ಘಂಟೆ ಕಾಲ ಬೇಕಾಗಬಹುದು. ಈಗ ಅಷ್ಟು ಕಾಲಾವಕಾಶ ನನಗೆ ಇಲ್ಲದೇ ಇರುವ ಮೂಲಕ ಬಹು ಸೂಕ್ಷ್ಮವಾಗಿ ಹೇಳುತ್ತೇನೆ. ಇತ್ತೀಚೆಗೆ ಮೈಸೂರ ರಾಜ್ಯದಲ್ಲಿ ಕೋಮುವಾರು ಭಾವನೆ ವಿಪರೀತವಾಗಿ ಬೆಳೆದುಕೊಂಡು ಬಂದಿದೆ. ಇದಲ್ಲದೆ ಕಾಂಗ್ರೆಸ್ ಆಡಳಿತೆಯಲ್ಲಿ ಪ್ರತಿಯೊಬ್ಬ ವ್ಯಕ್ತಿಯಲ್ಲಿ ಈ ಭಾವನೆ ಇರುವುದನ್ನು ನೋಡಿದರೆ ನಮಗೆ ಬಹಳ ನೋವಾಗುತ್ತಿದೆ. ದೇಶದ ಹಿತದೃಷ್ಟಿಯಿಂದ ಸಾಮಾನ್ಯ ಜನತೆಯ ಹಿತದೃಷ್ಟಿಯಿಂದ ಯಾವ ಕೋಮುವಾರು ಭಾವನೆಯೂ ಇರಕೂಡದು, ಇಂಥ ಭಾವನೆಯಿರುವವರು ಯಾರೇ ಇರಲಿ ಅಂಥವರಿಗೆ ಆಡಳಿತದಲ್ಲಿ ಸ್ಥಾನ ಮಾನವನ್ನು ಕೊಡಕೂಡದೆಂದು ನಾನು ಮನವಿಮಾಡಿಕೊಳ್ಳುತ್ತೇನೆ. ಅಪಾಯಿಂಟ್‌ಮೆಂಟುಗಳ ವಿಷಯದಲ್ಲಿ ಬಹಳ ಅನ್ಯಾಯವಾಗುತ್ತಿದೆ. ಆದಕಾರಣ ಈ ವಿಷಯದ ಬಗ್ಗೆ ಸರ್ಕಾರದವರು ತೀವ್ರ ಗಮನಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ನಮ್ಮ ದೇಶವು ಮುಂದಕ್ಕೆ ಬರಬೇಕಾದರೆ ಮೊದಲು ನಮ್ಮ ಧನ ಸಂಪತ್ತಿಯು ಹೆಚ್ಚಾಗಬೇಕು ಎಂಬುದನ್ನು ನಾವು ಮುಖ್ಯವಾಗಿ ಗಮನದಲ್ಲಿ ಇಡಬೇಕು. ದುಡ್ಡು ಹೆಚ್ಚಿಗೆ ಆದಷ್ಟೂ ಮಟ್ಟ ಏರುತ್ತದೆ. ಎರಡನೇ ಪಂಚವಾರ್ಷಿಕ ಯೋಜನೆಯ ಸಲುವಾಗಿ ಬೇಕಾಗುವ ಧನ ಸಹಾಯವನ್ನು ಕೇಂದ್ರ ಸರ್ಕಾರದವರಿಂದ ಪಡೆಯಬೇಕು. ದೇಶದಲ್ಲಿ ಕೈಗಾರಿಕೆಗಳು ಅಭಿವೃದ್ಧಿಯಾಗಬೇಕು. ಉತ್ಪತ್ತಿ ಜಾಸ್ತಿಯಾಗಬೇಕು. ಹಳ್ಳಿಗಳಲ್ಲಿ ಕೈಗಾರಿಕೆಗಳಿಗೆ ಜಾಸ್ತಿ ಉತ್ತೇಜನ ಕೊಡಬೇಕು, ಹಳ್ಳಿಗಾಡಿನ ಗೃಹ ಕೈಗಾರಿಕೆಗಳ ಅಭಿವೃದ್ಧಿಯ ಕಡೆಗೆ ಹೆಚ್ಚು ಗಮನ ಕೊಡಲಾಗುವುದೆಂದು ನಾನು ನಂಬಿದ್ದೇನೆ.

11 A.M.

ಕೊನೆಯದಾಗಿ, ನಮ್ಮ ಹಾಸನ ಜಿಲ್ಲೆಯ ಗೊರೂರು ಅಣೆಕಟ್ಟಿನ ವಿಷಯದಲ್ಲಿ ಸುಮಾರು ಐವತ್ತು ವರ್ಷಗಳಿಂದಲೂ ಶಾಸನ ಸಭಾ ಸದಸ್ಯರೂ ಮಂತ್ರಿಗಳೂ ಪ್ರಯತ್ನ ಪಡುತ್ತಿದ್ದಾರೆ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಗೊರೂರು ಅಣೆಕಟ್ಟನ್ನು ಸೇರಿಸಲಾಗಿತ್ತು, ಆದರೆ ಈಗ ಅದನ್ನು ಕೈಬಿಟ್ಟಿದ್ದಾರೆ. ಈಗಲಾದರೂ ಸರ್ಕಾರದವರು ಪ್ರಯತ್ನ ಮಾಡಿ ಉಳಿಯುವ ಹಣದಲ್ಲಿ ಈ ಅಣೆಕಟ್ಟನ್ನು ನಿರ್ಮಾಣ ಮಾಡಿದರೆ ಇದರಿಂದ ತುಮಕೂರು, ಮಂಡ್ಯ, ಮತ್ತು ಹಾಸನ ಜಿಲ್ಲೆಯ ಅನೇಕ ಹಳ್ಳಿಗಳಿಗೆ ಅನುಕೂಲವಾಗುತ್ತದೆ. ಇದರಿಂದ ಸುಮಾರು 35 ಸಾವಿರ ಎಕರೆಗೆ ನೀರಾವರಿಯಾಗುತ್ತದೆ. ಇಂಡಿಯಾ ಸರ್ಕಾರಕ್ಕೆ ನಮ್ಮ ರಾಜ್ಯ ಸರ್ಕಾರದವರು ಶಿಫಾರಸು ಮಾಡಿ ಈ ಗೊರೂರು ಅಣೆಯನ್ನು ಮಂಜೂರು ಮಾಡುತ್ತಾರೆಂದು ನಂಬಿದ್ದೇನೆ.

ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು ದಕ್ಷಿಣ).—ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದ 1957-58ನೆಯ ಸಾಲಿನ ಆಯವ್ಯಯದ ಅಂದಾಜನ್ನು ಕುರಿತು ಎರಡು ಮೂರು ವಿಷಯಗಳನ್ನು ಹೇಳಲು ನಿಂತಿದ್ದೇನೆ. ಈವರೆಗೆ ನಡೆದಿರುವ ಚರ್ಚೆಯನ್ನು ನಾನು ಬಹಳ ಆಸಕ್ತಿಯಿಂದ ಕೇಳಿದೆ. ಅದರಲ್ಲಿಯೂ ವಿರೋಧ ಪಕ್ಷದ ಅನೇಕ ಮುಖಂಡರು ಮಾಡಿದ ಭಾಷಣಗಳನ್ನು ಚೆನ್ನಾಗಿ ಕೇಳಿದ್ದೇನೆ. ಈ ಶಾಸನ ಸಭೆಯಲ್ಲಿರುವ ನಾವೆಲ್ಲರೂ ಸರ್ಕಾರವನ್ನು ನಡೆಸುವ ಜವಾಬ್ದಾರಿಯನ್ನು ಹೊತ್ತಿದ್ದೇವೆ. ನಾವು ಆಡುವ ಮಾತು ರಚನಾತ್ಮಕವಾಗಿರಬೇಕೆಂಬುದನ್ನು ಅನೇಕರು ಮರೆತಿರುವುದನ್ನು ನೋಡಿ ನನಗಂತೂ ಖೇದವಾಗಿದೆ. ಕೆಲವರು ಹೇಳಿದುದನ್ನು ಕೇಳಿದರೆ, ಸುಮ್ಮನೆ ಮಾತನಾಡುವುದಕ್ಕಾಗಿ ಅಥವಾ ಟೀಕೆ ಮಾಡುವುದಕ್ಕಾಗಿ ಹೇಳಿದರೋ ಎನ್ನುವ ರೀತಿಯಲ್ಲಿ ಭಾಷಣ ಮಾಡಿದರು. ಅವರು ಅನೇಕ ವೈಯಕ್ತಿಕ ವಿಷಯಗಳನ್ನು ಪ್ರಸ್ತಾಪ ಮಾಡಿ, ಹೇಳಬೇಕಾದ ವಿಷಯಗಳನ್ನು ಮರೆತರೆಂದು ನನಗೆ ಕಂಡು ಬಂತು. ಹೆಚ್ಚಾಗಿ ನಾನು ಆ ವಿಷಯಗಳಿಗೆ ಹೋಗದೆ, ಅವರು ಎತ್ತಿರತಕ್ಕ ಒಂದೆರಡು ವಿಷಯಗಳ ಬಗ್ಗೆ ಹೇಳಬಯಸುತ್ತೇನೆ.

ಹಿಂದೆ ರಾಜ್ಯಪಾಲರ ಭಾಷಣಕ್ಕಾಗಿ ವಂದನಾರ್ಪಣೆ ಮಾಡುವ ಸೂಚನೆಯ ವಿಷಯದಲ್ಲಿ ಮಾತನಾಡುವಾಗ ಶ್ರೀಮಾನ್ ನರಸಿಂಹನ್ ಅವರು ಯಾವ ಸಮಾಜದ ರಚನೆಗಾಗಿ ಕೆಲಸ ಮಾಡುತ್ತಿದ್ದೇವೋ ಅದರ ವಿಷಯವನ್ನೇ ಸರ್ಕಾರ ತಿಳಿದುಕೊಂಡಿಲ್ಲ, ಅನೇಕರು ತಿಳಿದು ಕೊಂಡಿಲ್ಲ ಎಂದು ಟೀಕೆ ಮಾಡಿದರು. ಈ ವಿಷಯವನ್ನು ವಿಶದವಾಗಿ ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ಕಾಂಗ್ರೆಸ್ಸಿನ ಗುರಿ Socialistic Pattern of Society ಅಥವಾ ಸಮತಾ ಸ್ವರೂಪದ ಸಮಾಜ ಸ್ಥಾಪಿಸುವುದು ಎಂಬುದನ್ನು ಕಂಠೋಕ್ತವಾಗಿ ಹೇಳಿದ್ದೇವೆ. ಇದರ ಅರ್ಥವನ್ನು ತಿಳಿದುಕೊಂಡಿಲ್ಲವೆಂದು ಅವರು ಹೇಳಿದರು. ಎರಡನೆಯ ಪಂಚವಾರ್ಷಿಕ ಯೋಜನೆಯ ಪ್ರಸ್ತಾಪನೆಯಲ್ಲಿ ಇದರ ಅರ್ಥವನ್ನು ಕೊಟ್ಟಿದ್ದಾರೆ. ಅವರೇ ಇದರ ಅರ್ಥ ವಿವರಣೆಯನ್ನು ತಿಳಿದು ಕೊಂಡಿಲ್ಲವೆಂದು ಹೇಳಲು ಬಯಸುತ್ತೇನೆ. ಸಮತಾ ಸ್ವರೂಪದ ಸಮಾಜರಚನೆ ಎನ್ನುವುದಕ್ಕೆ ಅರ್ಥ ಹೀಗಿದೆ. "ನಾವು ಪ್ರಗತಿ ಹೊಂದಬೇಕು, ಆ ಪ್ರಗತಿ ಕೇವಲ ಸ್ವಂತ ಲಾಭ ಸಂಪಾದನೆ ಯಾಗದೆ ಅದು ಸಮಾಜದ ಗಳಿಕೆಯಾಗಬೇಕು, ಮತ್ತು ನಮ್ಮ ಅಭಿವೃದ್ಧಿಯ ರೂಪ, ಹಾಗೂ ಸಮಾಜದ ಆರ್ಥಿಕ ಸಂಬಂಧವನ್ನು, ಇಡೀ ದೇಶದ ಆದಾಯ ಹೆಚ್ಚುವಂತೆ, ಮತ್ತು ಉದ್ಯೋಗ ಹೆಚ್ಚುವಂತೆ ನಿಯೋಜಿಸುವುದರ ಜೊತೆಗೆ, ಸಂಪಾದನೆಯಲ್ಲಿ ಮತ್ತು ಐಶ್ವರ್ಯದಲ್ಲಿ ಹೆಚ್ಚಿನ ಸಮತೆಯಿರುವಂತೆ ಮಾಡಬೇಕು. ಆರ್ಥಿಕ ಅಭಿವೃದ್ಧಿಯಿಂದ ಬರುವ ಲಾಭ ಸಮಾಜದಲ್ಲಿ ತೊಂದರೆಗೀಡಾಗಿರುವ ಹಾಗೂ ಹಿಂದುಳಿದವರಿಗೆ ಸಿಕ್ಕುವಂತಾಗಬೇಕು. ಮತ್ತು ಸಾಮಾನ್ಯ ಮನುಷ್ಯನೂ ತನ್ನ ಜೀವನದಲ್ಲಿ ಮೇಲಕ್ಕೆ ಬರಲು ಅವಕಾಶ ಕಲ್ಪಿಸಬೇಕು. ಇದಕ್ಕೆ Socialistic Pattern of Society ಎಂಬ ಪದಗಳನ್ನು ಪ್ರಯೋಗ ಮಾಡಿದ್ದೇವೆ. ಇದೇ ಈ ಪದಗಳ ವಿವರವಾದ ಸೂಕ್ಷ್ಮವಾದ ರೂಪ ರೇಖೆ. ನಾವು ಏನೊಂದು ಆರ್ಥಿಕ ನೀತಿಯನ್ನನುಸರಿಸಿಕೊಂಡು ಬಂದಿದ್ದೇವೋ ಅದನ್ನು ಕೆಲವು ಪದಗಳಿಂದ ವಿವರಿಸಲಾಗಿದೆ. ಅದೇನೆಂದರೆ, "ಸಹಕಾರ ಪದ್ಧತಿಯ ಮೂಲಕ ಉತ್ಪತ್ತಿಮಾಡುವ ಕಾರ್ಯವನ್ನು ಮುಂದುವರಿಸುವುದು, ನಿರುದ್ಯೋಗಿಗಳಾಗಿ ಶ್ರಮವಿಲ್ಲದೆ, ಗೇಣಿ ಹಾಗೂ ಬಾಡಿಗೆ ಪಡೆಯುತ್ತಿರುವವರನ್ನು ಇಲ್ಲದಂತೆ ಮಾಡುವುದು, ದುಬಾರಿ ಬಡ್ಡಿ ಪಡೆಯುವ ಖಾಸಗೀ ಲೇವಾದೇವಿಗಾರರ ಸ್ಥಳ

ದಲ್ಲಿ ಸುಲಭದರದಲ್ಲಿ ಹಣ ಕೊಡುವ ಸಂಸ್ಥೆಗಳನ್ನು ಏರ್ಪಡಿಸುವುದು, ಖಾಸಗಿಯವರ ಸ್ವಾಮ್ಯವನ್ನು ಹಿಡಿದಲ್ಲಿಟ್ಟು ಉತ್ಪಾದನೆ ಹಾಗೂ ಲಾಭದಾಯಕ ವ್ಯಾಪಾರದಲ್ಲಿ ಹೆಚ್ಚು ಹೆಚ್ಚು ಸಂಘ ಸಂಸ್ಥೆಗಳು ಕೆಲಸ ಮಾಡುವಂತೆ ಏರ್ಪಡಿಸುವುದು" ಇವು ಬಹಳ ಪ್ರಮುಖ ವಿಷಯಗಳು. ಇಂಥ ಸಮಾಜವನ್ನು ರಚನೆ ಮಾಡಬೇಕಾಗಿದೆ. ಈ ಅಂಶಗಳ ಹಿನ್ನೆಲೆಯಲ್ಲಿ 1957-58ನೆಯ ಸಾಲಿನ ಆಯವ್ಯಯದಲ್ಲಿ ಎರಡನೆಯ ಪಂಚವಾರ್ಷಿಕ ಯೋಜನೆಯ ಎರಡನೆಯ ವರ್ಷದ ಕಾರ್ಯಕ್ರಮವನ್ನು ಈಡೇರಿಸ ಬೇಕಾದರೆ ಇದಕ್ಕೆ ಎಷ್ಟು ಹಣವನ್ನೊದಗಿಸ ಬೇಕೆಂಬುದನ್ನು ಗೊತ್ತು ಮಾಡಿದ್ದೇವೆ. ಈ ವರ್ಷದ ಆಯವ್ಯಯದಲ್ಲಿ ಇದಕ್ಕೆ ಬೇಕಾದಷ್ಟು ಹಣವನ್ನೊದಗಿಸಿದೆಯೆ ಅಥವಾ ಇಲ್ಲವೆ ಎನ್ನುವುದನ್ನು ನೋಡಿ ಪರಿಶೀಲನೆ ಮಾಡಿದರೆ ಆಗ ಸ್ವಲ್ಪ ಸಮಾಧಾನ ಸಿಕ್ಕುತ್ತದೆ. ನಾವು ಮಾಡಿರುವುದು ನ್ಯಾಯ ಎನ್ನುವುದರ ಅರಿವಾಗುತ್ತದೆ. ಈ ವಿಷಯದಲ್ಲಿ ಒಂದೆರಡು ಅಂಶಗಳನ್ನು ಪ್ರಸ್ತಾಪ ಮಾಡುತ್ತೇನೆ.

1957-58ನೆಯ ಸಾಲಿನಲ್ಲಿ, ಎಂದರೆ, ಎರಡನೆಯ ಪಂಚವಾರ್ಷಿಕ ಯೋಜನೆಯ ಎರಡನೆಯ ಸಾಲಿಗೆ ಕಾರ್ಯಗತ ಮಾಡಬೇಕೆಂದಿರುವ ಬಾಬುಗಳಲ್ಲಿ, ವ್ಯವಸಾಯೋತ್ಪನ್ನಕ್ಕಾಗಿ ಒಟ್ಟು 1 ಕೋಟಿ 62 ಲಕ್ಷದ 30 ಸಾವಿರ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಕಾರ್ಯಕ್ರಮವನ್ನಿಟ್ಟುಕೊಂಡಿದ್ದೇವೆ. ಇಷ್ಟು ಹಣವನ್ನು ಈ ಆಯವ್ಯಯದಲ್ಲಿ ತೋರಿಸಲಾಗಿದೆ. ಸಣ್ಣ ಸಣ್ಣ ನೀರಾವರಿ ಕಾಮಗಾರಿಗಳಿಗಾಗಿ 54 ಲಕ್ಷ ರೂಪಾಯಿಗಳನ್ನು ಈ ವರ್ಷ ಒದಗಿಸಲಾಗಿದೆ. ಇದೂ ಎರಡನೆಯ ಪಂಚವಾರ್ಷಿಕ ಯೋಜನೆಯ ಎರಡನೆಯ ವರ್ಷಕ್ಕೆ ಒದಗಿಸಿರುವುದು. ಒಟ್ಟು ನೀರಾವರಿ ಕಾಮಗಾರಿಗಳಿಗಾಗಿ 66 ಲಕ್ಷದ 33 ಸಾವಿರ ರೂಪಾಯಿ ಒದಗಿಸಲಾಗಿದೆ, ಸಹಕಾರ ಸಂಸ್ಥೆಗಳ ಅಭಿವೃದ್ಧಿಗಾಗಿ 64 ಲಕ್ಷ ರೂಪಾಯಿಗಳನ್ನು ಈ ಎರಡನೆಯ ವರ್ಷದ ಕಾರ್ಯಕ್ರಮಗಳಲ್ಲಿ ಖರ್ಚು ಮಾಡಬೇಕೆಂದು ಹೇಳಿದೆ. ಕ್ಯಾಪಿಟಲ್ ಬಡ್ಜೆಟ್‌ನಲ್ಲಿ ಒಟ್ಟು ನೀರಾವರಿ ಕಾಮಗಾರಿಗಳಿಗೆ 7 ಕೋಟಿ 91 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಮೊದಲು 7 ಕೋಟಿ 11 ಲಕ್ಷ ರೂಪಾಯಿಗಳನ್ನೊದಗಿಸಬೇಕೆಂದು ಕಾರ್ಯಕ್ರಮದಲ್ಲಿತ್ತು. ವಿದ್ಯುಚ್ಛಕ್ತಿ ಬಾಬುಗಳಿಗೆ, 4 ಕೋಟಿ 80 ಲಕ್ಷ ರೂಪಾಯಿಗಳನ್ನೊದಗಿಸಬೇಕೆಂದಿದ್ದು ಈಗ ಈ ವರ್ಷದ ಆಯವ್ಯಯದ ಅಂದಾಜಿನಲ್ಲಿ 4 ಕೋಟಿ 68 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಈ ವಿವರಗಳನ್ನೆಲ್ಲಾ ಏಕೆ ಹೇಳುತ್ತಿದ್ದೇನೆಂದರೆ, ಅನೇಕರು, ಈ ಖೋತಾ ಆಯವ್ಯಯದ ಅಂದಾಜನ್ನು ಸರ್ಕಾರದವರು ಇಟ್ಟಿದ್ದಾರೆ, ಇವರಿಂದ ಈ ಯೋಜನೆಯನ್ನೀಡೇರಿಸುವುದಕ್ಕಾಗುವುದಿಲ್ಲವೆಂದು ಹೇಳಿದರು. ಅಲ್ಲದೆ, ಯಾವ ನಿಯಮ ನೀತಿಯೂ ಇಲ್ಲದೆ ಸರ್ಕಾರವನ್ನು ನಡೆಸುತ್ತಿದ್ದಾರೆ ಎಂದು ಕೆಲವರು ಆರೋಪಣೆ ಮಾಡಿದರು. ನಮಗೆ ಸ್ವಾತಂತ್ರ್ಯ ಬಂದ ಮೇಲೆ 1947 ರಿಂದ 1957ನೆಯ ಇಸವಿಯವರೆಗಿನ ಹತ್ತು ವರ್ಷಗಳಲ್ಲಿ ನಾವು ಏನು ಪ್ರಗತಿ ಸಾಧಿಸಿದ್ದೇವೆ ಎಂಬುದನ್ನು ತಿಳಿಯಬೇಕಾದರೆ ಆಗಿನ ಪರಿಸ್ಥಿತಿಯನ್ನೂ ಈಗಿನ ಪರಿಸ್ಥಿಯನ್ನೂ ಹೋಲಿಸಿ ನೋಡಬೇಕು. ಆಗ ನಿಜವಾಗಿಯೂ ಈಗಿನ ಕಾರ್ಯಕ್ರಮದಂತೆ ನಡೆದಿದ್ದರಿಂದ ಪ್ರಗತಿಯಾಗಿದೆಯೇ ಇಲ್ಲವೇ ಎಂಬುದು ತಿಳಿಯುತ್ತದೆ. ಇದನ್ನು ನಿತ್ಯ ಜೀವನದಲ್ಲಿ ಪರೀಕ್ಷೆ ಮಾಡಬೇಕು. 1947ಕ್ಕೆ ಹಿಂದೆ ಪಡಿತರ ಪದ್ಧತಿ ಜಾರಿಯಲ್ಲಿತ್ತು. ಅಗತ್ಯವಾಗಿ ಬೇಕಾದ ವಸ್ತುಗಳಾವುವೋ ಅವುಗಳನ್ನು, ಇರುವಷ್ಟು ಪ್ರಮಾಣವನ್ನು ಇರುವ ಜನಸಂಖ್ಯೆಗೆ ಹಂಚುವುದೇ ಪಡಿತರ ಪದ್ಧತಿ. 1957ರಲ್ಲಿ ಅಂಥ ಪಡಿತರ ಪದ್ಧತಿ ಇಲ್ಲ. ಬಾಳಿಗೆ ಯಾವ ಯಾವುದು ಬೇಕೋ ಆ ವಸ್ತುಗಳ ಉತ್ಪನ್ನವನ್ನು ಯಥೇಚ್ಛವಾಗಿ ಹೆಚ್ಚಿಸುವುದಕ್ಕೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಈ ದಿವಸ ಆ ಕೊರತೆ ಇಲ್ಲ. ಆಹಾರದ ಬೆಲೆಯ ವಿಷಯದಲ್ಲಿ ಆಕ್ಷೇಪಣೆ ಮಾಡಿದರು. ಬೆಲೆ ಹೆಚ್ಚಾಗಿದೆ, ವ್ಯವಸಾಯೋತ್ಪನ್ನ ಹೆಚ್ಚಾಗಬೇಕು, ಸರ್ಕಾರದ ನೀತಿ ಸರಿಯಾಗಿಲ್ಲದೇಯಿರುವುದರಿಂದ ಹೀಗಾಗಿದೆಯೆಂದು ಹೇಳಿದರು. ಆದರೆ ಇದಕ್ಕೆ ಕಾರಣವೇನೆಂದರೆ, ಈಗ ನಾವು ದೇಶದಲ್ಲಿ ಯೋಜನೆಯ ರೂಢಮೂಲವಾದ ಅಂಶಗಳನ್ನು ಕಾರ್ಯಗತ ಮಾಡುತ್ತಿದ್ದೇವೆ. ಇನ್ನೂ ಒಂದೆರಡು ಪಂಚವಾರ್ಷಿಕ ಯೋಜನೆಗಳನ್ನು ಕಾರ್ಯಗತ ಮಾಡಿದ ಮೇಲೆ ಇದಕ್ಕೆಲ್ಲಾ ಕೈಹಾಕಬೇಕಾಗುತ್ತದೆ. ಯಾವಯಾವ ಬೆಳೆಗಳನ್ನು ಬೆಳೆಯಬೇಕು, ಎಷ್ಟು ಎಕರೆಗಳಲ್ಲಿ ಬೆಳೆಯಬೇಕು, ಯಾವಯಾವುದನ್ನು ಬೆಳೆಮಾಡುತ್ತಿದ್ದೇವೆ ಎಂಬ ವಿವರಗಳೆಲ್ಲವೂ ಈ ಯೋಜನೆಯಲ್ಲಿಲ್ಲದೇಯಿರುವುದರಿಂದ ಹೀಗಾಗಿದೆ. ಈ ಕೆಲಸಕ್ಕೆ ನಾವು ಇನ್ನೂ ಕೈಹಾಕುವುದಕ್ಕೆ ಸಾಧ್ಯವಾಗಿಲ್ಲ. ಈ ಕಾರಣದಿಂದ ಆಹಾರಪರಿಸ್ಥಿತಿ ಹೀಗಾಗಿದೆ. ಆದರೂ ಕೂಡ ಈ ತೊಂದರೆಯನ್ನು ತಡೆಗಟ್ಟಲು ಕೇಂದ್ರಸರ್ಕಾರದವರು ಪ್ರಯತ್ನ ಮಾಡುತ್ತಿದ್ದಾರೆಂಬುದು ಎಲ್ಲರಿಗೂ ಕಾಣುತ್ತದೆ. ಈ ಎಲ್ಲ ದೃಷ್ಟಿಯಿಂದಲೂ ಸರ್ಕಾರ ಮಾಡುವ ಕೆಲಸ ಕಾರ್ಯಗಳು ಗೊತ್ತು ಗುರಿಯಿಲ್ಲದೆ ನಡೆಯುತ್ತಿವೆ, ಪ್ರಗತಿಪರವಾಗಿ ಕೆಲಸ ನಡೆಯುತ್ತಿಲ್ಲ, ಜನರೂ ಪ್ರಗತಿಯಾಗಿಲ್ಲ ಎಂದು ಅವರು ಟೀಕೆ ಮಾಡುವುದು ಸರಿಯಾದುದಲ್ಲ. ನಾವು ಅನೇಕ ಶತಮಾನಗಳು ಪರಕೀಯರ ಆಡಳಿತದಲ್ಲಿದ್ದು ದೇಶ ಬಹಳ ಹಿಂದುಳಿದಿತ್ತು. ಹೀಗಿರುವಾಗ ಸ್ವಲ್ಪ ಕಾಲದಲ್ಲೇ ಪೂರ್ಣ ಪ್ರಗತಿ ಹೊಂದುವುದು ಸಾಧ್ಯವೆಂದು ಹೇಳುವುದಕ್ಕಾಗುವುದಿಲ್ಲ. ಈಗ ಎರಡನೆಯ ಪಂಚವಾರ್ಷಿಕ ಯೋಜನೆಯನ್ನು ನಾವು ಕಾರ್ಯಗತ ಮಾಡಬೇಕಾದರೆ ಪ್ರಪಂಚದ ಪರಿಸ್ಥಿತಿ ಹದಗೆಟ್ಟು ನಮಗೆ ಬೇಕಾದ ಹಣ ಸರಿಯಾಗಿ ಸಿಕ್ಕಲು ಅಷ್ಟಾಗಿ ಅವಕಾಶ ಕಾಣುತ್ತಿಲ್ಲ. ಆದರೂ ಕೂಡ ಇದ್ದುದರಲ್ಲಿ ಎಲ್ಲ ಮಾರ್ಗಗಳಲ್ಲಿಯೂ ಪ್ರಯತ್ನಮಾಡಿ ಹಣ ಶೇಖರಿಸಿಕೊಂಡು ಕೆಲಸಮಾಡಬೇಕಾಗಿದೆ.

ಆ ದೃಷ್ಟಿಯಿಂದ ನಾವು ಬೆಳೆಯುತಕ್ಕ ಜನರಿಗೆ ಅವರು ಚೆನ್ನಾಗಿ ಬೆಳೆಯಲು ಏನೇನು ಅವಶ್ಯಕವಾಗಿದೆ ಎಂಬುದನ್ನು ಗುರಿಯಲ್ಲಿಟ್ಟುಕೊಂಡು ಯೋಜನೆಗಳನ್ನು ತಯಾರುಮಾಡುತ್ತೇವೆ ಅದನ್ನು ಸಕಾಲದಲ್ಲಿ ಕಾರ್ಯಗತಮಾಡದೇ ಹೋದರೆ ಅವರ ಬೆಳವಣಿಗೆಗೆ ಪೋಷಕವಾದ ವಸ್ತುಗಳ ಅಭಾವ ಉಂಟಾಗಲು ಅವಕಾಶವಾಗುತ್ತದೆ. ಪಂಚವಾರ್ಷಿಕ ಯೋಜನೆಯನ್ನು 6 ವರ್ಷಕ್ಕೆ ಮಾಡಿಕೊಳ್ಳಿ 7 ವರ್ಷಕ್ಕೆ ಲಂಬಿಸಿ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಏತಕ್ಕೆಂದರೆ ಬೆಳೆಯುತಕ್ಕ ಜನತೆಗೆ ಏನೇನು ಅವಶ್ಯಕತೆ ಇದೆಯೋ ಅದನ್ನು ಸಕಾಲದಲ್ಲಿ ಕಾರ್ಯಗತ ಮಾಡುವುದು ಅವಶ್ಯಕ. ನಾವು ಸಾಧಿಸತಕ್ಕ ಗುರಿಯನ್ನು ಮುಖ್ಯವಾಗಿ ಇಟ್ಟುಕೊಂಡು ಕಾರ್ಯಗತಮಾಡಬೇಕು. ಇದಕ್ಕೆ ಹಣವನ್ನು ಒದಗಿಸುವ ವಿಷಯದಲ್ಲಿ ಟೀಕೆಗಳನ್ನು ಮಾಡಿದ್ದಾರೆ. ಯೂನಿಫಾರಂ ಟ್ಯಾಕ್ಸೇಷನ್ ಮಾಡಿ ಹೆಚ್ಚಿನ ಆದಾಯ ಬರುವುದಕ್ಕೆ ಯೋಚನೆಮಾಡಿದ್ದಾರೆ. ಐದು ಪ್ರದೇಶಗಳಲ್ಲಿ ಒಂದೇ ವಿಧವಾಗಿ ಎಲ್ಲರಿಗೂ ಸಮನ್ವಯವಾಗುವ ಕಾನೂನನ್ನು ಜಾರಿಗೆ ತರುವಾಗ ಆದಾಯ ಹೆಚ್ಚಾಗಿ ಬಂದರೆ ಅದರಿಂದ ಅನುಕೂಲ

(ಶ್ರೀ ಎ. ವಿ. ನರಸಿಂಹರೆಡ್ಡಿ)

ವಾಗುತ್ತದೆ. ಈಗ ಇರತಕ್ಕ ಪರಿಸ್ಥಿತಿಯಲ್ಲಿ ನಮಗೆ ಹಣದ ಅಭಾವವಿದೆ. ಅನೇಕ ಹೊಸ ಕಾರ್ಯಕ್ರಮಗಳನ್ನು ಈಡೇರಿಸಬೇಕಾಗಿದೆ. ಅದಕ್ಕೆ ಹಣವನ್ನು ಒದಗಿಸಲೇ ಬೇಕು. ಅದಕ್ಕೆ ಮಾರ್ಗಗಳನ್ನು ಕಂಡು ಹಿಡಿಯಬೇಕು. ಹೊಸ ತೆರಿಗೆಗಳಿಂದ ಹಣವನ್ನು ಪಡೆಯದೆ ಹೋದರೂ ಯೂನಿಫಾರಂ ಟ್ಯಾಕ್ಸೇಷನ್ನಿನಿಂದ ಹಣವನ್ನು ಪಡೆಯುವುದನ್ನು ಯಾಕೆ ಬೇಡವೆಂದು ಹೇಳಬೇಕು. ಅದಕ್ಕೆ ಬದಲಾಗಿ ಸರ್ಕಾರದವರಿಗೆ ನಾವು ಹೆಚ್ಚಿನ ಅಭಿನಂದನೆಗಳನ್ನು ಸಲ್ಲಸಬೇಕಾಗಿದೆ. ಆ ರೀತಿ ಟೀಕಿಸುವುದರಲ್ಲಿ ಎಷ್ಟು ಮಟ್ಟಿಗೆ ಧರ್ಮವಿದೆ ಮತ್ತು ದೇಶದ ಭದ್ರತೆಯನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಹೇಳಿದ್ದಾರೆಯೇ ಎಂದು ಕೇಳುತ್ತೇನೆ.

ಎರಡನೆಯ ಪಾಂಚವಾರ್ಷಿಕ ಯೋಜನೆ ಮುಗಿಯುವುದರೊಳಗೆ ಕೊನೆಯ ಪಕ್ಷ 16 ಸಾವಿರ ಕೋಟಿ ರೂಪಾಯಿಗಳ ಡಿಫಿಸಿಟ್ ಇರುತ್ತದೆ ಎಂದು ಹಣಕಾಸಿನ ಮಂತ್ರಿಗಳು ಹೇಳಿದ್ದಾರೆ. ಈಗ ನಮ್ಮ ಮುಂದೆ ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ 3½ ವರ್ಷಗಳು ಮಾತ್ರ ಉಳಿದಿವೆ. ಈ 3½ ವರ್ಷಗಳಲ್ಲಿ ಯೂನಿಫಾರಂ ಟ್ಯಾಕ್ಸೇಷನ್ ಪ್ರಕಾರ ವರ್ಷ ಒಂದಕ್ಕೆ 3 ಕೋಟಿ ಆದಾಯ ಹೆಚ್ಚಾಗುತ್ತದೆಯೆಂದು ಮಾನ್ಯ ಹಣಕಾಸಿನ ಸಚಿವರು ಹೇಳಿದ್ದಾರೆ. 3½ ವರ್ಷಕ್ಕೆ ಲೆಖ್ಖ ಹಾಕಿದರೆ 10 ಕೋಟಿ ಚಿಲ್ಲರೆ ರೂಪಾಯಿ ಆಗುತ್ತದೆ. ಇನ್ನು ನಮ್ಮ ಮುಂದಿರತಕ್ಕ ಡಿಫಿಸಿಟ್, ಎರಡನೇ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡಿದಮೇಲೆ, 5 ಕೋಟಿ ರೂಪಾಯಿ ಮಾತ್ರ ಆಗುತ್ತದೆ. ಎರಡು ಕೋಟಿ ಪ್ರಜಾಸಂಖ್ಯೆಯುಳ್ಳ ಇಂಥ ಸಂಸ್ಥಾನಕ್ಕೆ 5 ಕೋಟಿ ಡಿಫಿಸಿಟ್ ಅಷ್ಟು ದೊಡ್ಡದೇನೂ ಅಲ್ಲ. ಇಷ್ಟು ಡಿಫಿಸಿಟ್ ಇಲ್ಲದಂತೆ ಮಾಡುವುದಕ್ಕೆ ಕೂಡ ಸಾಧ್ಯವಿದೆ ಎಂದು ನನ್ನ ಸಲಹೆ. ಈ ದಿವಸ ನಮ್ಮ ದೇಶದಲ್ಲಿ ಬರತಕ್ಕ ಆದಾಯದ ಶೇಕಡ 60ಕ್ಕೆ ಮೀರಿದ ಹಣವನ್ನು ಖಾಯಂ ಮತ್ತು ಇತರ ಸಿಬ್ಬಂದಿಗಳಮೇಲೆ ಖರ್ಚುಮಾಡುತ್ತಿದ್ದೇವೆ. ನಮ್ಮ ವೆಲ್ ಫೇರ್ ಸ್ಟೇಟಿನಲ್ಲಿ ಇಡೀ ದೇಶದ ಆದಾಯದಲ್ಲಿ ಶೇಕಡ 60ರಷ್ಟು ಸಿಬ್ಬಂದಿಗಾಗಿ ಖರ್ಚು ಮಾಡುವುದು ಧರ್ಮವಲ್ಲ. ಹಾಗೆ ಮಾಡಿದರೆ ವೆಲ್ ಫೇರ್ ಸ್ಟೇಟ್ ಆಗುವುದಿಲ್ಲ. ಆದ್ದರಿಂದ ಅದನ್ನು ಎಕಾನಮೈಸ್ ಮಾಡಬೇಕು. ಕಡಮೆ ಮಾಡಬೇಕು. ಅದಕ್ಕೆ ಮಾನ್ಯ ಹಣಕಾಸಿನ ಮಂತ್ರಿಗಳು ಒಂದು ಸಲಹೆಯನ್ನು ಅವರ ಭಾಷಣದಲ್ಲಿ ಹೇಳಿದ್ದಾರೆ. ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ಗೊತ್ತುಮಾಡಿ ಏನೇನು ಸರ್ಕಾರದಲ್ಲಿ ಖೋತಮಾಡಬಹುದು, ಹೇಗೆ ಆಡಳಿತ ಸಿಬ್ಬಂದಿಯಲ್ಲಿ ಆಗತಕ್ಕ ಖರ್ಚನ್ನು ಕಡಮೆ ಮಾಡಬಹುದು ಎಂದು ಸೂಚನೆ ಕೊಟ್ಟಿದ್ದಾರೆ. ಕೂಡಲೆ ಈ ರೀತಿ ಕಾರ್ಯಕ್ರಮ ತೆಗೆದುಕೊಂಡು ವೆಲ್‌ಫೇರ್ ಸ್ಟೇಟಿನಲ್ಲಿ ಶೇಕಡ 30ರಷ್ಟು ಮಾತ್ರ ಸಿಬ್ಬಂದಿಯಮೇಲೆ ಖರ್ಚಾಗಬೇಕಾಗಿದೆಯೇ ಹೊರತು ಉತ್ಪತ್ತಿಯ ಹೆಚ್ಚಿನ ಭಾಗವನ್ನು ಸಿಬ್ಬಂದಿಗೆ ಖರ್ಚುಮಾಡುವುದು ಧರ್ಮವಲ್ಲ. ಈ ಒಂದು ದೃಷ್ಟಿಯಿಂದ ಯೋಚನೆಮಾಡಬೇಕು. ಕೂಡಲೇ ಎಕ್ಸ್‌ಪರ್ಟ್ ಕಮಿಟಿ ಸ್ಥಾಪನೆ ಮಾಡಬೇಕು ಎಂದು ಸಲಹೆ ಮಾಡುತ್ತೇನೆ.

ಎರಡನೆಯದಾಗಿ ನಿರಾವರಿ ಕಾಂಗಾರಿಗಳ ವಿಚಾರವಾಗಿ ಆಡಳಿತ ಪಕ್ಷಕ್ಕೆ ಸೇರಿದವನಾಗಿ ಹೇಳುತ್ತೇನೆ. ಮರಾಮತ್ತು ಇಲಾಖೆಯಲ್ಲಿ ಶೇಕಡ 40ರಷ್ಟು ಹಣ ಸರಿಯಾದ ರೀತಿಯಲ್ಲಿ ಖರ್ಚಾಗುತ್ತಿಲ್ಲ. ವ್ಯರ್ಥವಾಗಿ ಖರ್ಚಾಗುತ್ತದೆ; ಅದನ್ನು ಅನೇಕ ಜನ ಒಪ್ಪುತ್ತಾರೆ. ಆದ್ದರಿಂದ ನಾವು ನಂಬಿಕೆ ಇರುವ ಅಧಿಕಾರಿಗಳನು ಕಾನ್‌ಫಿಡೆನ್ಸಿಗೆ ತೆಗೆದುಕೊಂಡು ಸರಿಯಾದ ರೀತಿಯಲ್ಲಿ ಆಡಳಿತ ವಿವರಗಳನ್ನು ತಿಳಿದುಕೊಂಡು ನಡೆಸುವುದಕ್ಕೆ ಪ್ರಯತ್ನಪಟ್ಟರೆ ಈಗ ಅಪವ್ಯಯ ಏನಾಗುತ್ತಿದೆಯೋ ಅದನ್ನು ತಪ್ಪಿಸಬಹುದು.

ಈ ದಿವಸ ಸರ್ಕಾರಕ್ಕೆ ಆದಾಯಗಳನ್ನು ತರತಕ್ಕ ಒಂದೆರಡು ಅಂಶಗಳಿವೆ. ಖಾಸಗಿಯವರು ಒಂದು ಉದ್ಯಮ ಪ್ರಾರಂಭಮಾಡಿದರೆ ಲಾಭದೃಷ್ಟಿಯಿಂದ ಹಾಕಿರತಕ್ಕ ಬಂಡವಾಳಕ್ಕೆ ಬಡ್ಡಿ ಬರುವಹಾಗೆ ಕಾರ್ಮಿಕರಿಗೆ ಅನುಕೂಲವಾಗುವಹಾಗೆ ನಡೆಸುತ್ತಾರೆ. ಶ್ರೀ ನರಸಿಂಹನ್‌ರವರು ಅವರ ತತ್ವದ ಪ್ರಕಾರ ಎಲ್ಲಾ ಕೈಗಾರಿಕೆಗಳನ್ನೂ ಸರ್ಕಾರ ನಡೆಸಬೇಕು ಎಂದು ಹೇಳುತ್ತಿದ್ದಾರೆ. ಇವೊತ್ತು ಏನಾಗುತ್ತಿದೆ ಎಂದರೆ, ನನ್ನ ಅನುಭವದಲ್ಲಿ, ಒಂದು ಉದ್ಯಮ ಸರ್ಕಾರ ವಹಿಸಿದ ಕೂಡಲೇ ಅದು ನೋ ಪ್ರಾಫಿಟ್ ಬೇಸಿಸ್‌ನಲ್ಲಿ ನಡೆಯಬೇಕೆಂಬ ಮನೋಭಾವ ತೋರುತ್ತಿದ್ದಾರೆ. 10 ಕೋಟಿ ಚಿಲ್ಲರೆ ರೂಪಾಯಿಗಳ ಬಂಡವಾಳ ಹಾಕಿ ಅನೇಕ ಕೈಗಾರಿಕೆಗಳನ್ನು ನಡೆಸುತ್ತಿದ್ದೇವೆ. ಲಾಭದ ಕಡೆ ನೋಡಿದರೆ ಖಂಡಿತಾ ಏನೂ ಇಲ್ಲ. ನಮ್ಮ ಸ್ನೇಹಿತರು ಹೇಳಿದರು ಕೈಗಾರಿಕೆ ಬೆಳೆಯಬೇಕು, ಕಾರ್ಮಿಕರಿಗೆ ಹೆಚ್ಚಿನ ಅನುಕೂಲಗಳು ಆಗಬೇಕು, ಎಂಪ್ಲಾಯ್‌ಮೆಂಟಿಗೆ ಹೆಚ್ಚಿನ ಅವಕಾಶ ಇರಬೇಕು ಎಂದು. ನಿಜ, ಆದರೆ ಸರ್ಕಾರ ಕೈಗಾರಿಕೆಗಳನ್ನು no profit no loss ಬೇಸಿಸ್‌ನಲ್ಲಿ ನಡೆಸಬೇಕು ಬಂಡವಾಳದ ಮೇಲೆ ಬಡ್ಡಿ ಬರುವ ಹಾಗಿಲ್ಲ ಎಂದು ಹೇಳುವುದಾದರೆ ಸರ್ಕಾರದವರು ಕೈಗಾರಿಕೆಗಳನ್ನು ನಡೆಸುವ ಬದಲು ಅವನ್ನು ಖಾಸಗಿಯವರಿಗೆ ವಹಿಸಿಕೊಟ್ಟು ತಮ್ಮ ಬಂಡವಾಳವನ್ನು ಲಾಭದಾಯಕವಾದ ಕೆಲಸಗಳಲ್ಲಿ ಹಾಕುವುದು ಲೇಸೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಮೈನಿಂಗ್ ವಿಚಾರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈಚೆಗೆ ನಮ್ಮ ದೇಶದಲ್ಲಿ ಹೆಚ್ಚಿನ ಆದಾಯ ತರತಕ್ಕ ಫಾರಿನ್ ಎಕ್ಸ್‌ಛೇಂಜ್‌ಗೆ ಸಂಬಂಧಪಟ್ಟ ರೀತಿಯಲ್ಲಿ ಇರುವುದು ನಮ್ಮ ದೇಶದ ಖನಿಜ ಸಂಪತ್ತು ಎಂದು ಹೇಳಬಹುದು. ಈ ದಿವಸ ಎರಡನೆಯ ಪಂಚವಾರ್ಷಿಕ ಯೋಜನೆಗಳನ್ನು ಕಾರ್ಯಗತಮಾಡುವುದಕ್ಕೆ ಫಾರಿನ್ ಎಕ್ಸ್‌ಛೇಂಜ್ ಅಭಾವವಿದೆ ದುಡ್ಡು ಕೊಡಬೇಕಾಗಿದೆ. ಅದನ್ನು ಪೂರೈಸುವುದಕ್ಕೆ ಮುಖ್ಯವಾಗಿ ಮೈಸೂರು ಸಂಸ್ಥಾನದಲ್ಲಿ ಹೆಚ್ಚಿನ ಖನಿಜ ಸಂಪತ್ತು ಇದೆ. ಅನೇಕ ಖನಿಜಗಳನ್ನು ಮೈನ್‌ಮಾಡಿ ಎಕ್ಸ್‌ಪೋರ್ಟ್ ಮಾಡಿ ಫಾರಿನ್ ಎಕ್ಸ್‌ಛೇಂಜ್ ಒದಗಿಸಬಹುದು. ಇದಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಟ್ಟು ದೇಶದ ಆದಾಯವನ್ನು ಹೆಚ್ಚಿಗೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಈ ಬಾಬಿನಲ್ಲಿ ಸರ್ಕಾರ ಆದಾಯ ಹೆಚ್ಚು ಮಾಡುವುದಕ್ಕೆ ಅವಕಾಶವಿದೆ. ಆದ್ದರಿಂದ ಸರ್ಕಾರದವರು ಒಂದು ಸರಿಯಾದಂಥ ರೀತಿಯಲ್ಲಿ ಯೋಚನೆಮಾಡಿದರೆ ಡಿಫಿಸಿಟ್ ಈಗ ಏನು ಇದೆ ಅದನ್ನು ಸರಿಪಡಿಸಬಹುದು ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಂ. ಆರ್. ಪಾಟೀಲ್ (ಹುಬ್ಬಳ್ಳಿ).—ಮಾನ್ಯ ಸಭಾಪತಿಗಳೇ, ಹಣಕಾಸಿನ ಮಂತ್ರಿಗಳು ಮಂಡಿಸಿದ ಈ ಆಯವ್ಯಯ ಸೂಚನಾ ಪ್ರತ್ರಕ್ಕೆ ನನ್ನ ಸಾಮಾನ್ಯ ಒಪ್ಪಿಗೆಯನ್ನು ಕೊಡುತ್ತಾ ಗ್ರಾಮಾಭಿವೃದ್ಧಿ ವಿಷಯದಲ್ಲಿ ಸರ್ಕಾರದವರು ಅವಶ್ಯವಾಗಿ ಲಕ್ಷ್ಯಕೊಡಬೇಕಾದ ಅನೇಕ ಸಮಸ್ಯೆಗಳ ಪೈಕಿ ಒಂದೆರಡು ಸಮಸ್ಯೆಗಳತ್ತ ಸರ್ಕಾರದ ಲಕ್ಷ್ಯವನ್ನು ಸೆಳೆಯುವುದು ನನ್ನ ಇವೊತ್ತಿನ ಅಲ್ಪ ಸಮಯದ ನಿಶ್ಚಯ. ಇವುಗಳಲ್ಲಿ ವಿಲೇಜ್ ಪಂಚಾಯಿತಿ ವಿಸ್ತೀ

ರ್ಣದ ಪ್ರಶ್ನೆ ಉತ್ತರ ಕರ್ಣಾಟಕಕ್ಕೆ ಒಂದು ದೊಡ್ಡ ಸಮಸ್ಯೆಯಾಗಿದೆ. ಯಾವುದೋ ಒಂದು ಕಾಲಕ್ಕೆ ಗ್ರಾಮಗಳ ಸ್ಥಾಪನೆ ಆಗಿದೆ. ಆ ಹಳ್ಳಿಗಳಲ್ಲಿ ಹಿಂದೆ ಎಷ್ಟು ಸ್ಥಳವಿತ್ತೋ ಅಷ್ಟೇ ಸ್ಥಳದಲ್ಲಿ ಜನಸಂಖ್ಯೆಯು ಶತಮಾನಗಳಿಂದ ಬೆಳೆದು ಮನೆತನಗಳು ಬೆಳೆದರೂ ಸಹ ಆ ಹಳ್ಳಿಗಳ ಜನರು ಅಲ್ಲೇ ವಾಸಮಾಡಿ ವಕ್ಕಲುತನ ನಡೆಯಿಸಿಕೊಂಡು ಹೋಗುವ ಪ್ರಸಂಗ ಬಂದಿದೆ. ಗ್ರಾಮ ವಿಸ್ತರಣೆಯ ವಿಷಯವನ್ನು ಸರ್ಕಾರದವರು ಹಳ್ಳಿಯವರಿಗೇ ಬಿಡದೆ ತಮ್ಮ ಕೈಯಲ್ಲಿ ತೆಗೆದುಕೊಂಡು ಆ ಬಗ್ಗೆ ಯೋಜನೆಗಳನ್ನು ತಯಾರುಮಾಡಬೇಕೆಂದು ಸರ್ಕಾರದವರಿಗೆ ಸೂಚಿಸಬೇಕೆಂಬುದು ನನ್ನ ಇವೊತ್ತಿನ ಮುಖ್ಯ ಆಶಯ. ಈ ಪ್ರಶ್ನೆ ಸಮುದ್ರ ತೀರದ ಹಳ್ಳಿಯಲ್ಲಿ ವಾಸಿಸುವ ಜನರಿಗೆ ಅಷ್ಟೇನೂ ಸಂಬಂಧಪಡುವುದಿಲ್ಲ. ಅಥವಾ ಮಲೆನಾಡಿನ ಹಳ್ಳಿಯ ಜನರಿಗೆ ಅಷ್ಟು ಅವಶ್ಯಕವಾದ ವಿಚಾರ ಹೌದೋ ಅಲ್ಲವೋ ಗೊತ್ತಿಲ್ಲ. ಆದರೆ ಬೆಳವಲ ವಿಷಯದಲ್ಲಿ ಇದು ದೊಡ್ಡ ಪ್ರಶ್ನೆಯಾಗಿದೆ. ಈ ಪ್ರಶ್ನೆಯನ್ನು ಕೇವಲ ಹಳ್ಳಿಯ ಜನಗಳಿಗೆ ಬಿಟ್ಟುಬಿಟ್ಟರೆ ಬಹಳ ತೊಂದರೆಯಾಗುತ್ತದೆ ಆದ್ದರಿಂದ ಇತ್ತಕಡೆ ಸರ್ಕಾರದವರು ಲಕ್ಷ್ಯಕೊಟ್ಟು ಇದನ್ನು ಮಾಡಿಕೊಡಬೇಕು ಎಂದು ಹೇಳುವುದೇ ಇವೊತ್ತಿನ ನನ್ನ ಮಾತಿನ ಮುಖ್ಯ ಅಂಶ.

ನಮ್ಮ ಹಳ್ಳಿಗಳಲ್ಲಿ ಜನರಿಗೆ ವಾಸಕ್ಕೆ, ಸಾಗುವಳಿಗೆ, ಗ್ರಾಮದ ವಿಸ್ತರಣೆಗೆ, ದನಕರುಗಳನ್ನು ಕಟ್ಟಿಕೊಳ್ಳುವುದು ವಗೈರೆಗೆ ಸಾಕಾಗುವಷ್ಟು ಭೂಮಿ ಈಗ ಇಲ್ಲದಂತಾಗಿದೆ. ಹಳ್ಳಿಗರಿಗೆ ವಾಸಕ್ಕೆ, ವ್ಯವಸಾಯದ ಸಾಮಗ್ರಿಗಳನ್ನು ಇಟ್ಟುಕೊಳ್ಳುವುದಕ್ಕೆ ಮತ್ತು ಇತರ ಆವಶ್ಯಕತೆಗಳಿಗೆ ಹೆಚ್ಚು ಸ್ಥಳಬೇಕು. ಹಾಗೆ ಬೇಕೆಂದು ಸರ್ಕಾರಕ್ಕೆ ಅಥವಾ ಸರ್ಕಾರದ ಅಧಿಕಾರಿಗಳ ಕಡೆ ಅರ್ಜಿ ಕೊಟ್ಟರೆ ಅದು ಇತ್ಯರ್ಥವಾಗುವುದಕ್ಕೆ 10–20 ವರ್ಷಗಳು ಬೇಕು. ಅಷ್ಟು ಕಾಲವಾದ ಮೇಲೆ ಇತ್ಯರ್ಥವಾಗುವುದೂ ಅಲ್ಲದೆ ಅದರಿಂದ ಯಾವ ಅನುಕೂಲವೂ ಹಳ್ಳಿಗರಿಗೆ ಆಗುವುದಿಲ್ಲ. ಇದರಿಂದ ಜನತೆಗೆ ಬಹಳ ತೊಂದರೆಯಾಗಿದೆ. ಅಲ್ಲದೆ ಹಳ್ಳಿಯ ಸುತ್ತಲಿನ ಜಮೀನುಗಳು ಕೆಲವು ಬಹಳ ಫಲವತ್ತಾಗಿರುವುದರಿಂದ ಸ್ವಾಭಾವಿಕವಾಗಿ ಅವಕ್ಕೆ ಹೆಚ್ಚು ಕಿಮ್ಮತ್ತು ಬೀಳುತ್ತದೆ. ಆದ್ದರಿಂದ ಅಂಥ ಫಲವತ್ತಾದ ಭೂಮಿಯನ್ನು ರೈತರು ಬಿಡುವುದಕ್ಕೆ ಅಥವಾ ಮಾರಾಟಮಾಡುವುದಕ್ಕೆ ಸಾಮಾನ್ಯವಾಗಿ ಒಪ್ಪುವುದಿಲ್ಲ. ಹಳ್ಳಿಯ ಜನರು ಮನೆಕಟ್ಟಿಕೊಳ್ಳುವುದಕ್ಕೆ ಅಥವಾ ದನಕರುಗಳನ್ನು ಕಟ್ಟುವುದಕ್ಕೆ ಅಥವಾ ಕಣ ಕಟ್ಟೆಮಾಡಿಕೊಳ್ಳುವುದಕ್ಕೆ ಯಾವುದಾದರೂ ಜಮೀನನ್ನು ಅಕ್ವೈರ್ ಮಾಡಿಕೊಡಬೇಕೆಂದು ಸರ್ಕಾರಕ್ಕೆ ಅರ್ಜಿಹಾಕಿದರೆ ಆ ಜಮೀನು ಮಾಲೀಕರು ಅದಕ್ಕೆ ಅವಕಾಶಕೊಡದೆ ಅಥವಾ ಒಂದು ಪಕ್ಷದವರು ಅವಕಾಶಕೊಡದೆ ಹೋಗುವುದರಿಂದ ಅರ್ಜಿದಾರರ ಪ್ರಯತ್ನ ನಿಷ್ಫಲವಾಗುತ್ತದೆ. ಆದ್ದರಿಂದ ನಮ್ಮ ಸರ್ಕಾರದವರು ಹಿಂದೆ ಟೌನ್ ಎಕ್ಸ್‌ಟೆನ್ಷನ್ ಬೋರ್ಡ್ ಎಂದೇನು ಮಾಡಿದ್ದರೋ ಅದರಂತೆ ಈಗಲೂ ಮಾಡಲು ಯೋಚನೆಮಾಡಿ ವಿಲೇಜ್ ಎಕ್ಸ್‌ಟೆನ್ಷನ್ ಬೋರ್ಡ್ ಎಂದು ಒಂದು ಬೋರ್ಡ್ ರಚಿಸಿ ಅದರಲ್ಲಿ ಸಂಬಂಧಪಟ್ಟ ಮಂತ್ರಿಗಳು, ಪಬ್ಲಿಕ್‌ವರ್ಕ್ಸ್‌ಗೆ ಸಂಬಂಧಪಟ್ಟ ಮೇಲಧಿಕಾರಿಗಳು, ಹೆಲ್ತ್ ಇಲಾಖೆ ಅಧಿಕಾರಿಗಳು ಮತ್ತು ಸಂಬಂಧಪಟ್ಟ ಹಳ್ಳಿಗಳಲ್ಲಿರುವ ಯೋಗ್ಯರಾದ ಒಬ್ಬಿಬ್ಬರು ಅಸೆಂಬ್ಲಿ ಮೆಂಬರುಗಳನ್ನು ಸೇರಿಸಬೇಕು. ಇಷ್ಟು ಸದಸ್ಯರಿಂದ ಕೂಡಿದ ಒಂದು ಬೋರ್ಡ್ ವಿಲೇಜ್ ಎಕ್ಸ್‌ಟೆನ್ಷನ್ ಸ್ಕೀಮಿಗೆ ಸಹಾಯಕವಾಗಿ ಇರಬೇಕು. ಇದೇ ಪ್ರಕಾರ ಪ್ರತಿಯೊಂದು ಜಿಲ್ಲೆಯಲ್ಲೂ, ತಾಲ್ಲೂಕಿನಲ್ಲೂ ಒಂದೊಂದು ಬೋರ್ಡನ್ನು ಸ್ಥಾಪಿಸಬೇಕು. ಹಳ್ಳಿಗಳಲ್ಲಿ ಯಾರಾದರೂ ಜಮೀನಿಗೆ ಅರ್ಜಿ ಹಾಕಿ ಗ್ರಾಮ ಬಡಾವಣೆ ಮಾಡಬೇಕು ಅಥವಾ ಇನ್ನೇನಾದರೂ ವ್ಯವಸ್ಥೆಮಾಡಬೇಕು ಎಂದು ಕೇಳಿದರೆ ಆ ಅರ್ಜಿಯ ವಿಚಾರವನ್ನು ಕೇವಲ ಮುಲ್ಕಿ ಅಧಿಕಾರಿಗಳಿಗೆ ಬಿಟ್ಟುಕೊಡದೆ ಅದು ಬೋರ್ಡಿನ ಕರ್ತವ್ಯವೆಂದು ತಿಳಿದು ನಾನು ಹೇಳಿದಂತೆ ಸ್ಥಾಪನೆಮಾಡಿದ ಬೋರ್ಡಿನವರು ಪ್ರತಿವರ್ಷ ಒಂದೊಂದು ತಾಲ್ಲೂಕಿನಲ್ಲಿ ನಾಲ್ಕಾರು ಹಳ್ಳಿಗಳಲ್ಲಿ ಅಲ್ಲಿಯ ಜನರಿಗೆ ವಾಸ್ತವ್ಯದ ಸಲುವಾಗಿ ಅವರ ಹೊಟ್ಟು ಮೇವಿನ ದಾಸ್ತಾನದ ಸಲುವಾಗಿ ಅವರ ದನಕರುಗಳಿಗಾಗಿ, ಗ್ರಾಮ ವಿಸ್ತರಣೆ ವಗೈರೆಗಾಗಿ ಬೇಕಾಗುವ ಜಮೀನನ್ನು ಒದಗಿಸಬೇಕು; ಇದು ಬೋರ್ಡಿನ ಕರ್ತವ್ಯವೆಂದು ತಿಳಿದು ಅಗತ್ಯವಾಗಿ ಬೋರ್ಡಿನವರು ತಕ್ಕ ವ್ಯವಸ್ಥೆ ಮಾಡಲೇಬೇಕು. ಈ ಕೆಲಸವನ್ನು ಕೇವಲ ಹಳ್ಳಿಯವರಿಗೇ ಬಿಟ್ಟರೆ ಯಾವ ಸಮಸ್ಯೆಯೂ ಬಗೆಹರಿಯುವುದಿಲ್ಲ; ಅದರಿಂದ ಬಹಳ ತೊಂದರೆ ಸಹ ಆಗುತ್ತದೆ. ಈ ವಿಚಾರ ಹಳ್ಳಿಗಳ ಸಂಪರ್ಕವಿರುವ ಮತ್ತು ಹಳ್ಳಿಗಳಲ್ಲಿ ವಾಸ ಮಾಡುವ ಈ ಸಭೆಯ ಸದಸ್ಯರಿಗೂ ಸಹ ಗೊತ್ತಿರಬಹುದು. ಈಗ ಕೇವಲ ಹಳ್ಳಿಗರಿಗೇ ಬಿಟ್ಟಿರುವುದರಿಂದ ಬಹಳ ನಿರ್ಲಕ್ಷ್ಯತೆಯಿಂದ ಕೆಲಸ ಜರುಗುತ್ತಿದೆ. ಒಂದೊಂದು ಮನೆಯೂ ವಿಭಾಗವಾಗಿ ನಾಲ್ಕಾರು ಭಾಗಗಳಾಗಿ ಒಕ್ಕಲುತನ ಮಾಡುವುದೇ ಅಸಾಧ್ಯವಾಗಿದೆ. ಅಲ್ಪಸ್ವಲ್ಪ ವಿದ್ಯೆ ಕಲಿತ ಹಳ್ಳಿಯ ಮಕ್ಕಳು ಹಳ್ಳಿಗಳಲ್ಲಿರಲು ಇಷ್ಟಪಡದೆ ಪೇಟೆಗಳಲ್ಲಿ ವಾಸಮಾಡಬೇಕೆಂಬುದಾಗಿ ಅಪೇಕ್ಷೆ ಪಡುತ್ತಿದ್ದಾರೆ. ಹಳ್ಳಿಗಳಲ್ಲಿ ವಕ್ಕಲುತನ ಅಭಿವೃದ್ಧಿಮಾಡಬೇಕಾದರೆ, ಅಲ್ಲಿನ ಜನರಿಗೆ ಬೇಕಾದ ಸೌಲತ್ತು ದೊರೆಯಬೇಕಾದರೆ, ವಕ್ಕಲಿಗರಿಗೆ ಬೇಕಾದ ಜಾಗವನ್ನೊದಗಿಸಲು ಒಂದು ಯೋಜನೆಯನ್ನು ಮಾಡಬೇಕಾದದ್ದು ಸರ್ಕಾರದ ಮುಖ್ಯ ಕರ್ತವ್ಯ; ಹಳ್ಳಿಯವರಿಗೇ ಈ ಕಾರ್ಯವಹಿಸಿದರೆ ಅನೇಕ ತೊಂದರೆ ಬರಬಹುದು. ಸರ್ಕಾರಕ್ಕೂ ಈ ವಿಷಯದಲ್ಲಿ ತಿಳುವಳಿಕೆಯಿದೆ. ಹಳ್ಳಿಗಳಲ್ಲಿ ಸ್ಥಳದ ಅಭಾವದ ಮೂಲಕ ಷಹರಿನಲ್ಲೇನು ಜಾಗಕ್ಕೆ ಬೆಲೆಯಿದೆಯೋ ಅದಕ್ಕಿಂತ ಹೆಚ್ಚು ಕಿಮ್ಮತ್ತು ಬೀಳುವ ಪರಿಸ್ಥಿತಿಯಿದೆ, ಒಂದು ಸಾವಿರ ರೂಪಾಯಿ ಕೊಟ್ಟರೂ ಒಂದು ಗುಂಟೆ ಜಾಗ ಸಿಕ್ಕದಿರುವ ಸಂದರ್ಭವಿದೆ. ಇಷ್ಟೇ ಅಲ್ಲದೆ ರಸ್ತೆಗಳನ್ನು ಸಹ ಒತ್ತುವರಿ ಮಾಡಿರುವುದೂ ಉಂಟು. ಇದಕ್ಕೆ ಸೂಚನೆ ನಾನು ಹೇಳಿದಂತೆ ಬೋರ್ಡನ್ನು ಮಾಡಿ, ಗ್ರಾಮ ಪಂಚಾಯಿತಿ ಮೂಲಕ ಪ್ರತಿ ತಾಲ್ಲೂಕಿನ ಗ್ರಾಮಗಳ ಸರ್ವೆ ಮಾಡಿಸಿ, ಪ್ರತಿಯೊಬ್ಬ ವಕ್ಕಲಿಗನಿಗೂ ಎಷ್ಟು ಜಾಗವಿದೆ, ವ್ಯವಸಾಯಕ್ಕೆ, ಸಾಮಾನುಗಳನ್ನಿಟ್ಟುಕೊಳ್ಳುವುದಕ್ಕೆ, ದನ ಕಟ್ಟುವುದಕ್ಕೆ ಮುಂತಾದುವಕ್ಕೆ ಅವನಿಗೆ ಎಷ್ಟು ಹೆಚ್ಚಿನ ಸ್ಥಳ ಬೇಕು ಎಂದು ನಿರ್ಣಯಮಾಡಿ, ಒಂದು ಗ್ರಾಮಕ್ಕೆ ಒಟ್ಟಿನಮೇಲೆ ಎಷ್ಟು ಕ್ಷೇತ್ರ ಬೇಕೆಂದು ನಿರ್ಣಯಮಾಡಿ ಆ ಪ್ರಕಾರ ಎಷ್ಟು ಕ್ಷೇತ್ರ ಬೇಕೋ ಅಷ್ಟನ್ನು ಆ ಗ್ರಾಮದ ಸಮೀಪದಲ್ಲಿ ಎಲ್ಲಿ ಸಿಕ್ಕುತ್ತದೋ ಅಲ್ಲಿ ಒದಗಿಸಲು ಬೋರ್ಡಿನವರ ಮೂಲಕ ಸರ್ಕಾರದವರು ನಿರ್ಣಯಿಸಬೇಕು. ಹಾಗೆ ನಿರ್ಣಯಿಸಿದ ಮೇಲೆ ಪುನಃ ತೀರ್ಮಾನವನ್ನು ಬದಲಾಯಿಸಲು ಅವಕಾಶ ವಿರಬಾರದು. ಹೀಗೆ ನಿರ್ಣಯ ಮಾಡಿದಮೇಲೆ ಒಂದು ಪ್ಲಾನ್ ಮಾಡಿ ಅದರಂತೆ ಬೇಕಾದ ಆಟದ ಮೈದಾನ, ಲೈಬ್ರೆರಿ ವಗೈರೆಗೆ ಬೇಕಾದ ಜಾಗವನ್ನು ವಿಂಗಡಿಸಿ ಉಳಿದುದಕ್ಕೆ ಅಪ್‌ಸೆಟ ಪ್ರೈಸ್‌ನಂತೆ ಬೆಲೆ ನಿಗದಿಮಾಡಿ ಅದಕ್ಕೆ ಬೇಕಾದ ಹಣವನ್ನು ಸರ್ಕಾರದವರು ಕೊಟ್ಟು ಜಮೀನನ್ನು ಅಕ್ವೈರ್ ಮಾಡಿ ಯಾವ ಯಾವ ರೈತರಿಗೆ ಎಷ್ಟೆಷ್ಟು ಬೇಕೋ ಅಷ್ಟು

(ಶ್ರೀ ಎಂ. ಆರ್. ಪಾಟೀಲ್.)

ನ್ನೊದಗಿಸುವುದು ಅಗತ್ಯ. ಗ್ರಾಮಕ್ಕೆ ಸಮೀಪವಿರುವ ಜಮೀನು ಮಾಲೀಕರು ಸಾಮಾನ್ಯವಾಗಿ ತಮ್ಮ ಜಮೀನನ್ನು ದೂರದ ಜಮೀನುಗಳ ಕಿಮ್ಮತ್ತಿಗೆ ಕೊಡುವುದಕ್ಕೆ ಕೆಲವು ವೇಳೆ ಒಪ್ಪುವುದಿಲ್ಲ. ವಿವಾದ ಬಂದಾಗ ಅಪ್ಸೆಟ್ ಪ್ರೈಸ್‌ನಿಂದ ಬಂದ ಹಣದಲ್ಲಿ ಜಮೀನು ಮಾಲೀಕರಿಗೆ ಒಂದು ಅಂಶಕೊಡಬೇಕು. ಆ ಪ್ರಕಾರ ಮಾಡಿದರೆ ಈ ವಿಚಾರದಲ್ಲಿರುವ ತೊಂದರೆ ನಿವಾರಣೆಯಾಗಬಹುದೆಂಬ ನಿರೀಕ್ಷೆಯಿದೆ. ಆದ್ದರಿಂದ ಸಂಬಂಧಪಟ್ಟ ಮಂತ್ರಿಗಳು ಈ ಕಡೆ ಲಕ್ಷ್ಯಹಾಕಬೇಕೆಂಬ ಒತ್ತಾಯವಿದೆ.

ಇನ್ನೊಂದು ಪ್ರಶ್ನೆ ಅದು ನಮ್ಮ ಭಾಗದಲ್ಲಿ ಹತ್ತಿ ಬೆಳೆಯುವ ರೈತರಿಗೆ ಸಂಬಂಧಪಟ್ಟಿದ್ದು. ರೀಆರ್ಗನೈಜೇಷನ್ ಆದಮೇಲೆ ಹತ್ತಿ ಬೆಳೆಯುವ ಕ್ಷೇತ್ರಗಳಲ್ಲಿ ಧಾರವಾಡ ಭಾಗದ ಡೆಪ್ಯುಟಿ ಡೈರೆಕ್ಟರು ಸರ್ಕಾರದ ಸಹಾಯದಿಂದ ಒದಗಿಸುವ ಉತ್ತಮ ತಳಿಯ ಶುದ್ಧ ಹತ್ತಿ ಬೀಜಕ್ಕೆ ಪ್ರತಿಚೀಲಕ್ಕೆ ಒಂದೂವರೆ ರೂಪಾಯಿಯಂತೆ ಲೆವಿ ದರವನ್ನು ಗೊತ್ತುಮಾಡಿದ್ದಾರೆಂದು ತಿಳಿದು ಬರುತ್ತಿದೆ. ಆ ಪ್ರಕಾರ ಗೊತ್ತುಮಾಡಿರುವುದರಿಂದ ಶುದ್ಧ ಬೀಜದ ಬೆಲೆ ಬಹಳ ದುಬಾರಿಯಾಗಿ ರೈತರಿಗೆ ಬಹಳ ತೊಂದರೆಯಾಗುತ್ತಿದೆ. ಸರ್ಕಾರದವರು ಒದಗಿಸುವ ಉತ್ತಮವಾದ ಹತ್ತಿಯ ಬೀಜವನ್ನು ದುಬಾರಿಯಾದ ಬೆಲೆಯಲ್ಲಿ ಕೊಳ್ಳಲು ಶಕ್ತಿಯಿಲ್ಲದೆ ಅನೇಕ ರೈತರು ಪೇಟೆಯಲ್ಲಿ ಮಾರಾಟಕ್ಕೆ ಬರುವ ಕೀಳು ದರ್ಜೆಯ ಹತ್ತಿ ಬೀಜವನ್ನು ಕೊಂಡು ಉಪಯೋಗಿಸುವುದರಿಂದ ಹತ್ತಿ ಬೆಳೆಗೆ ಹಾನಿಯಾಗುವುದು. ಆದ್ದರಿಂದ ಸರ್ಕಾರದವರು ಒಂದೂವರೆ ರೂಪಾಯಿ ನಿಗದಿ ಮಾಡಿ ಅದರಿಂದ ಬರಬಹುದಾದ ಸುಮಾರು ಐವತ್ತು ಸಾವಿರ ರೂಪಾಯಿಗಳಿಗೆ ಆಸೆ ಪಡದೆ, ರೈತರು ಕೆಟ್ಟ ಬೀಜವನ್ನುಪಯೋಗಿಸಿ ಬೆಳೆಗೆ ನಷ್ಟವಾಗುವುದಕ್ಕೆ ಅವಕಾಶಕೊಡದೆ, 50 ಸಾವಿರ ರೂಪಾಯಿಗಳ ಖರ್ಚು ಬರುವುದನ್ನು ಸರ್ಕಾರದವರೇ ಹೊತ್ತುಕೊಂಡು ರೈತರಿಗೆ ಬೀಳುವ ಒಂದೂವರೆ ರೂಪಾಯಿನ ಹೊರೆಯನ್ನು ಕಡಮೆ ಮಾಡಬೇಕೆಂದು ಸಂಬಂಧಪಟ್ಟ ಮಂತ್ರಿಗಳಿಗೆ ಸೂಚಿಸುತ್ತೇನೆ. ಇದಲ್ಲದೆ ಮೊದಲಿನ ಮೈಸೂರು ಸಂಸ್ಥಾನದಲ್ಲಿ ರೈತರಿಗೆ ಶುದ್ಧ ಹತ್ತಿ ಬೀಜ ಪೂರೈಸುವ ಪದ್ಧತಿಯಿದೆ. ಆ ಭಾಗದಲ್ಲಿ ಹತ್ತಿಯ ಬೀಜದ ಮೇಲೆ ಸರ್ಕಾರದವರು ಯಾವ ಲೆವಿಯನ್ನೂ ಹಾಕಿರುವುದಿಲ್ಲ. ಹೀಗೆ ಒಂದು ಕಡೆ ಹಾಕದೆ ಮತ್ತೊಂದು ಕಡೆ ಹಾಕುವುದರಿಂದ ಪ್ರಜೆಗಳು ಅಸಂತುಷ್ಟರಾಗುವುದಕ್ಕೆ ಅವಕಾಶವಾಗಬಹುದು. ಆದ್ದರಿಂದ ಅದಕ್ಕೆ ಅವಕಾಶ ಕೊಡದಂತೆ ಮಾಡಿ ಸಂಬಂಧಪಟ್ಟ ಅಧಿಕಾರಿಗಳು ಒಂದೂವರೆ ರೂಪಾಯಿ ಶಿಫಾರಸು ಮಾಡಿರುವುದನ್ನು ಜನರ ಮೇಲೆ ಹೇರದೆ ಹತ್ತಿ ಬೆಳೆಯುವ ರೈತರಮೇಲೆ ಈ ಹೊರೆ ಬೀಳದಂತೆ ನೋಡಿಕೊಳ್ಳಬೇಕೆಂದು ವಿನಂತಿ ಮಾಡಿ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸುತ್ತೇನೆ.

11-30 A.M.

ಶ್ರೀ ಕೆ. ಎಲ್. ನರಸಿಂಹಯ್ಯ.—ಹೋದಸಲದಿಂದ ನಾನು ಬಡ್ಜೆಟ್ಟಿನಮೇಲೆ ಭಾಷಣಮಾಡಲು ಪ್ರಯತ್ನಪಡುತ್ತಿದ್ದೇನೆ. ತಮ್ಮ ದೃಷ್ಟಿ ನನ್ನಮೇಲೆ ಬೀಳಲಿಲ್ಲ. ಈಗಲಾದರೂ ನನಗೆ ಅವಕಾಶಕೊಡಿ.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ. ನನಗೆ ಕೆಲವರಿಗೆ ಮಾತ್ರ ಅವಕಾಶವನ್ನು ಕೊಡುವುದಕ್ಕೆ ಶಕ್ಯವಿದೆ. ಆದರೆ ಎಲ್ಲರೂ ಒಂದೇಸಾರಿ ಎದ್ದು ನಿಂತುಕೊಂಡರೆ, ನಾನು ಯಾವರೀತಿ ಯಾರಿಗೆ ಅವಕಾಶಕೊಡಬೇಕು? ತಾವೊಬ್ಬರೇ ಅಲ್ಲ, ಇನ್ನೂ ಮಾತನಾಡುವವರು ಎಷ್ಟೋ ಜನರಿದ್ದಾರೆ. ಕೆಲವರು ಕಾಗದಗಳನ್ನು ಬರೆದಿರುವವರೂ ಇದ್ದಾರೆ. ಅವರಿಗೂ ಆದಷ್ಟು ಜಾಗ್ರತೆಯಾಗಿ ಅವಕಾಶವನ್ನು ಕಲ್ಪಿಸಿಕೊಡಬೇಕಾಗಿದೆ.

ಶ್ರೀ ಕೆ. ಎಲ್. ನರಸಿಂಹಯ್ಯ.—ಯಾರು ಬಹಳವಾಗಿ ಚರ್ಚೆ ಮಾಡಬೇಕೆಂದು ಆತುರರಾಗಿದ್ದಾರೋ, ಅವರಿಗೆ ಮೊದಲು ಅವಕಾಶವನ್ನು ಕಲ್ಪಿಸಿಕೊಡಬೇಕು.

ಅಧ್ಯಕ್ಷರು.—ತಾವು ಈ ಸ್ಥಾನಕ್ಕೆ ಬಂದು ಕುಳಿತುಕೊಂಡರೆ, ನಮ್ಮ ಕಷ್ಟವೇನು ಎನ್ನುವುದು ಗೊತ್ತಾಗುತ್ತದೆ. ನನಗೆ ಯಾರುಯಾರು ಕಾಗದ ಬರೆದಿದ್ದಾರೆಂಬುದು ಗೊತ್ತಿದೆ. ಅವರಿಗೆಲ್ಲರಿಗೂ ಅವಕಾಶ ಕೊಡುತ್ತೇನೆ. ಎಲ್ಲರಿಗೂ ಅವಕಾಶ ಕೊಡುವುದಕ್ಕೆ ನನಗೆ ಶಕ್ಯವಿಲ್ಲ. I can give chance to about a dozen members.

ಶ್ರೀ ಜಿ. ಎಚ್. ಪಟ್ಟಣ್ಣ (ತುಮಕೂರು).—ಮಾನ್ಯ ಅಧ್ಯಕ್ಷರೇ, ನಮ್ಮ ಭರತಖಂಡಕ್ಕೆ ಸ್ವರಾಜ್ಯ ಬಂದು ಈಗ ಹತ್ತುವರ್ಷಗಳಾದುವು ಎಂದು ಹೇಳಿದರೆ ಇದು ಯಾರಿಗೂ ತಿಳಿಯದೇ ಇರುವ ವಿಚಾರವಲ್ಲ. ನಮ್ಮ ಕಾಂಗ್ರೆಸ್ ಮಹಾಶಯರು ಹಿಂದೆ ಬೇಜವಾಬ್ದಾರಿ ಸರ್ಕಾರವಿತ್ತೆಂದೂ, ಆ ಬೇಜವಾಬ್ದಾರಿ ಸರ್ಕಾರ ಹೋಗಿ ನಮ್ಮ ದೇಶಕ್ಕೆ ಸ್ವರಾಜ್ಯ ಬಂದರೆ, ನಮ್ಮ ದೇಶವನ್ನು ರಾಮರಾಜ್ಯವನ್ನಾಗಿ ಮಾಡುತ್ತೇವೆಂದೂ ಹೇಳಿದ್ದರು. ಆಗ ನಮ್ಮ ಇಂಡಿಯಾದೇಶದ ಜನಗಳೆಲ್ಲಾ ಉನ್ನತ ಸ್ಥಿತಿಗೆ ಬರುತ್ತಾರೆಂದಂದುಕೊಂಡಿದ್ದೆ. ಆದರೆ ಮೈಸೂರುದೇಶದ ಎರಡು ಕೋಟಿ ಜನಸಂಖ್ಯೆಯಲ್ಲಿ ಲಕ್ಷಾಂತರ ಜನಗಳಿಗೆ ಹೊಟ್ಟೆಗೆ ಅನ್ನವಿಲ್ಲ, ಉಡಲು ಬಟ್ಟೆ ಇಲ್ಲ, ವಾಸಿಸಲು ಮನೆ ಇಲ್ಲ—ಈ ಸ್ಥಿತಿಯಲ್ಲಿರುವ ಜನರು ಬಹಳವಾಗಿದ್ದಾರೆ. ನಮ್ಮ ಕಾಂಗ್ರೆಸ್ ಸ್ನೇಹಿತರು ಕಾಂಗ್ರೆಸ್ಸಿನಲ್ಲೇ ಇರಲಿ ಅಥವಾ ಟ್ರೆಜರಿ ಬೆಂಚಿನಲ್ಲೇ ಇರಲಿ, ನಮ್ಮ ಅವರ ವ್ಯೂಸ್‌ನಲ್ಲಿ ವ್ಯತ್ಯಾಸವೇ ವಿನಾ, ಇನ್ನು ಯಾವುದರಲ್ಲೂ ಏನೂ ವ್ಯತ್ಯಾಸ ಕಾಣುವುದಿಲ್ಲ. It is the on-looker who will see most of the game. ಇವರು ಕಣ್ಣನ್ನು ತೆರೆಯುವಂತೆ ಮಾಡಬೇಕಾದರೆ ನಾವೇ ವಿನಾ ಟ್ರೆಜರಿ ಬೆಂಚಿನವರಿಗೆ ಖಂಡಿತವಾಗಿ ಸಾಧ್ಯವಿಲ್ಲ. ಕೆಲವರು ಟ್ರೆಜರಿ ಬೆಂಚಿನವರೇ ಸರ್ಕಾರದ ಕಣ್ಣನ್ನು ತೆರೆಯುವುದಕ್ಕೆ ಹೋಗುತ್ತಿದ್ದಾರೆಂದು ಹೇಳಿದರು. ಅದು ಸಾಧ್ಯವಾಗದು. ನಾವು ಸರ್ಕಾರ ತಪ್ಪುಹೆಜ್ಜೆ ಯನ್ನಿಟ್ಟಿದ್ದಾರೆಂದು ಹೇಳುತ್ತೇವೆ. ಈ ಸರ್ಕಾರವೇ ಅಲ್ಲ. ಹಿಂದಿನ ಹತ್ತು ವರ್ಷಗಳಿಂದಲೂ ನಮ್ಮ ಸರ್ಕಾರದವರು ಬಹಳ ತಪ್ಪುಹೆಜ್ಜೆಗಳನ್ನಿಟ್ಟುಕೊಂಡೇ ಹೋಗುತ್ತಿದ್ದಾರೆ. ಈಗ ನಮ್ಮ ಮಾನ್ಯ ಹಣಕಾಸಿನ ಮಂತ್ರಿಗಳು No tax budget ಎಂದು ಹೇಳಿದರು. ನಮ್ಮ ಮಂತ್ರಿಗಳು ಹಾಗೆ ಹೇಳಿದ್ದು ಬಹಳ ಸಂತೋಷ.

ಶ್ರೀ ಟಿ. ಮರಿಯಪ್ಪ (ಹಣಕಾಸಿನ ಇಲಾಖೆಯ ಮಂತ್ರಿಗಳು).—ಮಾನ್ಯ ಸದಸ್ಯರು ತಪ್ಪಾಗಿ ತಿಳಿದುಕೊಂಡಿದ್ದಾರೆ. ನಾನು No tax budget ಎಂದು ಹೇಳಲಿಲ್ಲ. ಯೂನಿಫಾರಂ ಟ್ಯಾಕ್ಸೇಷನ್ನಿಂದ ಸುಮಾರು ಮೂರು ಕೋಟಿ ರೂಪಾಯಿಗಳ ವರಮಾನ ಬರುತ್ತದೆ ಎಂದು ಹೇಳಿದ್ದೇನೆ.

ಶ್ರೀ ಜಿ. ಎಚ್. ಪುಟ್ಟಣ್ಣ.—ವಿಪರೀತ ತೆರಿಗೆಯಿಂದ ಬಡವರು ಬದುಕುವ ಹಾಗಿಲ್ಲ, ಐಶ್ವರ್ಯವಂತರು ಉಳಿಯುವ ಹಾಗಿಲ್ಲ, ರೈತರು ತಲೆಯೆತ್ತುವ ಹಾಗಿಲ್ಲ, ವರ್ತಕರು ಉಳಿಯುವಹಾಗಿಲ್ಲ, ಕೊನೆಗೆ ದೇಶವೇ ನಾಶವಾಗುತ್ತದೆ. ಒಂದು ದೇಶ ಅಭಿವೃದ್ಧಿ

ಯಾಗಬೇಕಾದರೆ ದೇಶದಲ್ಲಿ ಉತ್ಪಾದನಾಶಕ್ತಿಯನ್ನು ಜಾಸ್ತಿ ಮಾಡಬೇಕು. ಅದರಿಂದ ಸರ್ಕಾರದ ಆದಾಯ ಹೆಚ್ಚಬೇಕು. ಖರ್ಚು ಕಡಿಮೆಯಾಗಬೇಕು. ಜೈಲಿನಿಂದ ಬಂದು ಪ್ರಭುತ್ವ ಪಕ್ಷದವರು ಸಿಂಹಾಸನವನ್ನು ಹತ್ತಿದ್ದೇವೆಂದುಕೊಂಡು, ವಿರೋಧಪಕ್ಷದವರನ್ನು ಅವರು ಅನ್ಯಾಯವಾಗಿ ಟೀಕೆ ಮಾಡುತ್ತಿದ್ದಾರೆಂದು ಹೇಳುವುದು ಸರಿಯಲ್ಲ. ನಾವು ಟೀಕೆ ಮಾಡುವುದು ನಮ್ಮ ಧರ್ಮ. ಟೀಕೆ ಮಾಡದೆ ಬಿಡತಕ್ಕದ್ದೂ ಸರಿಯಲ್ಲ. ಚಾಮರಾಜನಗರದಿಂದ ಸೊರಬದವರೆಗೆ ಕೆಲವು ಮಲೆನಾಡು ಪ್ರದೇಶಗಳಲ್ಲಿ ಹೋಗಿನೋಡಿದರೆ, ಅಲ್ಲಿ ಲಕ್ಷಾಂತರ ಎಕರೆ ಜಮೀನುಗಳನ್ನು ಎನ್‌ಕ್ರೋಚ್ ಮಾಡಿದ್ದಾರೆ. ನಾಲ್ಕು ಎಕರೆ ಭೂಮಿಯನ್ನು ಪಡೆದಿರುವವರು ನೂರಾರು ಎಕರೆಗಳಷ್ಟು ಜಮೀನಿಗೆ ಬೇಲಿ ಹಾಕಿಕೊಂಡು ಅನುಭವಿಸುತ್ತಿದ್ದಾರೆ. ಈರೀತಿ ಆಗುತ್ತಿರುವ ಎನ್‌ಕ್ರೋಚ್‌ಮೆಂಟನ್ನು ಸರ್ಕಾರದವರು ಕೇಳುವುದಕ್ಕೆ ಬದಲಾಗಿ, ಕೋಟ್ಯಾಂತರ ರೂಪಾಯಿಗಳ ಉತ್ಪತ್ತಿ ಬರುತ್ತದೆಂದು ಅನ್ಯಾಯವಾಗಿ ಬಡವರಮೇಲೆ ತೆರಿಗೆ ವಿಧಿಸಿ, ದೇಶದಲ್ಲಿನ ಬಡಜನರ ಚೊಂಕಮುರಿಯುವಂತೆ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಇದು ಸರಿಯಾಗಿಲ್ಲ.

ಹತ್ತು ಹದಿನೈದು ವರ್ಷಗಳ ಹಿಂದೆ ಜಮಾಬಂದಿ ಲೆಖ್ಖಾಚಾರಗಳನ್ನು ತನಿಖೆ ಮಾಡಬೇಕಾಗಿದ್ದರೆ, ಆಫೀಸರುಗಳು ಮೂರು-ನಾಲ್ಕು ದಿವಸಗಳಕಾಲ ಗ್ರಾಮಗಳಲ್ಲಿ ಕ್ಯಾಂಪ್ ಮಾಡಿ, ಇನ್‌ಟೆನ್ಸಿವ್ ಇನ್‌ಸ್ಪೆಕ್ಷನ್‌ಮಾಡಿ, ರೈತರ ಕಷ್ಟ ಸುಖಗಳನ್ನು ವಿಚಾರಿಸಿ ಅವರಿಗೆ ತಕ್ಕ ಅನುಕೂಲಗಳನ್ನು ಕಲ್ಪಿಸಿಕೊಡುತ್ತಿದ್ದರು. ಆದರೆ ಈಗ ಕಾಂಗ್ರೆಸ್ ಸರ್ಕಾರ ಬಂದ ಮೇಲೆ, ಆಫೀಸರುಗಳಿಗೆ ವ್ಯಾನುಗಳನ್ನು ಕೊಟ್ಟಿದ್ದಾರೆ. ನಾಲ್ಕೈದು ದಿವಸಗಳು ಅಲ್ಲಿ ಹೋಗಿ ಕ್ಯಾಂಪ್ ಮಾಡುತ್ತಿಲ್ಲ. ಹೆಚ್ಚಿನ ಔತಣೋಪಚಾರಗಳು ಚೆನ್ನಾಗಿ ನಡೆಯುತ್ತವೆ. ಹೀಗೆ ಬೇಕಾದಷ್ಟು ಅನುಕೂಲಗಳನ್ನು ಒದಗಿಸಿಕೊಳ್ಳುತ್ತಾರೆ. ಆದರೆ ರೈತರ ಕಷ್ಟಸುಖಗಳನ್ನು ಮಾತ್ರ ವಿಚಾರಿಸುವುದಿಲ್ಲ. ಯಾವ ಮಂತ್ರಿಗಳಾದರೂ ಜಮಾಬಂದಿ ತನಿಖೆ ಕಾಲದಲ್ಲಿ ಆಗುವ ಖರ್ಚು ಎಷ್ಟೆಂದು ತಿಳಿದುಕೊಂಡಿದ್ದಾರೆಯೇ? ಈ ಆಫೀಸರುಗಳು ಶ್ಯಾನುಭೋಗರ ತಲೆ ಬೋಳಿಸುತ್ತಾರೆ. ಪಟೇಲರ ತಲೆ ಹೊಡೆಯುತ್ತಾರೆ. ಈಗ ಸರ್ಕಾರದವರು ರೈತರಮೇಲೆ ವಿಧಿಸುವ ತೆರಿಗೆಯಂತೂ ದಿನೇ ದಿನೇ ಏರುತ್ತಿದೆ. ದೇಶದ ಬೆನ್ನು ಮೂಳೆಯಂತಿರುವ ರೈತರ ಕಷ್ಟಸುಖಗಳನ್ನು ವಿಚಾರಿಸುವುದು ನಮ್ಮ ಸರ್ಕಾರದ ಮುಖ್ಯ ಕರ್ತವ್ಯವಾಗಿದೆ.

ಇನ್ನು ಲ್ಯಾಂಡ್ ರೆವಿನ್ಯೂ ಕಲೆಕ್ಷನ್ ವಿಚಾರದಲ್ಲಿ ಹೇಳುವುದಾದರೆ, ಆ ಬಾಬಿನಲ್ಲಿ ಲಕ್ಷಾಂತರ ರೂಪಾಯಿಗಳ ದುರ್ವ್ಯಯ ಆಗುತ್ತಿದೆ. ನಮ್ಮ ಸರ್ಕಾರದವರು ಅದನ್ನು ಕಣ್ಣುಬಿಟ್ಟು ನೋಡಿಯೇ ಇಲ್ಲ. ಶ್ಯಾನುಭೋಗರು ಲೆಖ್ಖವನ್ನೇ ಸರಿಯಾಗಿಟ್ಟಿಲ್ಲ. ವಿಲೇಜ್ ಆಫೀಸರ್ಸ್ ಆಕ್ಟಿಗೆ ರೂಲ್ಸ್ ಆಗಿವೆ ಎಂದು ಹೇಳುತ್ತಾರೆ.

ಶ್ರೀ ಆರ್. ಚೆನ್ನಿಗರಾಮಯ್ಯ (ಸ್ಥಳೀಯ ಸಂಸ್ಥೆಗಳ ಮಂತ್ರಿಗಳು).—ನಾವು ಇನ್ನೂ ಆ ರೂಲ್ಸನ್ನು ಪೂರ್ತಿಯಾಗಿ ಒಪ್ಪಲಿಲ್ಲ.

ಶ್ರೀ ಜಿ. ಎನ್. ಪುಟ್ಟಣ್ಣ.—ಮಾನ್ಯ ಮಂತ್ರಿಗಳು ಹೇಳಿದರು. ಇರ್ರಿಗೇಷನ್ ಆಕ್ಟಿಗೆ ರೂಲ್ಸ್ ಇಲ್ಲ. ಕೋ-ಅಪರೇಟಿವ್ ಸೊಸೈಟೀಸ್ ಆಕ್ಟ್ ಆಗಿದೆ, ರೂಲ್ಸ್ ಆಗಿಲ್ಲ. ಮೈಸೂರು ಎಲಿಯನೇಟೆಡ್ ವಿಲೇಜಸ್ ಆಕ್ಟ್ 1949ರಲ್ಲಿ ಆಯಿತು. ಇವೊತ್ತಿನವರೆಗೂ ಈ ಆಕ್ಟಿಗೆ ರೂಲ್ಸ್ ಇಲ್ಲ. ಈ ರೀತಿ ಎಲ್ಲವನ್ನೂ ಅರ್ಧಂಬರ್ಧಮಾಡಿ ಜನಗಳನ್ನು ಮಟ್ಟಹಾಕಬೇಕೆಂದು ಸರ್ಕಾರದವರು ಮಾಡುತ್ತಿರುವುದನ್ನು ನೋಡಿದರೆ, ನನಗೆ ಬಹಳ ಸಂಕಟವಾಗುತ್ತದೆ. ತಾರೀಖು 9-7-1957ರಲ್ಲಿ ಇವೊತ್ತಿಗೆ ಎರಡು ಮೂರು ದಿವಸಗಳ ಹಿಂದೆ ರೆವಿನ್ಯೂ ಬೋರ್ಡಿನಲ್ಲಿ ಅಧ್ಯಕ್ಷರಾಗಿದ್ದ ಶ್ರೀ ಮಳಿಮಠ್ ಅವರು ಯಾವುದೋ ಒಂದು ಅಪೀಲನ್ನು ವಿಮರ್ಶೆಗೆ ತೆಗೆದುಕೊಂಡಿದ್ದಕಾಲದಲ್ಲಿ ನಮ್ಮ ಸರ್ಕಾರದವರು ಇನ್ನೂ ವಿಲೇಜ್ ಆಫೀಸರ್ಸ್ ಆಕ್ಟಿನ ರೂಲ್ಸ್‌ಗಳನ್ನು ಸರಿಯಾಗಿ ಏತಕ್ಕೆ ಮಾಡಲಿಲ್ಲ ಎಂದು ಕೇಳಿದರು. ಹೀಗೆ ಹೇಳಿರುವುದನ್ನು ನಾನು ಹೇಳುತ್ತಾ ಇಲ್ಲ. ಪ್ರತಿಯೊಬ್ಬ ಲಾಯರಿಗೂ ಈ ವಿಷಯ ಗೊತ್ತಿದೆ. ಇನ್ನೂ ನಮ್ಮ ಸರ್ಕಾರದವರು ಮೇಲ್ಕಂಡ ಆಕ್ಟುಗಳಿಗೆ ರೂಲ್ಸ್‌ಗಳನ್ನು ಮಾಡದೇ ಇರುವುದು ಬಹಳ ಸಂಕಟಕರವಾದ ವಿಷಯ.

ಇನ್ನು ನಮ್ಮ ಸರಕಾರದವರು ಡಿಪ್ರೆಸ್ಡ್‌ಕ್ಲಾಸನ್ನು ಮುಂದಕ್ಕೆ ತರಬೇಕೆಂದು ಅನೇಕಕಡೆಗಳಲ್ಲಿ ಫ್ರೀ ಬೋರ್ಡಿಂಗ್ ಹೋಂಗಳನ್ನು ನಡೆಸುತ್ತಿದ್ದಾರೆ. ಅದೇ ರೀತಿ ಆದಿದ್ರಾವಿಡರಿಗೂ, ಆದಿಕರ್ಣಾಟಕದವರಿಗೂ ಈ ಸೌಕರ್ಯವನ್ನು ಒದಗಿಸಿಕೊಡಬೇಕು. ಅವರನ್ನೂ ಸಹ ಉನ್ನತಸ್ಥಿತಿಗೆ ತರಬೇಕು ಹಾಗೆ ಮಾಡಿದರೆ ಬಹಳ ಸಂತೋಷ. ತುಮಕೂರಿನಲ್ಲಿ ಒಂದು ಬೋವಿ ಹಾಸ್ಟಲ್ ಇದೆ. ಅಲ್ಲಿ 15 ಜನ 20 ಜನ ಹುಡುಗರು ಹಣವನ್ನು ಡ್ರಾ ಮಾಡಿದ್ದಾರೆ. 10-15 ಜನ ವಿದ್ಯಾರ್ಥಿಗಳಿದ್ದರೆ 20-25 ಜನಕ್ಕೆ ಆ ಹಾಸ್ಟಲಿನ ಸೆಕ್ರೆಟರಿಯವರು ಫೋರ್ಜರಿ ಮಾಡಿದ್ದರಿಂದ ಎಷ್ಟೋ ಹಣ ದುರುಪಯೋಗವಾಗಿದೆ. ಇದನ್ನು ವಿದ್ಯಾ ಇಲಾಖೆಯವರು ಆಡಿಟ್‌ಮಾಡಿ ಹಾಸ್ಟಲಿನ ಸೆಕ್ರೆಟರಿಯವರನ್ನು ಎಕ್ಸ್‌ಪ್ಲನೇಷನ್ ಕೊಡಿ ಎಂದು ಕೇಳಿದ್ದಕ್ಕೆ ಅವರು ಇನ್ನೂ ಕೊಟ್ಟಿಲ್ಲ. ಹೀಗೆ ಇನ್ನೂ ಯಾವ ಯಾವ ರೀತಿಯಲ್ಲಿಯೋ ಚಿಲ್ಲರೆಬಾಬುಗಳಲ್ಲಿ ದುಡ್ಡು ಪೋಲಾಗುತ್ತಿರಬಹುದು. ಮಾನ್ಯ ಮಂತ್ರಿಗಳಿಗೆ ಈ ವಿಷಯ ಈಗಾಗಲೇ ಎನ್‌ಕ್ವೈರಿಗೆ ಬಂದಿರುವಹಾಗೆ ನನಗೆ ಕಾಣುತ್ತದೆ. ಅವರು ಆ ಬಗ್ಗೆ ವಿಚಾರಣೆ ಮಾಡಬಹುದು. ಈಗ ದೇಶದ ಹಣವನ್ನು ಲೂಟಿಮಾಡಿ, ನಮ್ಮ ಬಡಜನರನ್ನು ಸರ್ಕಾರದವರು ಹಾಳುಮಾಡುತ್ತಿದ್ದಾರೆ. ಅದು ಅವರಿಗೆ ಶ್ರೇಯಸ್ಸಲ್ಲ. ಬಡ ಜನರನ್ನು ಉದ್ಧಾರವಾಡಿದರೆ ನಮಗೂ ಒಳ್ಳೆಯದು, ನಿಮಗೂ ಒಳ್ಳೆಯದು ಮತ್ತು ದೇಶಕ್ಕೂ ಒಳ್ಳೆಯದು,

ಶ್ರೀ ಎಚ್. ಕೆ. ವೀರಣ್ಣಗೌಡ (ಮರಾಮತ್ತು ಇಲಾಖೆಯ ಮಂತ್ರಿಗಳು).—ತಾವು ಹೇಳಿದ ಹಾಸ್ಟಲಿಗೆ ಸಂಬಂಧಪಟ್ಟವರನ್ನು ಸಸ್‌ಪೆನ್ಷನ್ನಿನಲ್ಲಿಟ್ಟಿದ್ದಾರೆ.

ಶ್ರೀ ಜಿ. ಎನ್. ಪುಟ್ಟಣ್ಣ.—ನಾಳೆ-ನಾಡಿದ್ದು ಅವರನ್ನು ಡ್ಯೂಟಿಗೆ ತೆಗೆದುಕೊಳ್ಳಬಹುದು. ಬೋವಿ ಜನತೆ ಬೆಳೆಯಬೇಕು, ದೇಶದ ದುಡ್ಡು ಪೋಲಾಗಬಾರದು. ಆ ಜನತೆ ಸುಖವಾಗಿ ಬದುಕಲಿ, ಅವರ ಮಕ್ಕಳು ಮರಿಗಳು ಚೆನ್ನಾಗಿ ಬಾಳಲಿ, ದುರುಪಯೋಗಪಡಿಸುವ ನೀಚರಿಗೆ ಇಂತಹ ಅವಕಾಶ ಕೊಟ್ಟರೆ ಇದರಿಂದ ಸರ್ಕಾರಕ್ಕೆ ಒಳ್ಳೆಯದಲ್ಲ.

ಇನ್ನೊಂದು ಸ್ವಾಮೀ, Mysore Alienated Village (Protection of Tenants) Act, 1949 ಎನ್ನುವುದು ಇದೆ. ಇದರಿಂದ ರೈತ ಉಳಿಯುವಂತೆಯೇ ಇಲ್ಲ. ಜೋಡಿದಾರನ ಮೇಲೆ ರೈತ ಮತ್ತು ರೈತನ ಮೇಲೆ ಜೋಡಿದಾರರ ದೂರುಗಳು ಹೀಗಾಗಿ ಅನೇಕ ಗ್ರಾಮಗಳು ಹಾಳಾಗಿಹೋಗು

(ಶ್ರೀ ಜಿ. ಎನ್. ಪುಟ್ಟಣ್ಣ.)

ತ್ತಿವೆ ಮತ್ತು ಬಹಳ ಅನ್ಯಾಯವಾಗುತ್ತಿದೆ. ಅಲ್ಲದೆ ಸಿವಿಲ್ ಪ್ರೊಸೀಜರ್ ಕೋಡಿನಂತೆ "No civil court can entertain suits" ಎನ್ನುವಂತಾಗಿದೆ. ಅಲ್ಲದೆ 1949ರಲ್ಲಿ ಈ ಆಕ್ಟಿಗೆ ರೂಲ್ಸನ್ನೇನೂ ಮಾಡಿಲ್ಲದಹಾಗಿದೆ. ಮಾಡಿದ್ದರೆ ಅನುಕೂಲಗಳಾಗುತ್ತಿದ್ದವು. ಅದರಿಂದಾಗಿ ಈ ನ್ಯೂನತೆಗಳನ್ನೆಲ್ಲ ಸರಿಪಡಿಸಬೇಕಾಗಿದೆ.

ನಮ್ಮ ಮಾನ್ಯ ಮಂತ್ರಿಗಳು ಈ ಪೊಲಿಟಿಕಲ್ ಸಫರರ್ಸ್‌ಗಳಿಗೆ ಜಮೀನು ಕೊಡುವ ವಿಚಾರದಲ್ಲಿ ಹೇಳಿದರು—ಈ ಪೊಲಿಟಿಕಲ್ ಸಫರರ್ಸ್ ಎನ್ನುವುದರ ಡೆಫಿನಿಷನ್ನು ಲ್ಯಾಂಡ್ ರೆವೆನ್ಯೂ ರೂಲ್ಸಿನಲ್ಲಿದೆ ಎಂದು ಹೇಳಿದ್ದರು. ಅದರಂತೆ ನಾನು ಆ ರೂಲ್ಸಿನಲ್ಲಿರುವುದೆಲ್ಲವನ್ನೂ ಓದಿದೆನು. ಅದರೆ ಎಲ್ಲೂ ಇದರ ಡೆಫಿನಿಷನ್ನು ಇರುವುದು ಕಂಡುಬರಲಿಲ್ಲ. ಈ ರೂಲ್ಸ್‌ನಲ್ಲಿ ನೋಡಿದರೆ ಅದರಲ್ಲಿ ಪ್ರೊಸೀಜರ್ ಇದೆಯೇ ವಿನಾ ಡೆಫಿನಿಷನ್ನಿನ ವಿಷಯವಾಗಿ ಏನೂ ಇಲ್ಲ. ಈ ತರಹದ ನಿದರ್ಶನಗಳು ನೂರಾರಿವೆ. ಇವೊತ್ತು ಜಮೀನು ತೆಗೆದುಕೊಳ್ಳುತ್ತಾನೆ. ನಾಳೆ ಮಾರಿಬಿಡುತ್ತಾನೆ. It has become a big bargaining business. ಇದೊಂದೂ ಸರ್ಕಾರಕ್ಕೆ ತಿಳಿಯುತ್ತಲೇಇಲ್ಲ. ಆದಿಕರ್ನಾಟಕರಿಗೆ ಜಮೀನನ್ನು ಕೊಡಬೇಕು, ಮತ್ತು ಮಾರಾಟ ಮಾಡಕೂಡದೆಂಬ ನೀತಿಯೇನೋ ಇದೆ. ಆದರೆ ಅದರಂತೆ ಸರಿಯಾಗಿ ಬಡ ಜನಗಳಿಗೆ ಉಪಯೋಗವಾಗುತ್ತಿಲ್ಲ ಮತ್ತು ಬಹಳ ಅನ್ಯಾಯವಾಗುತ್ತಿದೆ.

ನಮ್ಮ ರಾಜ್ಯಕ್ಕೆ ಎಂದರೆ ಭರತಖಂಡಕ್ಕೆ ಸ್ವಾತಂತ್ರ್ಯ ಬಂತೆಂದು ಎಲ್ಲರಿಗೂ ಸಂತೋಷವಾಗಿತ್ತು. ಆದರೆ ನಿಜವಾಗಿ ಸ್ವಾತಂತ್ರ್ಯ ಬಂದಿದೆಯೇ ಎಂದು ನೋಡಿದರೆ ಬಂದಿಲ್ಲವೆಂದು ಹೇಳಬೇಕಾಗಿದೆ.

ಅಧ್ಯಕ್ಷರು.—ನಿಮಗೂ ಸ್ವಾತಂತ್ರ್ಯ ಬಂದಿದೆಯಲ್ಲವೇ? (ನಗು)

ಶ್ರೀ ಜಿ. ಎನ್. ಪುಟ್ಟಣ್ಣ.—ನಮಗೆ ಬಂದಿಲ್ಲ ಸ್ವಾಮೀ. ಆದರೆ ಕೆಲವರಿಗೆ ಮಾತ್ರ ಸ್ವಾತಂತ್ರ್ಯ ಬಂದಿದೆ. ಮೊನ್ನೆತಾನೇ ನಮ್ಮ ಮಾನ್ಯ ಮಂತ್ರಿಗಳು ಮತ್ತು ಅನೇಕ ದೊಡ್ಡ ಮನುಷ್ಯರುಗಳು ನಮ್ಮ ಟೌನಿಗೆ ಬಂದಿದ್ದರು. ಶಿವ ಶಿವಾ! ಅಗ್ಗೆ ನಮ್ಮ ಕಷ್ಟಗಳು ಎಷ್ಟಿತ್ತೆಂದು ಹೇಳಲು ಅಸಾಧ್ಯವಾಯಿತು. ಸ್ವಾಮಿ, ದುಡ್ಡು ಕೊಟ್ಟು ವೋಟುಗಳನ್ನು ಇವರುಗಳು ಸಂಪಾದಿಸಬೇಕಾಗಿದೆ. ಉದಾಹರಣೆಗಾಗಿ ಒಂದು ವಿಷಯವನ್ನು ತಮ್ಮಲ್ಲಿ ಅರಿಕೆ ಮಾಡುತ್ತೇನೆ. ಈ ಚುನಾವಣೆ ಪ್ರಚಾರದ ಸಮಯದಲ್ಲಿ 7-3-57ನೇ ದಿನ ರಾತ್ರಿ ಸುಮಾರು ಒಂದೂವರೆ ಗಂಟೆ ಸಮಯದಲ್ಲಿ ಅನೇಕ ದೊಡ್ಡ ಮನುಷ್ಯರು, ಕಾಂಗ್ರೆಸ್ ಪಕ್ಷಕ್ಕೆ ಸೇರಿದವರು ದುಡ್ಡುಗಳನ್ನು ಹಂಚಿದರು. ಶ್ರೀ ಬಿ. ಹುಚ್ಚೇಗೌಡರು ಮತ್ತು ಇತರ ದೊಡ್ಡ ಮನುಷ್ಯರು ಕಂಡಿದ್ದಾರೆ. ಅಲ್ಲದೆ 8-3-57ನೇ ದಿನ ರಾತ್ರಿ, ಸೀಮೆಎಣ್ಣೆ ಡಬ್ಬಗಳಲ್ಲಿ ಹೆಂಡವನ್ನು ತುಂಬಿ ಲಾರಿಗಳ ಮೂಲಕ ಅಲ್ಲಿಗೆ ತಂದಿದ್ದಾರೆ. ತುಮಕೂರು ಪ್ರೊಹಿಬಿಟೆಡ್ ಏರಿಯಾ ಎಂಬುದನ್ನು ತಿಳಿದೂ ಕೂಡ ಹೀಗೆ ಮಧ್ಯರಾತ್ರಿ ವೇಳೆಯಲ್ಲಿ ಹೆಂಡವನ್ನು ತಂದು ವೋಟುಗಳನ್ನು ಗಳಿಸುವುದಕ್ಕೋಸ್ಕರ ಹಂಚಿದರೆ ಇದು ಆ ಪಕ್ಷಕ್ಕೆ ಒಳ್ಳೆಯದೇ ಎಂದು ಕೇಳಬೇಕಾಗಿದೆ. ಅಲ್ಲದೆ ಪೋಲೀಸು ಇಲಾಖೆಯವರಿಗೆ ಈ ಮೇಲಿನ ದೂರುಗಳನ್ನು ತಿಳಿಸಿದರೆ ಅವರು "ನಾವೇನೂ ಮಾಡುವುದಕ್ಕಾಗುವುದಿಲ್ಲ" ಎಂದು ತಟಸ್ಥರಾದರು. ಹೀಗಾಗಿ ಇಲ್ಲಿಯ ಕಾಂಗ್ರೆಸ್ ಕ್ಯಾಂಡಿಡೇಟುಗಳಿಗೂ ಇತರ ಪಕ್ಷದ ಸ್ಪರ್ಧಿಗಳಿಗೂ ಘರ್ಷಣೆಯಾಗುವ ಸಂಭವ ಬರುತ್ತದೆ ಎಂದು ತಿಳಿದು, ನಾನು, ನನ್ನ ಮಿತ್ರರಾದ ಕೆಲವರು, ಮತ್ತು ನಮ್ಮ ಪಾರ್ಟಿಯ ಮುಖ್ಯರಾದ ಶ್ರೀ ಹುಚ್ಚೇಗೌಡರು ಇವರೊಡನೆ ರಾತ್ರಿಯಲ್ಲೇ ಹೋಗಿ ಡಿ. ಎಸ್. ಪಿ.ಯವರನ್ನು ಎಬ್ಬಿಸಿದೆವು ಮತ್ತು ಅವರಲ್ಲಿ ಈ ವಿಷಯಗಳೆಲ್ಲವನ್ನು ತಿಳಿಸಿದರೆ ಅವರು ಏನನ್ನೂ ಮಾಡುವುದಕ್ಕೆ ಆಗುವುದಿಲ್ಲ ಎಂದರು ಮತ್ತು ಏನೂ ಕ್ರಮ ತೆಗೆದುಕೊಳ್ಳಲು ಕೂಡ ಪ್ರಯತ್ನಪಡಲಿಲ್ಲ. ಹೀಗೆ ಇವೊತ್ತು ನಮಗೆ ಸ್ವಾತಂತ್ರ್ಯ ಬಂದಿದೆ ಸ್ವರಾಜ್ಯ ಬಂದಿದೆ ಎಂದು ಹೇಳಿದರೆ ಇದು ನ್ಯಾಯವಾದ ಮಾತಾಗುವುದಿಲ್ಲ. ಯಾವುದಕ್ಕಾದರೂ ಒಂದು ನೀತಿ ಅಥವಾ ಒಂದು ಧರ್ಮವಿರಬೇಕು. ಹಾಗೆ ಮಾಡಿಲ್ಲ. ಯಾವ ಪಕ್ಷವೇ ಆಗಲಿ ನ್ಯಾಯವಾದ ರೀತಿಯಲ್ಲಿ ಹೋದರೆ ಅವರಿಗೂ ಒಳ್ಳೆಯದು. ಈ ರೀತಿಯ ತಪ್ಪು ದಾರಿಯಲ್ಲಿ ಹೋಗುವುದು ಸರಿಯಾದದ್ದಲ್ಲ. ಈಗ ನಾನು ಹೇಳುತ್ತಿರುವುದು ಸರಕಾರ ಹೋಗುತ್ತಿರುವ ಮಾರ್ಗ ಅದರ ನೀತಿ ಮತ್ತು ಅವರು ಮಾಡುವ ಕೆಲಸಗಳು ಯಾವುದರಿಂದಲೂ ಜನಗಳಿಗೆ ಸಹಾಯವಾಗುತ್ತಿಲ್ಲ. ಮತ್ತು ಜನಗಳಿಗೆ ಅಪಾರವಾದ ಹಿಂಸೆಗಳಾಗುತ್ತಿವೆ. ಬಹಳ ಸಣ್ಣ ಮಾರ್ಗದಲ್ಲಿ ಹೋಗುತ್ತಾರೆ. ಹೀಗೆ ಹೋಗುವುದು ತಪ್ಪು. ಈ ರೀತಿ ಹೆಂಡವನ್ನು ತಂದು ತಮ್ಮ ಕಾಂಗ್ರೆಸ್ಸು ಪಕ್ಷವನ್ನು ಮುಂದೆ ತರಬೇಕೆಂದು ಮಾಡುವುದು ದೊಡ್ಡತನವಲ್ಲ. ಮತ್ತು ಈ ರೀತಿಯಾಗಿ ಮಾಡಿದರೆ ಕಾಂಗ್ರೆಸ್ಸು ಪಕ್ಷದ ಹೆಸರು ಉಳಿಯುವಂತಿಲ್ಲ.

ಮತ್ತೆ ಈ ಗವರ್ನಮೆಂಟು ಅಫಿಷಿಯಲ್ಸ್ ಎಲೆಕ್ಷನ್ ಟೈಮಿನಲ್ಲಿ ಯಾವ ಒಂದು ಪಾರ್ಟಿಗೂ ಸೇರಕೂಡದೆಂದು ಸರಕಾರದ ಒಂದು ಆರ್ಡರೇನೋ ಇದೆ. ಆದರೆ ಅದರಂತೆ ನಡೆಯುತ್ತಿಲ್ಲ. ಈಗ ನೋಡಿದರೆ ಏನಾಗಿದೆ ಎಂದರೆ ಒಬ್ಬ Revenue Inspector ನಿಂದ, ಪಟೇಲ್ ಶ್ಯಾನುಭೋಗರ ವರೆಗೆ ಎಲ್ಲರೂ ಕಾಂಗ್ರೆಸ್ಸು ಆಡಳಿತ ಪಕ್ಷವೆಂದು ಅವರಿಗೇ ಹೆಚ್ಚಿನ ಸಹಾಯ ಮಾಡುತ್ತಿದ್ದಾರೆ. ದಯವಿಟ್ಟು ಇದನ್ನು ಸರಕಾರ ಸರಿಯಾಗಿ ಪರಿಶೀಲಿಸಿ, ಇದನ್ನು ನೋಟು ಮಾಡಿಕೊಂಡು, ರಿಪ್ಲೈ ಕೊಡುವಾಗ ಸರಿಯಾದ ರಿಪ್ಲೈ ಕೊಡಬೇಕೆಂದು ಕೋರುತ್ತೇನೆ.

ಇನ್ನೊಂದು ವಿಷಯ ಸ್ವಾಮಿ. ನಮ್ಮ ಮಾನ್ಯ ಚೀಫ್ ಮಿನಿಸ್ಟರು ಇಲ್ಲಿಲ್ಲ. ಈ ಮಂತ್ರಿಗಳು ಟೂರು ಹೊರಟರೆ, ಇವೊತ್ತಿನ ದಿನ ಒಬ್ಬ ಮಂತ್ರಿಗಳು ಒಂದು ಜಾಗಕ್ಕೆ ಹೊರಟರೆ, ಅದೇ ಜಾಗಕ್ಕೆ ಆ ದಿನವೇ ರಾತ್ರಿ ಇಲ್ಲ ಮರುದಿನವೇ ಮತ್ತೊಬ್ಬ ಮಂತ್ರಿಗಳು ಅದೇ ಜಾಗಕ್ಕೆ ಬರುತ್ತಾರೆ. ಇದರಿಂದ ಅಲ್ಲಿರುವ Officersಗಳಿಗೆ ಸರಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ಹೊಸ ಸರಕಾರ ಬಂದ ಮೇಲೆ ಮುಖ್ಯಮಂತ್ರಿಗಳು ಒಂದು ಸರ್ಕ್ಯುಲರ್ ಏನನ್ನೋ ಕೊಟ್ಟಿದ್ದಾರೆಂದು ತಿಳಿಯಿತು. ಅದು ಡೆಪ್ಯುಟಿ ಕಮಿಷನರವರಿಗೆ ಬಂದಿದೆಯಂತೆ. ಆದರೆ ಅದರಂತೆ ಕಾರ್ಯಗತ ಮಾಡುವುದೇ ಕಷ್ಟವಾಗಿದೆ. ಇನ್ನು ಮುಂದೆಯಾದರೂ ಈ ರೀತಿ ಟೂರುಗಳನ್ನು ಮಾಡುವಾಗ ಒಂದು ನಿರ್ದಿಷ್ಟವಾದ ನೀತಿಯನ್ನನುಸರಿಸಿ ಮಾಡಬೇಕೆಂದು ನನ್ನ ಪ್ರಾರ್ಥನೆ.

ಇನ್ನು ಸರ್ವೇ ಸೆಟಲ್‌ಮೆಂಟ್ ವಿಚಾರದಲ್ಲಿ ಸ್ವಲ್ಪ ಹೇಳಬೇಕಾಗಿದೆ. ಸುಮಾರು ಎಂಟು-ಹತ್ತು ವರ್ಷಗಳಿಂದ ರಿಕಾರ್ಡ್ ಆಫ್ ರೈಟ್ಸ್ ರೂಲ್ಸಿನಂತೆ, ಒಂದೊಂದು ಆಫೀಸಿನಲ್ಲಿಯೂ ಸುಮಾರು ಐದಾರು ಸಾವಿರ ಕೇಸುಗಳು ಸೆಟಲಾಗದೆ ಹಾಗೆಯೇ ಇವೆ.

ಅಲ್ಲದೆ ಈ ಕಡೆ R. R. Inspectionಗಳೂ ಕೂಡ ಆಗಿಲ್ಲ. ಅಲ್ಲದೆ ಈಗ ಪಕ್ಕಾ ಪೋಡಿ ಪದ್ಧತಿ ಈ ಕಡೆ ಗಳಲ್ಲಿದೆ. ಇದರಂತೆ ಈಗ ಒಂದು 4—12 ಎಕರೆ ಜಮೀನಿದ್ದವರು ಅದರಲ್ಲಿ ಕೆಲವರು ಬೆಳೆಗಳನ್ನು ಬೆಳೆಯದೆ lease ಮಾಡಿರುತ್ತಾರೆ, ಕೆಲವು ಭಾಗ ಗಳನ್ನು upset ಪ್ರೈಸಿಗೆ ಮಾರಿರುತ್ತಾರೆ. ಇದರ ವಿವರಗಳನ್ನು ಹುಡುಕಲು ರಿಕಾರ್ಡುಗಳನ್ನು ನೋಡಿ ದರೆ ಅದರ ವಿವರಗಳು ಸಿಕ್ಕುತ್ತಿಲ್ಲ. ಹೀಗಾಗಿ ಸರ್ಕಾ ರಕ್ಕೆ ಲಕ್ಷಾಂತರ ರೂಪಾಯಿಗಳ ಆದಾಯ ಬರುವುದು ಸರಿಯಾಗಿ ಬರುತ್ತಿಲ್ಲ. ಇವುಗಳನ್ನು ಸರಿಪಡಿಸುವುದ ಕ್ಕಾಗಿ ನಾವು ಸರ್ಕಾರದ ಕಣ್ಣು ಮುಂದೆ ಇಂತಹ ತಪ್ಪುಗಳನ್ನಿಟ್ಟು ಅದನ್ನು ಸರಿಪಡಿಸುವುದೇ ನನ್ನ ಉದ್ದೇಶವಾಗಿದೆ.

(Sri T. N. Mudalagiri Gowda tried to intervene).

Sri G. N. PUTTANNA.—I won't yield, there is no time to yield, Sir. I should not be disturbed.

ಮೊನ್ನೆ ನಮ್ಮ Constituencyಗೆ ಸೇರಿದ ಸಿರಾ ತಾಲ್ಲೂಕು ಮತ್ತು ಮಧುಗಿರಿ ಇದರ ಸುತ್ತಮುತ್ತ ಇರುವ ಗ್ರಾಮಗಳವರು ಸೇರಿ ಒಂದು ಗ್ರಾಮದೇವತೆ ಹಬ್ಬವನ್ನು ಮಾಡಿದರು. ಇದಕ್ಕಾಗಿ ಅನೇಕ ಕುರಿ, ಕೋಣ, ಎಮ್ಮೆ ಮುಂತಾದ ಪ್ರಾಣಿಗಳನ್ನು ತಂದು ಕೊಲೆಮಾಡಿದರು. ಹೀಗೆ ಕೊಲೆಮಾಡುವುದಕ್ಕೆ ಸರ್ಕಾರ ಕಾನೂನು ವಿರೋಧವಾಗಿದೆ. ಆದ್ದರಿಂದ ಇಲ್ಲಿ ಅವಕಾಶವಿರಲಿಲ್ಲ. ಈ ವಿಷಯವನ್ನು ಅಲ್ಲಿಯ ಡೆಪ್ಯುಟಿ ಕಮಿಷನರಿಗೂ ಪೋಲೀಸು D.S.P.ಗಳಿಗೂ ತಿಳಿಸಿದರೆ ಏನೂ ಪ್ರಯೋಜನವಾಗಲಿಲ್ಲ. ಎಷ್ಟೋಸಲ ಕಂಪ್ಲೈಂಟುಗಳನ್ನು ಬರೆದಿದ್ದರೂ ಕೂಡ ಅದಕ್ಕೆ ರಿಪ್ಲೈಕೂಡ ಬರಲಿಲ್ಲ. ಇನ್ನು ಮುಂದೆಯಾದರೂ ಈ ರೀತಿಯಾಗದಂತೆ ಸರಕಾರದವರು ತಕ್ಕ ಪ್ರಯತ್ನ ಗಳನ್ನು ಮಾಡಬೇಕೆಂದು ನನ್ನ ಕೋರಿಕೆ.

Sri V. KUMARA NAIK (Shorapur).—On a point of order Sir, I would like to know whether the same concession of time would be allowed to other members speaking hereafter.

Mr. SPEAKER.—That is no point of order.

ಶ್ರೀ. ಜಿ. ಎನ್. ಪುಟ್ಟಣ್ಣ.—ಮತ್ತೊಂದು ವಿಷಯ ವನ್ನು ಹೇಳಬೇಕಾಗಿದೆ. ಹಿಂದೆ ರಾವಣಾಸುರನು ಲಂಕೆಯಲ್ಲಿ ರಾಜ್ಯಭಾರ ಮಾಡುತ್ತಿದ್ದನು. ಅವನು ಒಂದು ದ್ವೀಪದಲ್ಲಿ ಸುಖವಾಗಿ ಮೆರೆಯುತ್ತಿದ್ದೇನೆಂದು ಹೆಮ್ಮೆಯಿಂದಿದ್ದನು. ಏಕೆಂದರೆ, ಆ ಲಂಕಾದ್ವೀಪದ ಸುತ್ತಲು ನೀರಿನಿಂದ ಆವರಿಸಲ್ಪಟ್ಟ ಸಮುದ್ರವಿತ್ತು. ಹಾಗಿದ್ದರೂ ಕೂಡ ಒಂದುಸಮಯದಲ್ಲಿ ಆಂಜನೇಯನು ಅಲ್ಲಿಗೆ ಬಂದು ಈ ಲಂಕಾಪಟ್ಟಣವನ್ನು ಬೆಂಕಿಯಿಂದ ಸುಟ್ಟನು ಮತ್ತು ಈ ರಾವಣಾಸುರನ ಅಹಂಕಾರ ವನ್ನು ಅಡಗಿಸಿದನು. ಹಾಗೆ ಈಗಿನ ಕಾಂಗ್ರೆಸ್ಸು ಸರ ಕಾರ ಯಾರ ಭಯವೂ ಇಲ್ಲದೆ ಆಡಳಿತ ನಡೆಸುತ್ತಿದೆ. ಹಾಗೆ ಮಾಡಬಾರದು. ಆಡಳಿತ ಪಕ್ಷವು ಯಾವಾಗಲೂ ಒಂದು ಸತ್ಯದ ದಾರಿಯಲ್ಲಿ ನಡೆಯಬೇಕು. ಈ ರೀತಿಯ ಒಂದು ಭಾವನೆಯಿಂದ ಇನ್ನು ಮುಂದೆ ಯಾದರೂ ಒಂದು ಧರ್ಮದಿಂದ ಸರಿಯಾದ ದಾರಿ ಯಲ್ಲಿ ನಡೆಯಬೇಕೆಂದು ಸರಕಾರವನ್ನು ಕೋರುತ್ತೇನೆ. ಇಲ್ಲವಾದರೆ ಕಾಂಗ್ರೆಸ್ ಸರ್ಕಾರದ ಪತನವಾಗುತ್ತದೆ.

ಶ್ರೀ ಕೆ. ಎಲ್. ನರಸಿಂಹಯ್ಯ (ಹೆಬ್ಬೂರು).—ಸ್ವಾಮಿ, ಈ 57-58ನೆಯ ಸಾಲಿನ ಬಡ್ಜೆಟ್ಟನ್ನು ಸಂತೋಷದಿಂದ ಅಂಗೀಕರಿಸುತ್ತ ಕೆಲವು ವಿಚಾರ ಗಳನ್ನು ಮಾತ್ರ ತಿಳಿಸಲು ನಾನು ನಿಂತಿದ್ದೇನೆ. ಈ ಗಾಗಲೇ ಈ ಅಸೆಂಬ್ಲಿಯಲ್ಲಿ ಅನೇಕರು ದೊಡ್ಡ ದೊಡ್ಡ ವಿಷಯಗಳನ್ನು ತಿಳಿಸಿದ್ದಾರೆ ಮತ್ತೆ ಕೆಲವರು ಮತ್ತು ನಮ್ಮ ಶ್ರೀ ಪುಟ್ಟಣ್ಣನವರು ಜನರಿಗೆ ಬೇಕಾದಹಾಗೆ ಅನ್ಯಾಯವಾಗುತ್ತಿದೆ ಎಂದು ಹೇಳಿದರು. ಆದರೆ ಹೀಗೆ ಹೇಳಲು ಇಂತಹ ಪ್ಲಾಟ್‌ಫಾರಂಗಳು ಬೇಕಾ ದಷ್ಟಿವೆ ಮತ್ತು ಇದನ್ನು ಕೇಳಿ ಸಾಕಾಗಿ ಹೋಗಿದೆ.

ಈಗ ಪಂಚವಾರ್ಷಿಕ ಯೋಜನೆಯ ಎರಡನೆಯ ಅವಧಿ ಬಂದಿದೆ. ಇದನ್ನು ಕಾರ್ಯಾಗತ ಮಾಡುವುದಕ್ಕೆ ನಾವು ಪ್ರಯತ್ನಮಾಡಬೇಕು.

ಏನೋ ಅಲ್ಲಲ್ಲಿ ಸ್ವಲ್ಪ ವ್ಯತ್ಯಾಸವಿದೆಯೆಂದು ಹೇಳು ವುದೇ ಹೊರತು, ದೇಶಕ್ಕೆ ಅನುಕೂಲವಾಗುವ ಕೆಲಸಗಳ ವಿಷಯದಲ್ಲಿ ನಮ್ಮ ವಿರೋಧ ಪಕ್ಷದವರಿಂದ ನಾವು ಏನೇನೂ ಕಲಿತುಕೊಳ್ಳಲಿಲ್ಲ. ಈಗ ನಾನಾ ದರೂ ನನಗೆ ಗೊತ್ತಿರುವಷ್ಟು ಹೇಳುತ್ತೇನೆ. ನನ್ನ ಮಾನ್ಯ ಸ್ನೇಹಿತರುಗಳು ತಿಳಿದುಕೊಳ್ಳಲಿ.

ಹೊಸದಾಗಿ ಈ ಬಜೆಟ್ಟಿನಲ್ಲಿ ಕಾಣುವುದು ಕೋ-ಆಪರೇಷನ್ನಿಗೆ ಹೆಚ್ಚಿಗೆ ಪ್ರಾಮುಖ್ಯತೆ ಕೊಟ್ಟಿರುವುದು. ಕೋ-ಆಪರೇಷನ್ನಿನಿಂದ ಎಲ್ಲವೂ ಬೆಳೆಯುತ್ತದೆಂದು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲೂ ತಿಳಿ ಸಿದೆ. ಆದ್ದರಿಂದ ನಮ್ಮ ವಿರೋಧ ಪಕ್ಷದ ಸ್ನೇಹಿತರು ಆದಷ್ಟು ಮಟ್ಟಿಗೆ ಕೋ-ಆಪರೇಷನ್ ದಯಪಾಲಿಸಿದರೆ ದೇಶಕ್ಕೆ ಹೆಚ್ಚಿನ ಅನುಕೂಲವಾಗುತ್ತದೆ. ಅದನ್ನು ಬಿಟ್ಟು ಇಲ್ಲದ ಸಲ್ಲದ ವಿಚಾರಗಳನ್ನೆಲ್ಲಾ ಮಾತನಾಡಿ ಕಾಲ ಕಳೆಯುತ್ತಿದ್ದಾರೆ. ಸಹಕಾರ ನೀಡುವ ವಿಷಯ ದಲ್ಲಿ ವಿರೋಧ ಪಕ್ಷದವರು ಹೆಚ್ಚಿಗೆ ಕಾಲವಿನಿಯೋಗ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ನಾನೀಗ ಹೇಳಬೇಕಾದದ್ದು ಬೇಕಾದಷ್ಟಿದೆ. ಮೊದ ಲನೆಯದಾಗಿ ಸರ್ಕಾರದಲ್ಲಿರತಕ್ಕ ಲೋಪದೋಷ ಗಳನ್ನು ಹೇಳುವುದು ನನ್ನ ಕರ್ತವ್ಯ. ವ್ಯವಸಾಯದ ಇಲಾಖೆಯಿಂದ ರೈತರಿಗೆ ಎಷ್ಟರಮಟ್ಟಿನ ಅನುಕೂಲ ದೊರೆಯಬೇಕೋ ಅಷ್ಟು ದೊರಕುತ್ತಿಲ್ಲ. ಈ ದೋಷ ವಾದರೋ ಮೇಲಿನ ಅಧಿಕಾರಿಗಳಲ್ಲೇ ಇದೆ. ಸಣ್ಣ ಸಣ್ಣ ಅಧಿಕಾರಿಗಳಲ್ಲಾಗಿದ್ದರೆ ಸುಲಭವಾಗಿ ಸರಿಪ ಡಿಸಬಹುದು. ಮೇಲಿನ ಅಂತಸ್ತಿನಲ್ಲೇ ಇದ್ದರೆ ಕಷ್ಟ. ಬಾವಿಗಳನ್ನು ತೋಡಿಸಿಕೊಳ್ಳುವುದಕ್ಕೆ ಸಬ್ಸಿಡಿ ಕೊಟ್ಟು ಸಹಾಯ ಮಾಡುವುದರಿಂದ ಹೆಚ್ಚಿಗೆ ಬಾವಿಗಳಾಗಿ ದೇಶಕ್ಕೆ ಅದೊಂದು ಆಸ್ತಿಯಾಗುತ್ತದೆ. ಹಾಗೆಯೇ ಕಟ್ಟೆ, ಸಣ್ಣ ಕೆರೆಗಳನ್ನು ಕಟ್ಟಿಸುವುದಕ್ಕೆ ಸಹಾಯ ಮಾಡುವುದರಿಂದ ಅವು ಮುಂದೆ ದೇಶದ ಆಸ್ತಿಯಾಗಿ ಉಳಿಯುತ್ತವೆ. ಅಂಥದಕ್ಕೆ ಹೆಚ್ಚಿನ ಉತ್ತೇಜನ ಸರ್ಕಾರ ಕೊಡುತ್ತಿಲ್ಲ. ಒಂದು ಉದಾಹರಣೆ ಹೇಳು ವುದಾದರೆ ನಮ್ಮ ಕ್ಷೇತ್ರಕ್ಕೇ ಸಂಬಂಧಿಸಿದಂತೆ ಪುಳ ಕುಂಟೆ ಕೆರೆಯಿದೆ. 1947ನೇ ಇಸವಿಯಲ್ಲಿ ಇದು ಎಸ್ಟಿ ಮೇಟ್ ಆಗಿದ್ದಂಥಾದ್ದು ಈ ಹೊತ್ತಿನವರೆಗೂ ಪೂರ್ತಿ ಯಾಗದೆ ಹಾಗೆಯೇ ಉಳಿದಿದೆ. ಎಸ್ಟಿಮೇಟ್ ಆದ ತಕ್ಷಣ ಕೆಲಸ ಶುರುವಾಗಿದ್ದರೆ, ಆ ಎಸ್ಟಿಮೇಟ್ ಪ್ರಕಾರ 10,000 ರೂಪಾಯಿಗಳಿಗೇ ಆಗಿಬಿಡುತ್ತಿತ್ತು. ಈಗ ಇದಕ್ಕೆ ರಿವೈಸ್ ಎಸ್ಟಿಮೇಟ್ ಆಗಿ 69,000 ರೂಪಾಯಿಗಳು ಖರ್ಚಾಗುತ್ತವೆಂದು ಅಂದಾಜಾಗಿದೆ ಯೆಂಥು ತಿಳಿಯ ಬಂದಿದೆ. ಇಲಾಖೆಯಲ್ಲಿ ದಕ್ಷತೆಯಿಲ್ಲ ದಿರುವುದರಿಂದಲ್ಲವೇ ಹೀಗಾಗಿರುವುದು? ಆಫೀಸುಗ ಳೇನೋ ದೊಡ್ಡವಾದುವು ಅಷ್ಟೇ. ಅಧಿಕಾರವೆಲ್ಲಾ

(ಶ್ರೀ ಕೆ. ಎಲ್. ನರಸಿಂಹಯ್ಯ)

ಕೇಂದ್ರೀಕೃತವಾಗಿಯೇ ಉಳಿದಿವೆ. ಅಧಿಕಾರಗಳ ವಿಕೇಂದ್ರೀಕರಣ ಮುಖ್ಯವಾಗಿ ಆಗಬೇಕಾಗಿವೆ.

ವ್ಯವಸಾಯದ ಇಲಾಖೆಯ ವಿಷಯ ಮಾತನಾಡುವಾಗ, ಆಹಾರದ ವಿಷಯದಲ್ಲಿ ಒಂದಂಶವನ್ನು ನಾನು ಒತ್ತಿಹೇಳಬೇಕಾಗಿದೆ. ಸಣ್ಣ ಸಣ್ಣ ಕೆರೆಗಳನ್ನು ಕಟ್ಟೆಗಳನ್ನು ರಿಪೇರಿಮಾಡುವುದೂ, ನಾಲೆಗಳಿಂದ ನೀರುಬರುವ Distribution Channels ಗಳನ್ನು ಆಗಾಗ್ಗೆ ಸರಿಯಾಗಿ ರಿಪೇರಿಮಾಡಿದರೆ ನಮ್ಮ ದೇಶದಲ್ಲಿ ಆಹಾರದ ಕೊರತೆಯ ಪ್ರಶ್ನೆಯೇ ಇರುವುದಿಲ್ಲ. ಒಂದೇ ದಿನದಲ್ಲಿ ಅವೆಲ್ಲಾ ಪರಿಹಾರವಾಗುತ್ತವೆ. ಈಗ ಅನೇಕ ಕಾಲುವೆ ಕಟ್ಟೆಗಳು ಕೆಟ್ಟುಹೋಗಿವೆ. ರೆವಿನ್ಯೂ ಆಫೀಸರುಗಳಿಗೆ ಇವುಗಳ ಕಡೆ ನಿಗಾ ಕೊಡುವುದಕ್ಕೆ ಕಾಲಾವಕಾಶವಿಲ್ಲ. ಬೇರೆಬೇರೆ ನಾನಾ ಕೆಲಸಗಳು ಅವರ ಮೇಲೆ ಬಿದ್ದಿವೆ. ವಿದ್ಯಾಇಲಾಖೆಯಲ್ಲಿ ಹೇಗೆ ಡಿಸ್ಟ್ರಿಕ್ಟಿಗೆ ಒಬ್ಬ ಆಫೀಸರ ಹತ್ತಿರ ಒಂದು ಜೀಪ್ ಕೊಟ್ಟು ಹೆಚ್ಚಿಗೆ ಕೆಲಸ ನಡೆಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರೋ, ಹಾಗೆಯೇ ಅಮಲ್ದಾರರಿಗೂ ಒಂದು ಜೀಪಿನ ಅನುಕೂಲ ಒದಗಿಸಿಕೊಟ್ಟರೆ ಹೆಚ್ಚಿಗೆ ಕೆಲಸ ಕಾರ್ಯಗಳನ್ನು ನಡೆಸುವುದಕ್ಕೆ ಸಹಾಯವಾಗುತ್ತದೆ. ಸರ್ಕಾರದ ಅನೇಕ ಕೆಲಸಗಳು ರೆವಿನ್ಯೂ ಇಲಾಖೆಯಿಂದಲೇ ಆಗಬೇಕಾಗಿದೆ. ಆದ್ದರಿಂದ ರೆವಿನ್ಯೂ ಡಿಪಾರ್ಟ್‌ಮೆಂಟಿನಲ್ಲಿ ಅಮಲ್ದಾರರ ಕೈಕೆಳಗೆ ಒಂದೊಂದು Van ಕೊಟ್ಟರೆ ಈಗ ಬಾಕಿಬಿದ್ದಿರುವ ಅನೇಕ ಅಕ್ವಿಸಿಷನ್ ಕೇಸುಗಳು ತೀರ್ಮಾನವಾದಾವು. ಹತ್ತಾರು ವರುಷಗಳಿಂದ ಅನೇಕ ಅಕ್ವಿಸಿಷನ್ ಕೇಸುಗಳು Spot inspection ಎಂದು ಹಾಗೆಯೇ ಇತ್ಯರ್ಥವಾಗದೆ ಉಳಿದಿರುವ ಸಂದರ್ಭಗಳಿವೆ. ಉದಾಹರಣೆಗಾಗಿ ಒಂದು ಸ್ಮಶಾನದ ಜಾಗವನ್ನು ಅಕ್ವೈರ್‌ಮಾಡಿಕೊಂಡು ಬಿಡಿಸಿಕೊಡುವ ವಿಷಯ 12 ವರ್ಷದಿಂದಲೂ ಪರಿಹಾರವಾಗದೆ ಹಾಗೆಯೇ ಉಳಿದಿದೆಯೆಂದರೆ, ...

ಶ್ರೀ ಆರ್. ಚೆನ್ನಿಗರಾಮಯ್ಯ.—ಯಾವ ಊರಿನಲ್ಲಿ ?

ಶ್ರೀ ಕೆ. ಎಲ್. ನರಸಿಂಹಯ್ಯ.—ನಮ್ಮ ಕ್ಷೇತ್ರಕ್ಕೇ ಸೇರಿರುವ ದಿಬ್ಬೂರಿನಲ್ಲಿ ಹೆಣ ಹೂಳುವುದಕ್ಕೆ ಜಾಗವಿಲ್ಲದೆ ಒಂದು ಜಾಗದಲ್ಲಿ ಹೆಣ ಹೂಳುತ್ತಿರುವಾಗ ಆ ಪಾರ್ಟಿಗೂ ಈ ಪಾರ್ಟಿಗೂ ವ್ಯಾಜ್ಯವೆದ್ದು ಹೆಣವನ್ನೂ ಕೂಡ ಹೂಳುವುದಕ್ಕಾಗದೆ ಹಾಗೆಯೇ ಇಟ್ಟುಕೊಂಡಿದ್ದರು. ಈಹೊತ್ತಿಗೂ ಸ್ಮಶಾನಕ್ಕೆ ಜಾಗ ಬಿಡಿಸಿಕೊಟ್ಟಿಲ್ಲ. ಆದ್ದರಿಂದ ಪ್ರತಿಯೊಬ್ಬ ಅಮಲ್ದಾರರಿಗೆ ವ್ಯಾನ್ ಒದಗಿಸಿಕೊಡುವ ಏರ್ಪಾಡು ಮಾಡಿದರೆ ಅಕ್ವಿಸಿಷನ್ ಕೇಸುಗಳು ಮತ್ತು ಇತರ ಕೇಸುಗಳು ಬಹಳ ಬೇಗ ಇತ್ಯರ್ಥವಾಗುತ್ತವೆಂದು ಹೇಳಬಹುದು.

ವ್ಯವಸಾಯದ ಇಲಾಖೆಗೆ ಸಂಬಂಧಪಟ್ಟಹಾಗೆ ಇನ್ನೊಂದು ವಿಷಯ ಹೇಳಬೇಕಾಗಿದೆ. ಬಾವಿಗಳನ್ನು ತೋಡಿಸುವುದಕ್ಕೆ 500 ರೂಪಾಯಿಗಳಂತೆ ಸರ್ಕಾರದವರು Subsidy ಹಣ ಹಿಂದೆ ಕೊಡುತ್ತಿದ್ದರು. ಇದರಿಂದ ಬಾವಿಗಳಾಗಿ ದೇಶಕ್ಕೊಂದು ಆಸ್ತಿಯಾಗುತ್ತಿತ್ತು. ಈಗ ಅದೂ ಹೋಯಿತು ನಮ್ಮ ಸರ್ಕಾರದಲ್ಲಿರುವ ಒಂದು ಪದ್ಧತಿಯೆಂದರೆ, ಕೇಂದ್ರಸರ್ಕಾರದವರು ಏನಾದರೂ ಸಹಾಯ ಕೊಟ್ಟರೆ ತಾವೂ ಸ್ವಲ್ಪ ಕೊಡುವುದು ಎಂದು. ಕೇಂದ್ರ ಸರ್ಕಾರದವರು ನಿಲ್ಲಿಸಿದರೆಂದು ಇವರು ನಿಲ್ಲಿಸಿದ್ದರಿಂದ ಈಗ ಆ ಭಾಗದಲ್ಲಿ ಎಷ್ಟೋ ಕೆಲಸವಾಗಬಹುದಾಗಿದ್ದದ್ದು ನಿಂತಿದೆ. ಹಿಂದೆ ರೈತರು ಭಾವಿ ಮಾಡಿಸಿದರೆ ಸರ್ಕಾರದವರು 500 ರೂಪಾಯಿ ಕೊಡುತ್ತಿದ್ದರು. ಇದರಿಂದ ಎಷ್ಟೋ ಬಾವಿಗಳಾಗಿ ಅನುಕೂಲವಾಗಿ ದೇಶಕ್ಕೆ ಒಂದು ಆಸ್ತಿಯಾಗಿ ಪರಿಣಮಿಸುತ್ತಿತ್ತು. ಈ ಅಂಶವನ್ನು ಮತ್ತೆ ಜಾರಿಗೆ ತರಬೇಕೆಂದು ಹೇಳುತ್ತೇನೆ.

Animal Husbandry ಇಲಾಖೆಯ ವಿಷಯ ಹಿಂದೆ ಒಳ್ಳೊಳ್ಳೆಯ ಹೋರಿಗಳನ್ನು ಹೋಬಳಿಗೊಂದರಂತೆ ಸರಿಯಾಗಿ ಸಾಕುವವರಿಗೆ ಕೊಟ್ಟು ದೇಶದಲ್ಲಿ ಒಳ್ಳೆಯ ತಳಿಗಳ ಅಭಿವೃದ್ಧಿಗೆ ಸಹಾಯ ಮಾಡುತ್ತಿದ್ದರು. ಹಾಲಿ ಇದನ್ನು ನಿಲ್ಲಿಸಿರುವುದರಿಂದ ಹತ್ತಾರು ಮೈಲಿಗಳ ದೂರ ಒಳ್ಳೆ ಗೂಳಿಗಳನ್ನು ಹುಡುಕಿಕೊಂಡು ಹೊರಡಬೇಕೆಂದರೆ ಬಹಳ ಕಷ್ಟ. ಸರಿಯಾದ ಗೂಳಿಗಳೂ ಸಿಕ್ಕುವುದಿಲ್ಲ. ಆದ್ದರಿಂದ ಒಂದೊಂದು ಹೋಬಳಿಗೂ ಒಂದೊಂದು ಗೂಳಿಯನ್ನು ಒದಗಿಸಿಕೊಡುವ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ಆಮೇಲೆ ಡಿಸ್ಟ್ರಿಕ್ಟ್ ಬೋರ್ಡುಗಳಲ್ಲಿರುವ ಎಗ್ಜಿಕ್ಯೂಟಿವ್ ಆಫೀಸರುಗಳ ವಿಷಯದಲ್ಲಿ ಒಂದು ಮಾತು. ಸಾಮಾನ್ಯವಾಗಿ ಡಿಸ್ಟ್ರಿಕ್ಟ್ ಬೋರ್ಡ್‌ಗಳ ಹಣಕಾಸಿನ ಸ್ಥಿತಿ ಚೆನ್ನಾಗಿಲ್ಲ. ನಮ್ಮ ತುಮಕೂರು ಡಿಸ್ಟ್ರಿಕ್ಟ್ ಬೋರ್ಡಿನ ವಿಷಯವನ್ನೇ ತೆಗೆದು ಕೊಂಡರೆ ಅಲ್ಲಿರುವ ಹಣದಲ್ಲಿ ಅಲ್ಲಿಗೆ ಹಾಕಿರುವ ಎಗ್ಜಿಕ್ಯೂಟಿವ್ ಆಫೀಸರಿಗೂ ಮತ್ತು ಸಿಬ್ಬಂದಿಗೂ ಎರಡು ತಿಂಗಳ ಸಂಬಳ ಕೊಡಬಹುದು ಅಷ್ಟೆ. ಎಗ್ಜಿಕ್ಯೂಟಿವ್ ಆಫೀಸರೆಂದು ಅಸಿಸ್ಟೆಂಟ್ ಕಮಿಷನರ ಗ್ರೇಡಿನವರನ್ನು ಹಾಕಿದರೆ ಅವರಿಗಿರುವ ಕೆಲಸವಾದರೂ ಎಷ್ಟು? ಎಷ್ಟೋವೇಳೆ ಅವರಿಗೆ ಕೊಡುವುದಕ್ಕೆ ಕೆಲಸವಿದ್ದರೂ ಹಣವಿಲ್ಲ. ಜೊತೆಗೆ P.W.D. ಕೆಲಸಗಳ ವಿಷಯದಲ್ಲಿ ಅಷ್ಟಾಗಿ ಅನುಭವವಿರುವುದಿಲ್ಲ. ಸಬ್ ಓವರ್ಸಿಯರುಗಳು ಮಾಡಿದಕ್ಕೆ ರುಜು ಹಾಕುತ್ತಿರುತ್ತಾರೆ. ಇಂಥದಕ್ಕೆಲ್ಲಾ ಹೆಚ್ಚಿನ ಗ್ರೇಡಿನ ಅಸಿಸ್ಟೆಂಟ್ ಕಮಿಷನರುಗಳನ್ನು ನೇಮಿಸಿದೆ, ಅಮಲ್ದಾರರ ಗ್ರೇಡಿನವರನ್ನೋ ಅಥವಾ ಇನ್ನೂ ಕಡಮೆ ಗ್ರೇಡಿನವರನ್ನೋ ಹಾಕಿ, ಡಿಸ್ಟ್ರಿಕ್ಟ್ ಬೋರ್ಡಿನವರ ಹಣ ಇದಕ್ಕಾಗಿ ಹೆಚ್ಚಿಗೆ ವ್ಯಯವಾಗದಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ವಿದ್ಯುಚ್ಛಕ್ತಿಯ ಇಲಾಖೆಯ ವಿಚಾರದಲ್ಲಿ ಒಂದು ಮಾತು ಹೇಳಬಯಸುತ್ತೇನೆ. ಈ ಇಲಾಖೆ ಪ್ರಾರಂಭದೆಶೆಯಲ್ಲಿದ್ದಾಗ ಚಿಕ್ಕಬಳ್ಳಾಪುರದಲ್ಲಿ ಒಬ್ಬ ಸೂಪರಿಂಟೆಂಡಿಂಗ್ ಇಂಜಿನಿಯರ ಆಫೀಸನ್ನೇರ್ಪಡಿಸಿದ್ದರಿ. ಈ ಹೊತ್ತು ಈ ಇಲಾಖೆ ಒಂದಕ್ಕೆ ಮೂವತ್ತರಷ್ಟು ಬೆಳೆದಿದೆ. ಅದರ ಮೇಲೆ, ಈ ಸೂಪರಿಂಟೆಂಡಿಂಗ್ ಇಂಜಿನಿಯರ ಆಫೀಸನ್ನು ಚಿಕ್ಕಬಳ್ಳಾಪುರದಿಂದ ತುಮಕೂರಿಗೆ ಬದಲಾಯಿಸಿ ಕೊಡಿ ಎಂದು ಪದೇ ಪದೇ ಕೇಳುತ್ತಿದ್ದೇವೆ. ಈ ಆಫೀಸಿನ ವ್ಯಾಪ್ತಿ ಅರಸೀಕೆರೆಯವರೆಗೂ ಇದ್ದು ತುಮಕೂರಿನಲ್ಲಿ ಈ ಆಫೀಸನ್ನೇರ್ಪಡಿಸಿದರೆ ಕೇಂದ್ರ ಸ್ಥಾನದಲ್ಲಿದ್ದಂತಾಗುತ್ತದೆ. ಆದ್ದರಿಂದ ಈ ಆಫೀಸನ್ನು ತುಮಕೂರಿನಲ್ಲಿಯೇ ಇರುವಂತೆ ಮಾಡಬೇಕೆಂದು ಹೇಳುತ್ತೇನೆ.

ನಮ್ಮ ತುಮಕೂರು ಡಿಸ್ಟ್ರಿಕ್ಟು ಬಳಪದಕಲ್ಲಿಗೆ ಪ್ರಸಿದ್ಧವಾಗಿದೆ. ಹಾಗಿದ್ದರೂ ಬಳಪದ ಕಾರ್ಖಾನೆಯೊಂದನ್ನು ಏರ್ಪಡಿಸುವುದಕ್ಕೆ ಇದುವರೆಗೂ ಸರ್ಕಾರದವರು ಏನೊಂದು ಏರ್ಪಾಡೂ ಮಾಡದಂತೆ ಕಾಣಲಿಲ್ಲ ಅಲ್ಲದೆ, ಕೆಂಪು ಹೆಂಚಿನ ತಯಾರಿಕೆಗೂ ಬಹಳ ಅವಕಾಶವಿದೆ. ಹೊರಗಡೆಯವರು ಅನೇಕರು ಬಂದು ಇಲ್ಲಿನ ಮಣ್ಣನ್ನು ಪರೀಕ್ಷೆಮಾಡಿ, ಹೆಂಚಿನ ತಯಾರಿಕೆಗೆ ಈ ಕೆರೆಯ ಮಣ್ಣು ಬಹಳ ಯೋಗ್ಯವಾದದ್ದೆಂದು ಹೇಳುತ್ತಿದ್ದಾರೆ. ಈಗ ಯಾರೋ ಕೆಲವರು ಖಾಸಗಿ ಜನರು ಲೈಸೆನ್ಸ್ ತೆಗೆದುಕೊಂಡು ಹೆಂಚುತಯಾರಿಸಿ ಲಕ್ಷಾಂತರ ರೂಪಾಯಿಗಳನ್ನು ಸಂಪಾದನೆ ಮಾಡಿಕೊಳ್ಳುತ್ತಿ

ದ್ದಾರೆ. ಸರ್ಕಾರದವರಾದರೋ ಈ ವಿಷಯದಲ್ಲಿ ಏನೊಂದು ಪ್ರಯತ್ನವನ್ನೂ ಮಾಡಲಿಲ್ಲವಲ್ಲ ಎಂದು ವಿಷಾದಿಸುತ್ತೇನೆ.

ಕಡೆಯದಾಗಿ ರೋಡ್ ಟ್ರಾನ್ಸ್‌ಪೋರ್ಟಿಗೆ ಸಂಬಂಧ ಪಟ್ಟಹಾಗೆ ಒಂದು ವಿಷಯ. ಬಸ್ ಷೆಲ್‌ಟರ್‌ಗಳೆಂದು ಈ ಇಲಾಖೆಯವರು ನಾನ್ಯಾರುಕಡೆ ಕಟ್ಟಿಸಬೇಕೆಂದಿದ್ದಾರೆ. ಆದರೆ ಇವುಗಳನ್ನು ಕಟ್ಟಿಸುವ ಅನುಭವ ಈ ಇಲಾಖೆಯವರಿಗಿಲ್ಲ. ಆದ್ದರಿಂದ P.W.D. ಇಲಾಖೆಯಿಂದ ಮಾಡಿಸಬೇಕಲ್ಲದೆ ಈ ಇಲಾಖೆಗೆಯೇ ಪ್ರತ್ಯೇಕವಾಗಿ ಇಂಜಿನಿಯರನ್ನು ತೆಗದುಕೊಳ್ಳ ಕೂಡದು. ಸಾಮಾನ್ಯವಾಗಿ ರೆವಿನ್ಯೂ ಡಿಪಾರ್ಟ್‌ಮೆಂಟಿನಲ್ಲಿಯೂ ಹೀಗೆಯೇ ಆಗುತ್ತದೆ. ರೆವಿನ್ಯೂ ಇಲಾಖೆಯವರು ಅನೇಕ ಸ್ಕೂಲು ಕಟ್ಟಡಗಳನ್ನು ಕಟ್ಟಿಸುತ್ತಿದ್ದಾರೆ. ಆದರೆ ಅವರಿಗೆ ವಾಸ್ತವವಾಗಿ ಒಂದು ಟೇಪ್ ಹಿಡಿಯುವುದಕ್ಕೂ ಬರುವುದಿಲ್ಲ. V.P. ಓವರ್‌ಸೀಯರು ಹೇಳಿದ್ದು, ಅವರು ಕೇಳಿದ್ದು ಇಷ್ಟೇ ಅವರು ಮಾಡುವ ತನಿಖೆ. ಆದ್ದರಿಂದ ಇದನ್ನೆಲ್ಲಾ ತಪ್ಪಿಸಿ, ಎಲ್ಲಾ ಬಿಲ್ಡಿಂಗ್ ವಗ್ಯೆರೆ ಕೆಲಸವನ್ನು ಪಿ. ಡಬ್ಲ್ಯು ಇಲಾಖೆಗೆ ದಯವಿಟ್ಟು ವರ್ಗಾಯಿಸಿ ಎಂದು ಹೇಳುತ್ತೇನೆ. ಈ ಹೊತ್ತು ರೆವಿನ್ಯೂ ಇಲಾಖೆಯವರು ಕಟ್ಟಿಸಿರುವ ಕಟ್ಟಡಗಳಲ್ಲಿ ನೂರಕ್ಕೆ 80 ಪಾಲು ಬಿದ್ದು ಹೋಗುವ ಸ್ಥಿತಿಯಲ್ಲಿವೆಯೆಂದು ನಾನು ಹೇಳಲು ವಿಷಾದಿಸುತ್ತೇನೆ.

12 NOON

ಹೀಗಾಗಿ ಈ ದಿವಸ ಅವರೇನು ಮಾಡುತ್ತಿದ್ದಾರೆಂದರೆ ಅವರು ಇದಕ್ಕೆ ಸಂಬಂಧಪಟ್ಟ ಮಂತ್ರಿಗಳ ಹತ್ತಿರ ಬಂದು ಅವರವರ ವಿಚಾರದಲ್ಲಿ ಪ್ರತ್ಯೇಕ ಆಜ್ಞೆಗಳನ್ನು ಮಾಡಿಸಿಕೊಂಡು ಹೋಗುತ್ತಿದ್ದಾರೆ. ಆದರೆ ಸರ್ಕಾರದವರು ಇಂಥಾದಕ್ಕೆಲ್ಲ ಅವಕಾಶ ಕೊಡಬಾರದು. ಈ ರೀತಿಯ ಕೆಲವು ಲೋಪ ದೋಷಗಳು P.W.D.ನಲ್ಲೂ ಮತ್ತು ಇತರ ಕೆಲವು ಇಲಾಖೆಗಳಲ್ಲೂ ಇರುತ್ತವೆಂಬುದಾಗಿ ನಾನು ಕೇಳುತ್ತಿದ್ದೇನೆ, ಉದಾಹರಣೆಗೆ ಹೇಳುವುದಾದರೆ, P.W.D. ನಲ್ಲಿ 63 ಜನ ಸೂಪರ್‌ವೈಜರುಗಳನ್ನು 1946ರಲ್ಲಿ ತೆಗೆದುಕೊಂಡರು. ಆದರೆ ಈವರೆಗೂ ಈ ನೌಕರರು ಇನ್ನೂ subordinate official ಗಳಾಗಿ ಕೆಲಸ ಮಾಡುತ್ತಿದ್ದಾರೆ. ಇವರಲ್ಲಿ ಅನೇಕರಿಗೆ ಕನ್ಫರಂ ಕೂಡ ಆಗಿಲ್ಲ. ಕೇವಲ ಇನ್‌ಛಾರ್ಜ್ ಆಫೀಸರುಗಳಾಗಿ ಕೆಲವರು ಕೆಲಸ ಮಾಡುತ್ತಿದ್ದಾರೆ. ಅವರೆ ಇತ್ತೀಚೆಗೆ ಹೊಸ ರಾಜ್ಯ ಜಾರಿಗೆ ಬಂದ ಮೇಲೆ ಅನೇಕರು ಇವರ ಮೇಲೆ ಸೀನಿಯರ್ ಆಗಿಬಂದಿರುತ್ತಾರೆ. ಈ ಮಧ್ಯೆ ಇವರ ಸ್ಥಿತಿ ಇಷ್ಟು ಚಿಂತಾಜನಕವಾಗಿರುವಾಗ ಸರ್ಕಾರದವರು ಈ ಇಲಾಖೆಗೆ ಪ್ರೊಬೇಷನರುಗಳನ್ನು ಬೇರೆ ತೆಗೆದುಕೊಳ್ಳುತ್ತಿದ್ದಾರೆ. ಹೀಗೆ ಪ್ರೊಬೇಷನರುಗಳನ್ನು ತೆಗೆದುಕೊಳ್ಳುವುದನ್ನು ಸರ್ಕಾರದವರು ಖಂಡಿತ ನಿಲ್ಲಿಸಬೇಕು. ಇನ್ನು ಮೇಲೆ ಯಾವ ಇಲಾಖೆಗೂ ಕೂಡ ಪ್ರೊಬೇಷನರುಗಳನ್ನು ತೆಗೆದುಕೊಳ್ಳಕೂಡದೆಂದು ನಾನು ಸಲಹೆ ಮಾಡುತ್ತೇನೆ.

ಈವರೆಗೂ ನಮ್ಮ ವಿರೋಧ ಪಕ್ಷದ ಸದಸ್ಯರು ನಮ್ಮ ಸರ್ಕಾರದಲ್ಲಿ ಏನೇನು ಈವರೆಗೆ ಕೆಲಸ ಕಾರ್ಯಗಳು ಆಗಬೇಕಾಗಿದ್ದವೋ ಅವುಗಳೊಂದೂ ಆಗಿಲ್ಲವೆಂಬುದಾಗಿ ಏನೊಂದು ಟೀಕೆ ಮಾಡಿದ್ದಾರೋ ಅದೇ ರೀತಿ ಈಗ ನಾವುಗಳೆಲ್ಲರೂ ಸಹ ಹೇಳಬೇಕಾಗಿದೆ. ಈ ಹಿಂದೆ ತಾಲ್ಲೂಕ್ ಲೆವೆಲ್‌ನಲ್ಲಿ ಒಂದೊಂದು ಸಮಿತಿಗಳ ಏರ್ಪಾಡನ್ನು ಮಾಡಲಾಗುತ್ತಿತ್ತು. ಆ ಸಮಿತಿ ಇದ್ದಾಗ ಅದರಲ್ಲಿ ಖಾಸಗೀ ಜನರೂ ಮತ್ತು ಅಧಿಕಾರಿಗಳೂ ಒಂದುಕಡೆ ಕಲೆತು ಪರಸ್ಪರ ವಿಚಾರ ವಿನಿಮಯ ನಡೆಸಲು ಒಂದು ಅವಕಾಶವಿತ್ತು. ಅದರಿಂದ ಜನರಿಗೆ ಬಹಳ ಅನುಕೂಲವಿತ್ತು. ಆದರೆ ಈ ದಿವಸ ಆ ರೀತಿ ಅನುಕೂಲವಿಲ್ಲ. ಎದುರು ಪಕ್ಷದಲ್ಲಿರುವ ಶ್ರೀ ಪುಟ್ಟಣನವರು ಜಮಾಬಂದಿ ವಿಚಾರ ಹೇಳಿದರು. ಆದರೆ ಈ ಜಮಾ ಬಂದಿಗಳು ಎಷ್ಟೋ ಕಡೆ ನಡೆಯದೆ ಹಾಗೇ ನಿಂತುಹೋಗಿವೆ. ನಡೆಸುತ್ತೇವೆಂದು ಹೇಳಿದ ದಿವಸ ಅವು ನಡೆಯುವುದೇ ದುರ್ಲಭ. ಕೆಲವು ವೇಳೆ ಈ ಜಮಾಬಂದಿಗಳನ್ನು ನಡೆಸತಕ್ಕ ಅಧಿಕಾರಿಗಳು ಅವರಿಗೆ ತಂಪಾಗಿರಲೆಂದು, ಉದ್ದೇಶಪೂರಿತವಾಗಿಯೇ ಎಲ್ಲಿ ಜನರಿಗೆ ಊಟ ಕಾಫಿ ತಿಂಡಿ ಇತ್ಯಾದಿಗಳು ದೊರೆಯುವುದು ದುರ್ಲಭವೋ ಅಂಥ ಸ್ಥಳಗಳಲ್ಲಿ ಅಂದರೆ ಬೆಟ್ಟಗಳ ಮೇಲೆ ಈ ಜಮಾಬಂದಿಗಳನ್ನು ಏರ್ಪಡಿಸಿಬಿಡುತ್ತಾರೆ. ಅಲ್ಲಿಗೆ ಎಲ್ಲ ನೌಕರರೂ ಮತ್ತು ಜನರೂ ಸೇರಿ ಅಧಿಕಾರಿಗಳ ದಾರಿಯನ್ನು ಕಾಯುವುದಕ್ಕೆ ಪ್ರಾರಂಭಮಾಡಿದರೂ ಅವರು ಕಡೆಗೂ ಬಾರದೆ ಆ ಜಮಾಬಂದಿಯೇ ನಿಂತುಹೋಗಿರುವಂಥ ನಿದರ್ಶನಗಳು ಬೇಕಾದಷ್ಟಿವೆ. ಮಂತ್ರಿಗಳು ಹೋಗಬೇಕೆಂದು ಪ್ರೋಗ್ರಾಂ ಮಾಡಿಕೊಂಡನಂತರ ಆ ವಿಚಾರವನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಬರೆದು ಅನಂತರ ಅವರ ಅಭಿಪ್ರಾಯಕ್ಕನುಸಾರವಾಗಿ ತಮ್ಮ ಪ್ರೋಗ್ರಾಂಗಳನ್ನು ತಿದ್ದಿಕೊಂಡರೆ ಎಲ್ಲವೂ ಸರಿಹೋಗುತ್ತದೆಂದು ಶ್ರೀ ಪುಟ್ಟಣ್ಣನವರು ಹೇಳಿದರು. ಆದರೆ ಮಾನ್ಯ ಮಂತ್ರಿಗಳು ಮೊದಲು ಜಿಲ್ಲಾಧಿಕಾರಿಗಳಿಗೆ ಬರೆದು ಅನಂತರ ಆ ಜಿಲ್ಲೆಗೆ ಹೋಗಬೇಕೆಂದು ಹೇಳಿದರೆ ಅದು ಸಾಧ್ಯವಾಗದ ಮಾತು.

ಶ್ರೀ ಜಿ. ಎಚ್. ಪುಟ್ಟಣ್ಣ.—ನಾನು ಹೇಳಿದ್ದು ಆ ರೀತಿಯಾಗಿ ಅಲ್ಲ.

ಶ್ರೀ ಕೆ. ಎಲ್. ನರಸಿಂಹಯ್ಯ.—ಈ ಕೋ-ಆಪರೇಟೀವ್ ಇಲಾಖಾ ವಿಚಾರ ಬಹಳ ಪ್ರಾಮುಖ್ಯವಾದುದು. ಈ ಹಿಂದೆ ಈ ಬಾಬಿಗೆ ಒಬ್ಬ ಪ್ರತ್ಯೇಕ ಮಂತ್ರಿಗಳಿದ್ದರು. ಈಗಲೂ ಕೂಡ ಈ ಬಾಬಿಗೊಂದು ಪ್ರತ್ಯೇಕ ಮಂತ್ರಿ ಸ್ಥಾನವಿರಬೇಕಾದದ್ದು ಅಗತ್ಯವೆಂದು ಹೇಳುತ್ತೇನೆ. ಈ ದಿವಸ ಈ ಪೋರ್ಟ್‌ಫೋಲಿಯೋ ಮಾನ್ಯ ಮುಖ್ಯ ಮಂತ್ರಿಗಳಿಗಿದೆ. ಆದರೆ ಅವರಿಗೆ ಮಲ್ಟಿಫೇರಿಯಸ್ ಎಂಗೇಜ್‌ಮೆಂಟುಗಳಿರುತ್ತವೆ. ಹಾಗೆ ಈ ಬಾಬಿಗೊಬ್ಬ ಪ್ರತ್ಯೇಕ ಮಂತ್ರಿಗಳನ್ನು ನೇಮಿಸಲು ಸಾಧ್ಯವಿಲ್ಲವೆಂಬ ಪಕ್ಷಕ್ಕೆ ಈ ಬಾಬನ್ನು ಇದರಲ್ಲಿ ಚೆನ್ನಾಗಿ ಅರಿತು ನುರಿತಿರುವ ಶ್ರೀ ಟಿ. ಮರಿಯಪ್ಪನವರಿಗಾದರೂ ಕೊಟ್ಟರೆ ಪರವಾಯಿಲ್ಲ. ಇಲ್ಲದಿದ್ದರೆ ಅನೇಕ ಅನಿವಾರ್ಯಗಳು ಸಂಭವಿಸಬಹುದು, ಜನರಿಗೆ ತೊಂದರೆಗಳು ತಪ್ಪುವುದಿಲ್ಲ. ಇಷ್ಟು ವಿಚಾರಗಳನ್ನು ತಿಳಿಸಿ ನಾನು ಸಭೆಯ ಮುಂದೆ ಮಂಡಿಸಿರುವ ಬಡ್ಜೆಟ್ಟನ್ನು ಅನುಮೋದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎ. ಆರ್. ಬದರಿನಾರಾಯಣ್ (ತೀರ್ಥಹಳ್ಳಿ).—ಮಾನ್ಯ ಸಭಾಪತಿಗಳೇ, 1957-58ನೆಯ ಸಾಲಿಗೆ ಸಂಬಂಧಪಟ್ಟ ಆಯವ್ಯಯದ ಪಟ್ಟಿಯನ್ನು ಮಾನ್ಯ ಆರ್ಥಿಕ ಸಚಿವರು ನಮ್ಮ ಮುಂದೆ ಇಟ್ಟಿದ್ದಾರೆ. ನಮ್ಮ ಮಾನ್ಯ ಆರ್ಥಿಕ ಸಚಿವರಾದರೋ ಬಹಳ ಅನುಭವಶಾಲಿಗಳು. ನಾನು ಅನೇಕ ವರ್ಷಗಳ ಕಾಲ ಅವರ ಜೊತೆಯಲ್ಲಿ ಕೆಲಸ ಮಾಡಿದ್ದೇನೆ. ಅವರು ಈ ಬಡ್ಜೆಟ್ಟನ್ನು ತಯಾರಿಸುವುದಕ್ಕಾಗಿ ಎಷ್ಟು ಶ್ರಮಪಟ್ಟಿದ್ದಾರೆಂಬುದು ಇದರ ಕಷ್ಟವೆಷ್ಟೆಂಬುದನ್ನು ಅರಿತಿರತಕ್ಕವರಿಗೆ ಮಾತ್ರ ಗೊತ್ತಾಗುತ್ತದೆಂದು ನಾನು ಅಂದುಕೊಂಡಿದ್ದೇನೆ. ಈ ಬಡ್ಜೆಟ್ಟನ್ನು ಯಾವ

(ಶ್ರೀ ಎ. ಆರ್. ಬದರಿನಾರಾಯಣ್).

ಸನ್ನಿವೇಶದಲ್ಲಿ ತಯಾರಿಸಲಾಗಿದೆ, ಇದರ ಹಿನ್ನೆಲೆ ಏನಿದೆ ಎಂಬುದನ್ನು ನಾವು ಗಮನದಲ್ಲಿಟ್ಟುಕೊಂಡು ಈ ಆಯವ್ಯಯದ ಪಟ್ಟಿಯನ್ನು ಪರಿಶೀಲಿಸಬೇಕಾದ್ದು ಅತಿ ಮುಖ್ಯವಾದಂಥ ಅಂಶ. ಈಗತಾನೆ ಇನ್ನೂ ಹೊಸ ಪ್ರಾಂತ್ಯ ರಚನೆಯಾಗಿದೆ. ಐದು ಹೊಸ ಪ್ರದೇಶಗಳು ಒಟ್ಟುಗೂಡಿ ಈಗ ಒಂದು ಹೊಸ ಕರ್ಣಾಟಕ ರಾಜ್ಯವಾಗಿದೆ. ಈ ಐದು ಹೊಸ ಪ್ರದೇಶಗಳಲ್ಲೂ ಒಂದೊಂದು ಬಗೆಯ ಕಾನೂನು ಒಂದೊಂದು ಪ್ರದೇಶದಲ್ಲಿ ಜಾರಿಯಲ್ಲಿರುತ್ತದೆ. ಹೀಗೆ ಪ್ರತಿಯೊಂದು ಪ್ರದೇಶದಲ್ಲೂ ಭಿನ್ನ ಭಿನ್ನತೆಗಳಿಂದ ಕೂಡಿರತಕ್ಕ ವಿಚಾರಗಳೇನಿವೆಯೋ ಅವುಗಳನ್ನೆಲ್ಲ ಕ್ರೋಢೀಕರಿಸಿ ಅವುಗಳಿಗೆ ಬದಲಾಗಿ ಎಲ್ಲರಿಗೂ ಅನುಕೂಲವಾಗಿರತಕ್ಕ ಮತ್ತು ಒಂದೇ ರೀತಿಯಾಗಿರತಕ್ಕ ಕಾನೂನುಗಳು ಮತ್ತು ಇತರ ಎಲ್ಲ ವ್ಯವಹಾರಗಳೂ ಒಂದೇ ಮಟ್ಟದಲ್ಲಿ ನಡೆಯುವ ಹಾಗೆ ನಾವು ಈಗ ಕೆಲಸ ಮಾಡಬೇಕಾಗಿದೆ. ಈ ವಿಚಾರವನ್ನು ನಮ್ಮ ರಾಜ್ಯಪಾಲರೂ ಕೂಡ ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ಈ ರೀತಿಯ ಸಮಸ್ಯೆಗಳು ನಮ್ಮಲ್ಲಿ ಅನೇಕ ಇವೆ. ನಮಗೀಗ ಮೊಟ್ಟಮೊದಲನೆಯದಾಗಿ ಆಹಾರದ ವಿಚಾರದಲ್ಲಿ ತೊಂದರೆ ಇದೆ. ನಮ್ಮ ರಾಜ್ಯದ ಸಾಲದ ಹೊರೆ ಬಹಳ ಬಲವಾಗಿ ಬೆಳೆದುಬರುತ್ತಿದೆ. ಅಭಿವೃದ್ಧಿಗೆ ಬಾರದೆ ಹಿಂದುಳಿದಿರತಕ್ಕಂಥ ಪ್ರದೇಶಗಳು ನಮ್ಮಲ್ಲಿ ಅನೇಕವಿವೆ. ಅವುಗಳನ್ನು ನಾವೀಗ ಅಭಿವೃದ್ಧಿಗೆ ತರಬೇಕಾಗಿದೆ. ಈ ದಿವಸ ದೇಶದ ಮುಂದೆ ಇಷ್ಟೊಂದು ಕಷ್ಟ ಸಮಸ್ಯೆಗಳಿದ್ದಾಗ್ಯೂ ಮಾನ್ಯ ಅರ್ಥಿಕ ಸಚಿವರು ಈಗ ಸಭೆಯ ಮುಂದೆ ಮಂಡಿಸಿರುವ ಬಡ್ಜೆಟ್ಟನ್ನು ಅವರು ಬಹಳ ಜಾಣ್ಮೆಯಿಂದಲೂ ಮತ್ತು ಚಾಕಚಕ್ಯತೆಯಿಂದಲೂ ಮತ್ತು ಧೈರ್ಯದಿಂದಲೂ ತಯಾರಿಸಿದ್ದಾರೆ. ಈ ಹಿಂದೆ ಬೇಜವಾಬ್ದಾರಿ ಸರ್ಕಾರವೆಂಬುದಾಗಿ ಏನೊಂದು ಸರ್ಕಾರವಿತ್ತೊ ಅದು ಆಗ ವರ್ತಿಸುತ್ತಿದ್ದಹಾಗೆ ನಾವು ಈ ದಿವಸ ವರ್ತಿಸಲು ಸಾಧ್ಯವಿಲ್ಲ. ನಮ್ಮ ಹಳ್ಳಿಗಾಡಿನಲ್ಲಿರತಕ್ಕ ಜನರು ತಮಗೆ ಅನೇಕ ಸೌಕರ್ಯಗಳನ್ನೊದಗಿಸಿಕೊಡಬೇಕೆಂಬುದಾಗಿ ಸರ್ಕಾರದವರನ್ನು ಈಗ ಕೇಳುತ್ತಿದ್ದಾರೆ. ಈ ದಿವಸ ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಜನರಿಗೆ ಸಾಕಷ್ಟು ವಿದ್ಯಾ ಸೌಕರ್ಯಗಳಿಲ್ಲ, ವೈದ್ಯ ಸೌಕರ್ಯಗಳಿಲ್ಲ, ಸಂಚಾರ ಸೌಲಭ್ಯಗಳಿಲ್ಲ, ರಸ್ತೆಗಳಿಲ್ಲ. ಈ ಅನುಕೂಲಗಳನ್ನೆಲ್ಲ ನಾವೀಗ ಅವರಿಗೆ ಒದಗಿಸಿಕೊಡಬೇಕಾಗಿದೆ. ಇದಕ್ಕೆಲ್ಲ ಅಪಾರವಾದ ಹಣದ ವರಮಾನವಿರಬೇಕು. ಈ ಸಂಬಂಧವಾಗಿ ಸಾಕಷ್ಟು ಧನಸಹಾಯ ನೀಡಲು ಮೊನ್ನೆ ಇಲ್ಲಿಗೆ ಆಗಮಿಸಿದಂಥ ಆರ್ಥಿಕ ಮಂಡಳಿಯವರನ್ನು ನಮ್ಮ ಸರ್ಕಾರ ಪ್ರಾರ್ಥಿಸಿಕೊಂಡಿದೆ. ಅವರೂ ಕೂಡ ನಮಗೊಂದು ರೀತಿಯಲ್ಲಿ ಸೂಕ್ತ ಭರವಸೆಯನ್ನು ಕೊಟ್ಟಿದಾಗ್ಗೂ "ನೀವು ಮಾತ್ರ ನಿಮ್ಮ ಜವಾಬ್ದಾರಿಯನ್ನು ಮರೆಯಬಾರದು ಎಂದು" 'ಅವರು ತಿಳಿಸಿರುವುದಾಗಿ ಮಾನ್ಯ ಹಣಕಾಸಿನ ಸಚಿವರ ಭಾಷಣದಲ್ಲಿ ತಿಳಿಸಲಾಗಿದೆ. ಹಾಗಿರುವಾಗ ನಮ್ಮ ಆರ್ಥಿಕ ಸಚಿವರು ಈ ಬಡ್ಜೆಟ್ಟನ್ನು ತಯಾರಿಸುವುದರಲ್ಲಿ ಈ ಎಲ್ಲ ಅಭಿಪ್ರಾಯಗಳನ್ನೂ ಗಮನದಲ್ಲಿಟ್ಟುಕೊಂಡು ಇದನ್ನು ತಯಾರಿಸಿದ್ದಾರೆಂದು ಕಂಡುಬರುತ್ತದೆ. ನಮ್ಮ ವಿರೋಧ ಪಕ್ಷದ ಸದಸ್ಯರು ಅನೇಕರು ಅನೇಕ ವಿಚಾರಗಳ ಬಗ್ಗೆ ಟೀಕೆಗಳನ್ನು ಮಾಡಿದ್ದಾರೆ. ಆದರೆ ಹಾಗೆ ಅವರು ಮಾಡತಕ್ಕ ಟೀಕೆಗಳು ರಚನಾತ್ಮಕ ರೀತಿಯಲ್ಲಿದ್ದರೆ ಅಂಥ ಟೀಕೆಗಳು ಯಾರಿಂದಲೇ ಬಂದಿರಲಿ—ನಾನು ಅವುಗಳನ್ನು ಆದರದಿಂದ ಸ್ವಾಗತಿಸುತ್ತೇನೆಂಬುದಾಗಿ ನಮ್ಮ ಮಾನ್ಯ ಆರ್ಥಿಕ ಸಚಿವರು ಅಂದೇ ತಿಳಿಸಿದ್ದಾರೆ. ಆದುದರಿಂದ ಯಾರು ಏನು ಟೀಕೆ ಮಾಡಿದರೂ ಅದು ರಚನಾತ್ಮಕ ದೃಷ್ಟಿಯಿಂದ ಇರಬೇಕಾದದ್ದು ಅತ್ಯಗತ್ಯ. ಈ ದಿವಸ ನಾವೆಲ್ಲರೂ ಇಲ್ಲಿ ಸೇರಿರುವುದು ಒಂದು ಭವ್ಯವಾದಂಥ ಹೊಸ ರಾಜ್ಯವನ್ನು ಕಟ್ಟುವುದಕ್ಕೆ. ಈ ಒಂದು ಘನೋದ್ದೇಶವನ್ನು ಗಮನದಲ್ಲಿಟ್ಟುಕೊಂಡು ಯಾರಾದರೂ ಸರಿಯೇ ಅವರು ರಚನಾತ್ಮಕ ರೀತಿಯಲ್ಲಿ ಸಲಹೆ ನೀಡಿದರೆ ಅದರಿಂದ ಬಹಳ ಒಳ್ಳೆಯದಾಗುತ್ತದೆ. ಅಷ್ಟೇ ಅಲ್ಲದೆ ಇಲ್ಲಿ ನಾವೆಲ್ಲರೂ ಈ ದಿವಸ ಯಾವ ಉದ್ದೇಶಕ್ಕಾಗಿ ಸೇರಿದ್ದೇವೋ ಅದನು ಸಾರ್ಥಕಪಡಿಸಿಕೊಂಡಹಾಗೆ ಆಗುತ್ತದೆ.

ಎಷ್ಟು ಖರ್ಚು ಬಾಬುಗಳನ್ನು ಕಡಮೆ ಮಾಡಿದ್ದೇವೆ, ಇನ್ನೂ ಕಡಿಮೆ ಮಾಡುವುದಕ್ಕೆ ಅವಕಾಶ ವಿದೆ, ಎನ್ನುವುದನ್ನು ನಮ್ಮ ಅರ್ಥಿಕ ಸಚಿವರು ಈಗ ಹೇಳಿದ್ದಾರೆ. ಅವರು ಒಂದು ಸಲಹೆಯನ್ನು ಕೂಡ ಕೊಟ್ಟಿದ್ದಾರೆ. ಒಂದು ಪ್ರವೀಣರ ಕಮಿಟಿ ನೇಮಕ ಮಾಡಿ ವಿಮರ್ಶೆ ಮಾಡಿದ್ದೇ ಆದರೆ ಖರ್ಚನ್ನು ಬಹಳ ಕಡಿಮೆ ಮಾಡಬಹುದು ಎಂದು ಹೇಳಿದರು. ನನ್ನ ಮನಸ್ಸಿಗೂ ಕೂಡ ಹಾಗೆಯೇ ಕಾಣುತ್ತದೆ. ಒಳ್ಳೆಯ ಒಬ್ಬ ಪ್ರವೀಣರಾದ ಆಫೀಸರನ್ನಾಗಲಿ, ಅಥವಾ ಒಂದು ಕಮಿಟಿಯನ್ನಾಗಲಿ ನೇಮಕಮಾಡಿ ಅನಾವಶ್ಯಕವಾಗಿ ಆಗುತ್ತಾ ಇರುವ ಹೆಚ್ಚು ಖರ್ಚನ್ನು ಇನ್ನೂ ಕಡಿಮೆ ಮಾಡಿದರೆ ಬಹುಶಃ ಈಗ ಹಾಕಬೇಕೆಂದಿರತಕ್ಕ ತೆರಿಗೆಗಳನ್ನು ಹಾಕತಕ್ಕ ಅವಶ್ಯಕತೆ ಇರುವುದಿಲ್ಲ. ಇರುವಂಥ ಖರ್ಚನ್ನು ಕಡಿಮೆಮಾಡಿಕೊಂಡರೆ ನಮ್ಮ ದೇಶದ ಆಯವ್ಯಯ ಪರಿಸ್ಥಿತಿ ಸುಧಾರಿಸಿ ನಾವು ಹೆಚ್ಚಿಗೆ ಮುಂದುವರಿಯಬಹುದೆಂದ ನಿರೀಕ್ಷಣೆ ಮಾಡಬಹುದಾಗಿದೆ.

ಖೋತಾ ವಿಚಾರದಲ್ಲಿ ಅನೇಕ ಸದಸ್ಯರು ಮಾತನಾಡಿದ್ದಾರೆ. ಮರಾಮತ್ತು ಶಾಖೆಯ ವಿಚಾರದಲ್ಲಿ, ಅದರ ಒಂದು ನೀತಿ ಅಥವಾ ಕ್ರಮವನ್ನು ಬಹಳ ಚೆನ್ನಾಗಿ ಟೀಕೆ ಮಾಡಿದ್ದಾರೆ. ದೊಡ್ಡ ದೊಡ್ಡ ಕೆಲಸ ಕಾರ್ಯಗಳಿಗೂ ಮತ್ತು ಸಾಮಾನ್ಯವಾಗಿರತಕ್ಕ ಕೆಲಸ ಕಾರ್ಯಗಳಿಗೂ ಬಹಳ ಹಣ ಖರ್ಚಾಗುತ್ತಾ ಇದೆ. ಬಹುಶಃ ನಾವು ಪ್ರಶ್ನೆಗಳನ್ನು ಕೇಳಿದಾಗ್ಗೆ ಉತ್ತರಗಳನ್ನು ಒದಗಿಸಿರುವುದರಲ್ಲಿ ಅನೇಕವೇಳೆ ನಾಲ್ಕು-ಐದು-ಆರು ವರ್ಷಗಳಾಗಿದಾಗ್ಯೂ ಅಂದಾಜು ಮಂಜೂರಾಗದೇ ಅಥವಾ ಮಂಜೂರಾದರೂ ಬಹುಕಾಲದ ಮೇಲೆ ಮಂಜೂರಾಗಿ ಪದಾರ್ಥಗಳ ಬೆಲೆ ಜಾಸ್ತಿ ಆಗಿ ಖರ್ಚು ಹೆಚ್ಚಾಗುತ್ತಾ ಇರುವುದು ಕಂಡುಬರುತ್ತದೆ. ಇಂಥ ಅನಾವಶ್ಯಕವಾದಂಥ ಖರ್ಚುಗಳು ಬಹಳವಾಗುತ್ತಾ ಇವೆ. ಅದರಲ್ಲೂ ಕೂಡ ದೊಡ್ಡ ದೊಡ್ಡ ಪ್ರಾಜೆಕ್ಟುಗಳು ಎಂದರೆ ಶರಾವತಿ ಪ್ರಾಜೆಕ್ಟು, ಲಕ್ಕವಳ್ಳಿ ಪ್ರಾಜೆಕ್ಟು ಇಂಥ ಪ್ರಾಜೆಕ್ಟುಗಳಿಗೆ ಹಣ ಎಷ್ಟರಮಟ್ಟಿಗೆ ಸದ್ವಿನಿಯೋಗವಾಗಬೇಕೋ ಅಷ್ಟರ ಮಟ್ಟಿಗೆ ಆಗುತ್ತಾ ಇಲ್ಲ ಎಂಬ ಟೀಕೆಗಳನ್ನು ನಾವು ಕೇಳುತ್ತಾ ಇದ್ದೇವೆ. ಇದನ್ನು ನಾವು ಎದುರಿಸಬೇಕಾಗುತ್ತದೆ. ಹೀಗೆ ಆಗುತ್ತಾ ಇದೆ ಎಂದ ಮಾತ್ರಕ್ಕೆ ಯಾರೂ ಕೂಡ ಮನಸ್ಸಿಗೆ ಅಸಮಾಧಾನ ಮಾಡಿಕೊಳ್ಳಬಾರದು. ನಮ್ಮ ದೇಶದಲ್ಲಿ ಒಳ್ಳೆಯ ಅಧಿಕಾರಿಗಳೂ ಇದ್ದಾರೆ, ಕೆಟ್ಟ ಅಧಿಕಾರಿಗಳೂ ಇದ್ದಾರೆ. ಒಳ್ಳೆಯ ಅಧಿಕಾರಿಗಳು ಚೆನ್ನಾಗಿ ಕೆಲಸ ಮಾಡುತ್ತಾ ಇದ್ದಾರೆ. ಆದರೆ ಕೆಲವರಲ್ಲಿ ಲಂಚದ ಹಾವಳಿ ಬಹಳ ಜಾಸ್ತಿಯಾಗಿದೆ ಎಂದು ಕೇಳಿದ್ದೇವೆ. ಈ ವಿಚಾರದಲ್ಲಿ ನಮ್ಮ ಮರಾಮತ್ತು ಸಚಿವರು ಹೆಚ್ಚು ಶ್ರಮವಹಿಸಿ ಈ ಕಡೆಗೆ ಗಮನಕೊಟ್ಟು, ಇದನ್ನು

ಹೋಗಲಾಡಿಸುವುದಕ್ಕೆ ಪ್ರಯತ್ನಪಟ್ಟು, ದುಂದು ವೆಚ್ಚವಾಗುವುದನ್ನು ಕಡಮೆ ಮಾಡಿದರೆ ಒಳ್ಳೆಯದು ಎಂದು ತಿಳಿದುಕೊಂಡಿದ್ದೇನೆ. ಆ ರೀತಿ ಅವರು ಹೆಚ್ಚಿನ ಗಮನ ಕೊಡಬೇಕೆಂದು ಅವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ವಿದ್ಯಾಭ್ಯಾಸದ ವ್ಯವಸ್ಥೆಗೆ, ಈಗತಾನೆ ಹೇಳಿದಹಾಗೆ, ಶೇಕಡ ಮೂರನೆ ಒಂದು ಭಾಗ ಖರ್ಚಾಗುತ್ತಾ ಇದೆ. ಉತ್ತರ ಕರ್ನಾಟಕ, ಮಂಗಳೂರು ಮತ್ತು ಇನ್ನೂ ಅನೇಕ ಕಡೆಗಳಲ್ಲಿ ಸಾರ್ವಜನಿಕರು ಬಹಳ ಉದಾರವಾಗಿ ಮುಂದೆ ಬಂದು ಇಂಥ ಸಂಸ್ಥೆಗಳನ್ನು ಬಹಳ ಚೆನ್ನಾಗಿ ನಡೆಸುತ್ತಾ ಇದ್ದಾರೆ. ನಮ್ಮ ಹಳೆಯ ಮೈಸೂರು ದೇಶದಲ್ಲೂ ಕೂಡ ಬಹಳ ಮುಂದಾಳತ್ವ ವಹಿಸಿ ಸಾರ್ವಜನಿಕರು ಕೆಲಸ ಮಾಡುತ್ತಾ ಇದ್ದಾರೆ. ಆದ್ದರಿಂದ ಈ ರೀತಿಯ ಟೆಕ್ನಿಕಲ್ ಸ್ಕೂಲುಗಳನ್ನು ಮಾತ್ರ ವಿದ್ಯಾಭ್ಯಾಸದ ಇಲಾಖೆಗೆ ಬಿಟ್ಟು ಉಳಿದ ಜನರಲ್ ಎಜ್ಯುಕೇಷನ್ ಏನಿದೆ ಅದಕ್ಕೆಲ್ಲಾ ಸಾರ್ವಜನಿಕರಿಗೇ ಹೆಚ್ಚಿನ ಪ್ರೋತ್ಸಾಹಕೊಟ್ಟು ಅವರಿಂದ ಕೆಲಸ ಮಾಡಿಸಿದರೆ ಬಹಳ ಹೆಚ್ಚಿನ ಹಣ ಉಳಿಯುತ್ತದೆ ಎಂಬುದನ್ನು ಕೂಡ ನಾವು ನಿರೀಕ್ಷಣೆ ಮಾಡಬಹುದು. ಅದರ ಕಡೆಗೆ ಮಾನ್ಯವಿದ್ಯಾಮಂತ್ರಿಗಳು ಗಮನ ಕೊಟ್ಟು ಸಾರ್ವಜನಿಕರಿಗೆ ಹೆಚ್ಚು ಪ್ರೋತ್ಸಾಹ ನೀಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟ್ಸ್ ವಿಚಾರದಲ್ಲಿ ಎಷ್ಟು ಪ್ರಚಾರವಾಗ ಬೇಕೋ ಅಷ್ಟು ಪ್ರಚಾರವಾಗುತ್ತಿಲ್ಲ. ಬಹುಶಃ ಹಳ್ಳಿಗಳಲ್ಲಿ ಹೆಚ್ಚು ಪ್ರಚಾರ ನಡೆದರೆ ಹೆಚ್ಚು ಹಣ ಸಂಗ್ರಹ ಮಾಡಬಹುದು. Small Savings ಏನಿದೆ ಅದರಿಂದಲೂ ಕೂಡ ಸರ್ಕಾರದವರಿಗೆ ಹೆಚ್ಚು ಹಣ ಒದಗಬಹುದು ಎಂದು ಕಾಣುತ್ತದೆ. ಆ ವಿಚಾರದಲ್ಲೂ ಕೂಡ ಹೆಚ್ಚಿನ ಆಸಕ್ತಿವಹಿಸಿ ಕೆಲಸ ಮಾಡಬೇಕಾಗಿದೆ.

ಮಲೆನಾಡಿನ ವಿಚಾರ. ಮಲೆನಾಡು, ತಮಗೆಲ್ಲರಿಗೂ ಗೊತ್ತಿರುವ ಹಾಗೆ, ಐಶ್ವರ್ಯ ಮತ್ತು ಸಂಪತ್ತಿನಿಂದ ಕೂಡಿದ ಪ್ರದೇಶ. ಅಲ್ಲಿ ನೀರಾವರಿ ಯೋಜನೆಗಳು ಇವೆ. ಮತ್ತು ಖನಿಜ ಸಂಪತ್ತು, ಅರಣ್ಯ ಸಂಪತ್ತು ಬೇಕಾದಷ್ಟು ಇದೆ. ಅಂಥ ಪ್ರದೇಶದ ಹಳ್ಳಿಗಳಲ್ಲಿ ಅನೇಕ ಕಡೆ ರಸ್ತೆಗಳಿಲ್ಲದೆ, ಸೇತುವೆಗಳಿಲ್ಲದೆ, ಬಹಳ ತೊಂದರೆ ಇರುವುದು ಅನೇಕರಿಗೆ ಗೊತ್ತಿರ ಬಹುದು. ಬಹುಶಃ ಈ ಸಂದರ್ಭದಲ್ಲಿ ಯಾರಾದರೂ ಕೂಡ, ಮಲೆನಾಡಿನ ವಿಚಾರದಲ್ಲಿ ಅನುಭವವಿಲ್ಲದೇ ಇದ್ದವರು ಮಲೆನಾಡಿಗೆ ಹೋದರೆ ಅನೇಕ ಕಡೆಗಳಲ್ಲಿ ಒಂದು ಹಳ್ಳಿಯಿಂದ ಒಂದು ಹಳ್ಳಿಗೆ ಹೋಗಬೇಕಾದರೆ ಎಷ್ಟು ಕಷ್ಟ ಎಂಬುದು ಗೊತ್ತಾಗುತ್ತದೆ. ಅದನ್ನು ತಾವೆಲ್ಲರೂ ಯೋಚನೆ ಮಾಡಬಹುದು. ಮಲೆನಾಡಿನ ವಿಚಾರ ಹೇಳುತ್ತಿರುವುದರಿಂದ ಮೂರು ಹೊತ್ತೂ ಮಲೆನಾಡಿನ ವಿಚಾರವನ್ನೇ ಹೇಳುತ್ತಾರೆ ಎಂದು ಯಾರೂ ಬೇಜಾರುಪಟ್ಟುಕೊಳ್ಳಬಾರದು. ಮಲೆನಾಡಿನ ಅಭಿವೃದ್ಧಿಯಾದರೆ ನಮ್ಮ ಮೈಸೂರಿನ ಅಭಿವೃದ್ಧಿ, ಭಾರತ ದೇಶದ ಅಭಿವೃದ್ಧಿಯಾಗುತ್ತದೆ ಎಂದು ತಿಳಿದುಕೊಳ್ಳಬೇಕು. ಆದ್ದರಿಂದ ಮಲೆನಾಡಿನ ಸಂಚಾರ ಸೌಕರ್ಯಕ್ಕೆ ಹೆಚ್ಚಿನ ಹಣ-ಒದಗಿಸಬೇಕು. ಯಾವ ಹಳ್ಳಿಯಲ್ಲೂ ಕೂಡ ಸೇತುವೆ ಇಲ್ಲ, ಜನಗಳಿಗೆ ಓಡಾಡುವ ಸೌಕರ್ಯ ಇಲ್ಲ ಎಂಬ ಆಕ್ಷೇಪಣೆ ಬರದ ಹಾಗೆ ತಾವು ಆ ಕಡೆಗೆ ಗಮನಕೊಟ್ಟು ಹೆಚ್ಚಿನ ಹಣವನ್ನು ಒದಗಿಸಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತೇನೆ. ಮಲೆನಾಡಿನಲ್ಲಿ ಸುಮಾರು ಆರು ತಿಂಗಳ ಕಾಲ ಬೇಕಾದಷ್ಟು ಮಳೆಯಾಗುತ್ತದೆ. ಮಳೆಯಾಗುವುದರ ಪರಿಣಾಮವಾಗಿ ಹಳ್ಳಿಗಳಲ್ಲಿ ರಸ್ತೆಗಳು ಕೊರೆದು ಹೋಗುತ್ತವೆ. ಈ ವರ್ಷ ರಸ್ತೆ ಮಾಡಿದರೆ ಮುಂದಿನ ವರ್ಷ ಇರುವುದಿಲ್ಲ. ಆದ್ದರಿಂದ ಮಣ್ಣಿನ ರಸ್ತೆಗಳಿದ್ದರೆ ಮಲೆನಾಡಿನಲ್ಲಿ ಪ್ರಯೋಜನವಿಲ್ಲ, ಅಲ್ಲಿ ಮೆಟಲ್ ರಸ್ತೆ ಮಾಡಬೇಕು. ಮೆಟಲ್ ರಸ್ತೆ ಮಾಡುವುದಕ್ಕೆ ಹೆಚ್ಚಿನ ಹಣವನ್ನು ಒದಗಿಸಬೇಕು ಎಂದು ಹೇಳಿ ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ರೈಲ್ವೆ ವಿಚಾರ ತೆಗೆದುಕೊಂಡರೆ ತಮಗೆಲ್ಲಾ ಗೊತ್ತಿರುವ ಹಾಗೆ ಮಲೆನಾಡಿನಲ್ಲಿ ರೈಲ್ವೆ ಸೌಕರ್ಯ ಇಲ್ಲ. ಇದು ಕೇಂದ್ರದವರ ಜವಾಬ್ದಾರಿ. ಆದಾಗ್ಯೂ ಕೂಡ ನಮ್ಮ ಸರ್ಕಾರದವರು ಈ ರೈಲ್ವೆ ಸೌಕರ್ಯದ ವಿಚಾರದಲ್ಲಿ ಇನ್ನೂ ಹೆಚ್ಚು ಗಮನಕೊಟ್ಟು ತಾಳಗುಪ್ಪದಿಂದ ತಾಂಡೇಲಿ-ಅಳನಾವರ—ಹುಬ್ಬಳ್ಳಿಗೆ ಹೋಗುವ ಹಾಗೆ ಒಂದು ರೈಲ್ವೆ ಲೈನ್ ಸ್ಥಾಪನೆ ಮಾಡಬೇಕು. ಅಲ್ಲದೆ, ಚಿಕ್ಕಮಗಳೂರು, ಕೊಪ್ಪ, ಮೂಡಿಗೆರೆ ಈ ಕಡೆ ರೈಲ್ವೆ ಸೌಕರ್ಯ ಇಲ್ಲ; ಮತ್ತು ಕೊಡಗಿಗೂ ಇಲ್ಲ. ಇದನ್ನು ಗನಮದಲ್ಲಿಟ್ಟುಕೊಂಡು ರೈಲ್ವೆ ಸೌಕರ್ಯ ಹೆಚ್ಚು ದೊರಕುವ ಹಾಗೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ಹೇಳಿ ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಮಲೆನಾಡಿನಲ್ಲಿ ಬೇಕಾದಷ್ಟು ಕೈಗಾರಿಕೆಗಳಿವೆ. ಗುಡಿಗಾರರ ಕೈಗಾರಿಕೆಗೆ ಮಲೆನಾಡು ಪ್ರಸಿದ್ಧವಾಗಿದೆ. ಗುಡಿಗಾರರು ಮಾಡಿರತಕ್ಕ ಕೆಲಸದಿಂದ ಈ ವಿಧಾನಸೌಧದ ಪ್ರಾಶಸ್ತ್ಯ ಎಷ್ಟುಮಟ್ಟಿಗೆ ಹೆಚ್ಚಿದೆ ಎಂಬುದನ್ನು ತಾವೆಲ್ಲರೂ ತಿಳಿದುಕೊಂಡಿದ್ದೀರಿ. ಈ ಗುಡಿಗಾರರಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು, ಮತ್ತು ಅವರಿಗೆ ಸರಿಯಾದಂಥ ಉತ್ತೇಜನ ಕೊಡುವುದಕ್ಕಾಗಿ ಅವರು ತಯಾರುಮಾಡಿದ ಮಾಲುಗಳನ್ನು ಕೊಂಡುಕೊಳ್ಳಲು ಕ್ಷಿಪ್ರದಲ್ಲೇ ಹಣವನ್ನು ಒದಗಿಸಬೇಕು. ಈ ರೀತಿ ಮಾಡಿದರೆ ಗುಡಿಗಾರರ ಕೆತ್ತನೆ ಕೆಲಸ ಬಹಳ ಯಶಸ್ವಿಯಾಗಿ ಆಗುತ್ತದೆ ಎಂದು ಹೇಳುತ್ತೇನೆ.

ಮಲೆನಾಡಿನ ಹಳ್ಳಿಗಳ ವಿಚಾರ ಹೇಳುವುದಾದರೆ, ಬಹುಶಃ ಮೊಣಕಾಲಿನವರೆಗೂ ಕೂಡ ಹಳ್ಳಿಗಳಲ್ಲಿ ನೀರು ನಿಂತಿರುತ್ತದೆ. ಹೆಲ್ತ್ ಮತ್ತು ಸ್ಯಾನಿಟೇಷನ್‌ಗೆ ಅಲ್ಲಿ ಹೆಚ್ಚು ಗಮನಕೊಡಬೇಕು. ಅದು ಬಹಳ ಅವಶ್ಯಕವಾದ ವಿಚಾರ. ಮಲೆನಾಡಿನಲ್ಲಿ ಜನಸಂಖ್ಯೆ ಕಡಮೆಯಾಗಿರುವುದಕ್ಕೆ ಇದೂ ಒಂದು ಕಾರಣ ಎಂದು ಹೇಳುತ್ತೇನೆ ರೋಗರುಜಿನಗಳು ಅಲ್ಲಿ ಬಹಳ ಜಾಸ್ತಿಯಾಗಿವೆ ಆದ್ದರಿಂದ ಹಳ್ಳಿಗಳಲ್ಲಿ ಸರಿಯಾದಂಥ ರಸ್ತೆಗಳನ್ನು ಮಾಡಿ, ಹೆಲ್ತ್ ಮತ್ತು ಸ್ಯಾನಿಟೇಷನ್ ಚೆನ್ನಾಗಿರುವಂತೆ ನೋಡಿಕೊಳ್ಳಬೇಕೆಂದು ಹೇಳುತ್ತೇನೆ.

ಮುಖ್ಯವಾಗಿ ಶಿವಮೊಗ್ಗದಲ್ಲಿ, ತುಂಗಾನದಿಗೆ ಒಂದು foot-bridge ಅನ್ನಾಗಲಿ, ಒಂದು ಪಕ್ಕಾ ಸೇತುವೆಯನ್ನಾಗಲಿ ಮಾಡಿಸಿ ಕೊಡುತ್ತೇವೆಂಬ ವಾಗ್ದಾನ ಅನೇಕ ದಿವಸಗಳ ಹಿಂದಿನದು, ಸರ್ ಮಿರ್ಜಾ ಇಸ್ಮಾಯಿಲ್ ಅವರು ದಿವಾನರಾಗಿದ್ದಾಗ, ಶಿವಮೊಗ್ಗಕ್ಕೆ ಇಂಟರ್ ಮೀಡಿಯಟ್ ಕಾಲೇಜನ್ನು ಕೊಟ್ಟಾಗ ಈ ರೀತಿಯ ಒಂದು ವಾಗ್ದಾನ ಮಾಡಿದ್ದರು. ಅದು ವಾಗ್ದಾನವಾಗಿ ಉಳಿದಿದೆಯೇ ಹೊರತು ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಈ ವಿಷಯಕ್ಕೆ ನಮ್ಮ ಮಾನ್ಯ ಮರಾ ಮತ್ತು ಶಾಖೆಯ ಸಚಿವರು ಗಮನಕೊಟ್ಟು ಕೆಲಸವನ್ನು ಮಾಡಿಕೊಡುತ್ತಾರೆಂದು ನಂಬಿದ್ದೇನೆ.

ಶಿವಮೊಗ್ಗ ಬಹಳ ಮುಖ್ಯವಾದ ಪ್ರದೇಶ. ಇಲ್ಲಿ ಡಿವಿಜನಲ್ ಕಮಿಷನರ್ ಅವರ Headquarter ಏರ್ಪಾಡು ಮಾಡಬೇಕೆಂದು ಬಹಳವಾಗಿ ಒತ್ತಾಯ

(ಶ್ರೀ ಎ. ಆರ್. ಬದರಿನಾರಾಯಣ್).

ಮಾಡಿದ್ದೆವು. ಶಿವಮೊಗ್ಗದಲ್ಲಿ ಡಿವಿಜನಲ್ ಕಮೀಷನರ್ ಅವರ ಕಚೇರಿ ಇರಬೇಕೆಂದು ಶಿವಮೊಗ್ಗ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಮುಂತಾದ ಜಿಲ್ಲೆಗಳವರು ಕೇಳಿದ್ದಾರೆ; ಇದನ್ನು ಮಾಡಿಕೊಡಬೇಕೆಂದು ಬಹಳ ಒತ್ತಾಯದಿಂದ ಹೇಳುತ್ತೇನೆ. ನಾನು ಇದುವರೆಗೂ ಯಾವ ಯಾವ ಸಲಹೆಗಳನ್ನು ಕೊಟ್ಟಿದ್ದೇನೆಯೋ ಅವೆಲ್ಲಕ್ಕೂಕೂಡ ದಯವಿಟ್ಟು ಗಮನಕೊಟ್ಟು, ಸಲಹೆಗಳೆಲ್ಲವನ್ನೂ ಕೂಡ ಕಾರ್ಯಗತ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಎಂ. ದಾಸಪ್ಪ (ಹರಪನಹಳ್ಳಿ–ಅನುಸೂಚಿತ ಜಾತಿಗಳು).—ಸ್ವಾಮಿ, ಈ ಜನರಲ್ ಬಡ್ಜೆಟ್ಟಿನಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತುಂಬ ಋಣಿಯಾಗಿದ್ದೇನೆ. ಏಕೆಂದರೆ ಅಸೆಂಬ್ಲಿ ಪ್ರಾರಂಭವಾದಲಾಗಾಯ್ತು ನಾನು ಸ್ವಲ್ಪ ಪ್ರಯತ್ನ ಮಾಡಿದ್ದು ನನಗೆ ಮಾತನಾಡಲು ಅವಕಾಶಸಿಕ್ಕಲಿಲ್ಲ. ಈ ದಿನ ಸಿಕ್ಕಿದ್ದು ಬಹಳ ಸಂತೋಷ.

ಇದುವರೆಗೂ ಕಾಂಗ್ರೆಸ್‌ಸದಸ್ಯರು ಈ ಬಡ್ಜೆಟ್ಟನ್ನು ಮನಃ ಪೂರ್ವಕವಾಗಿ ಸ್ವಾಗತಿಸುತ್ತಾ ಮಾತನಾಡಿದರು. ಇದು ಬಡವರ ಬೆನ್ನೆಲುಬನ್ನು ಬಗ್ಗಿಸಲು ತಯಾರಾದ ಬಡ್ಜೆಟ್ ಆದಕಾರಣ ಅಷ್ಟೇ ಸಂತೋಷದಿಂದ ಸ್ವಾಗತಿಸಿದ್ದಾರೆ. ಈ ಬಡ್ಜೆಟ್ಟನ್ನು ಪರಿಶೀಲನೆ ಮಾಡಿದಮೇಲೆ ಬಡವರು ಬಡವರಾಗಿಯೇ ಇರುವುದಕ್ಕೆ ಮತ್ತು ಸಾಹುಕಾರರು ಸಾಹುಕಾರರಾಗುವುದಕ್ಕೆ ಅವಕಾಶವಿದೆ, ಮತ್ತು ಇದು ಬಡವರ ಹಿತಕ್ಕಾಗಿ ಮಾಡಿದ ಬಡ್ಜೆಟ್ ಅಲ್ಲವೆಂದು ಕಾಣುತ್ತದೆ.

ಈಗ ಬಳ್ಳಾರಿ ಜಿಲ್ಲೆಯ ವಿಷಯವನ್ನು ತೆಗೆದುಕೊಂಡು ಆಲೋಚನೆಮಾಡಿದರೆ, ಅದು ಅನೇಕ ವಿಧದಲ್ಲಿ ಹಿಂದುಳಿದಿರತಕ್ಕ ಪ್ರದೇಶ. ಆಂಧ್ರ, ಕರ್ಣಾಟಕ ಎಂಬ ಹೋರಾಟನಡೆದಂಥ ಸಮಯದಲ್ಲಿ ಮೈಸೂರು ರಾಜ್ಯದ ಅನೇಕ ಮುಖಂಡರೂ, ಮುಖ್ಯ ಮಂತ್ರಿಗಳೂ ಮತ್ತು ಇತರ ನಾಯಕರೂ ಬಳ್ಳಾರಿಗೆ ಬಂದು ಅಲ್ಲಿಯ ಪ್ರಜೆಗಳಿಗೆ, ಬಳ್ಳಾರಿಯನ್ನು ನಾನಾವಿಧದಲ್ಲಿ ಅಭಿವೃದ್ಧಿ ಮಾಡುವುದಾಗಿ ಪ್ರಮಾಣಗಳನ್ನು ಮಾಡಿದರು. ಆದರೆ ಈಗ ಬಳ್ಳಾರಿಜಿಲ್ಲೆಯು ಮೈಸೂರು ರಾಜ್ಯಕ್ಕೆ ಸೇರಿದ್ದರೂ ಕೂಡ ಮೈಸೂರು ಸರ್ಕಾರಕ್ಕೆ ಅದರ ನೆನಪಿದೆಯೋ ಇಲ್ಲವೋ ಎಂಬ ಅನುಮಾನ ಬರುತ್ತಿದೆ. ಇವರು ಬಳ್ಳಾರಿಯ ಪ್ರಜೆಗಳನ್ನು ಮರೆತಂತೆ ಕಾಣುತ್ತದೆ. ಬಳ್ಳಾರಿಯು ಮೈಸೂರಿಗೆಸೇರುವುದಕ್ಕೆ ಮುಂಚೆ ಅಲ್ಲಿ ಮದರಾಸು ರಾಜ್ಯಕ್ಕೆ ಸೇರಿದ 26 ರೀಜನಲ್ ಆಫೀಸುಗಳಿದ್ದುವು. ಬಳ್ಳಾರಿಯು ಮೈಸೂರಿಗೆ ಸೇರಿದ ನಂತರ ಈ ಆಫೀಸುಗಳನ್ನೆಲ್ಲ ಅಲ್ಲಿಂದ ಬೇರೆ ಕಡೆಗೆ ಬದಲಾಯಿಸಿದರು. ಈ ಆಫೀಸುಗಳಿದ್ದ ದೊಡ್ಡ ದೊಡ್ಡ ಕಟ್ಟಡಗಳೆಲ್ಲವೂ ಉಪಯೋಗವಿಲ್ಲದಂತಾಗಿವೆ. ಬಳ್ಳಾರಿ ಟೌನಿನಲ್ಲಿ ನೀರಿನ ಅಭಾವ ಬಹಳವಾಗಿದೆ 85 ಸಾವಿರ ಪ್ರಜಾಸಂಖ್ಯೆಗೆ 124 ನಲ್ಲಿಗಳು ಮಾತ್ರ ಇವೆ. ಪೈಪುಗಳೆಲ್ಲ ಬಹಳ ಹಳೆಯವಾಗಿ, ಇವುಗಳಲ್ಲಿಯೂ ಸಹ ನೀರು ಸರಬರಾಜು ಆಗುತ್ತಿಲ್ಲ. ಬಳ್ಳಾರಿಗೆ ನೀರಿನ ಸೌಕರ್ಯವನ್ನೊದಗಿಸಿ ಕೊಡಬೇಕೆಂದು ಮಂತ್ರಿಗಳ ಮುಂದೆ ಪ್ರತಿಯೊಂದು ಮೆಮೊರಾಂಡಂನಲ್ಲೂ ಸೂಚಿಸಿ ಹೋರಾಟ್ಟ ನಡೆಸಿ ಎಷ್ಟು ಕೇಳಿದರೂ ಸಹ ಆ ವಿಚಾರದಲ್ಲಿ ಗಮನವನ್ನು ಕೊಟ್ಟು ಕುಡಿಯುವ ನೀರಿನ ವ್ಯವಸ್ಥೆಯನ್ನು ಸರಿಪಡಿಸಲು ಕ್ರಮ ಕೈಗೊಂಡಿಲ್ಲ.

ಇಲ್ಲಿನ ಪೋಲೀಸ್ ಇಲಾಖೆಯ ಆಡಳಿತವು ಬಹಳ ಅವ್ಯವಸ್ಥೆಯಿಂದ ಕೂಡಿದೆ. ನನಗೆ ತಿಳಿದು ಬಂದಿರುವ ಪ್ರಕಾರ ಮೈಸೂರು ರಾಜ್ಯಕ್ಕೆ ಬಳ್ಳಾರಿಯು ಸೇರಿದ ಮೇಲೆ ಅಲ್ಲಿ 78 ಖೂನಿಗಳು, 16 robberies ಮತ್ತು 14 dacoities ನಡೆದಿವೆ. ಇಂದಿಗೂ ಕೆಲವು ಜನ ತಪ್ಪಿತಸ್ಥರ ಮೇಲೆ ಕೇಸುಗಳನ್ನೇ ಮಾಡಿಲ್ಲ. ಪೋಲೀಸ್‌ನವರಿಗೆ ಇವುಗಳಬಗ್ಗೆ ಹೇಗೆ ಕೇಸುಗಳನ್ನು ಮಾಡಬೇಕೆಂಬುದೂ ತಿಳಿಯದೆಂದು ಕಾಣುತ್ತದೆ. ಈ ಜಿಲ್ಲೆಯ ಪ್ರಜೆಗಳಿಗೆ ಏನೂ security ಇಲ್ಲದಂತಾಗಿ, ಅಲ್ಲಿ ಒಂದು ವಿಧವಾದ ಭಯಾನಕ ಪರಿಸ್ಥಿತಿಯುಂಟಾಗಿದೆ. ಜನಗಳಿಗೆ ಸರ್ಕಾರದಲ್ಲಿ ನಂಬಿಕೆ ಕಡಮೆಯಾಗಿದೆ. ದೇವರೇ ಇಲ್ಲಿನ ಜನರನ್ನು ರಕ್ಷಣೆಮಾಡಬೇಕಾದ ಸ್ಥಿತಿ ಇದೆ. ಕೂಡ್ಲಿಗಿ, ಹರಪನಹಳ್ಳಿ ಮತ್ತು ಇತರ ಪ್ರದೇಶಗಳಲ್ಲಿ Communication ಇಲ್ಲ, ಒಂದೂರಿನಿಂದ ಮತ್ತೊಂದೂರಿಗೆ ಹೋಗಬೇಕಾದರೆ ಸರಿಯಾದ ರಸ್ತೆಗಳಿಲ್ಲ. ಈ ಎಲ್ಲ ವಿಷಯಗಳನ್ನೂ ಪರಿಶೀಲಿಸಿದರೆ ಬಳ್ಳಾರಿ ಜಿಲ್ಲೆಯ ವಿಷಯದಲ್ಲಿ ಸರ್ಕಾರಕ್ಕೆ ನಿರ್ಲಕ್ಷ್ಯ ಮನೋಭಾವವಿದೆ ಎಂದು ಹೇಳಬಹುದು.

ರೆವೆನ್ಯೂ ಇಲಾಖೆಯ ಆಡಳಿತವನ್ನು ತೆಗೆದುಕೊಂಡರೆ ಅದು ಮತ್ತೂ ಕುಲಗೆಟ್ಟಿದೆ. ಅಲ್ಲಿಗೆ ಪೋಸ್ಟ್ ಮಾಡಿರುವ ಅನೇಕ ಅಧಿಕಾರಿಗಳಿಗೆ ರಾಷ್ಟ್ರವನ್ನು ಪರಿಪಾಲನೆ ಮಾಡುವ ಶಕ್ತಿ ಮತ್ತು ಕಾನೂನುಗಳ ಪರಿಚಯ ಇದೆಯೋ ಇಲ್ಲವೋ ಎಂಬ ಅನುಮಾನವಿದೆ. ಡೆಪ್ಯುಟಿ ಕಮೀಷನರು ಮನಸ್ವೇಚ್ಛೆಯಾಗಿ ವರ್ತಿಸುತ್ತ ಕಾನೂನುಗಳನ್ನು ಕಡೆಗಣಿಸಿ ಕೆಲಸ ಮಾಡುತ್ತಾರೆ. ಹರಿಜನರ ಅಭಿವೃದ್ಧಿಯ ವಿಷಯದಲ್ಲಂತೂ ಇವರು ಗಮನವನ್ನೇ ಕೊಡುವುದಿಲ್ಲ ಹಿಂದೆ ಹರಿಜನರ ಅಭಿವೃದ್ಧಿಗೆ ಒದಗಿಸಿದ್ದ ಹಣವನ್ನು ಖರ್ಚು ಮಾಡದೆಯೇ ಸರ್ಕಾರಕ್ಕೆ ಸರೆಂಡರ್‌ಮಾಡಿರುತ್ತಾರೆ. ಸರ್ಕಾರದವರು ಹರಿಜನರ ಅಭಿವೃದ್ಧಿಗಾಗಿ, ಅವರಿಗೆ ವಾಸದ ಮನೆಗಳನ್ನು ಕಟ್ಟಿಸಲು ಒಬ್ಬೊಬ್ಬರಿಗೆ ಮುನ್ನೂರು ರೂಪಾಯಿಗಳನ್ನು ಕೊಡಬೇಕೆಂದು ಮಾಡಿದ್ದಾರೆ. ಈ ಹಣವನ್ನು ಒಟ್ಟಾಗಿ ಕೊಡುವುದಿಲ್ಲ. ಅದನ್ನೂ ಮೂರು ಕಂತುಗಳಲ್ಲಿ, ಕಟ್ಟಡದ ಕೆಲಸವು ಮುಂದುವರಿದಂತೆಲ್ಲ, ಒಂದೊಂದು ಸಲಕ್ಕೆ ನೂರು ರೂಪಾಯಿಗಳಂತೆ ಕೊಡುತ್ತಾರೆ. ಹೀಗೆ ಕೊಡುವ ಹಣವು ಅವರಿಗೆ ಮುಟ್ಟುವುದರೊಳಗಾಗಿ ಶ್ಯಾನುಭೋಗರು, ಗೌಡರು, ಶಿಫಾರ್ಸು ಮಾಡತಕ್ಕವರೂ ಇವರಿಗೆಲ್ಲ ಭಾಗ ಕೊಡಬೇಕು. ಹೀಗೆ ಕೊಟ್ಟಾದ ಮೇಲೆ ಅವನಿಗೆ ಉಳಿಯುವುದು 100–150 ರೂಪಾಯಿ ಮಾತ್ರ. ಈ ರೀತಿ ನಡೆಯುತ್ತಿದೆ. ಇದನ್ನು ಕೇಳುವವರೇ ಇಲ್ಲ.

ಸರ್ಕಾರದವರು ಹರಿಜನರ ಅಭಿವೃದ್ಧಿ ಮಾಡುವುದಕ್ಕೆ ಎಂದು ಅನೇಕ ಕಾನೂನುಗಳನ್ನು ಮಾಡಿದ್ದಾರೆ. ಅವನ್ನು ಮಾಡಿರುವುದು ಬಹಳ ಸಂತೋಷ. ಆದರೆ ಆ ಕಾನೂನುಗಳು ಬಳಕೆಗಾಗದದ ಮೇಲೆ ಇವೆಯೇ ಹೊರತು ಹರಿಜನರಿಗೆ ಅವುಗಳಿಂದ ಏನೂ ಉಪಯೋಗವಾಗುತ್ತಿಲ್ಲ. ಆಲೋಚನೆ ಮಾಡಿನೋಡಿದರೆ ಈ ಕಾನೂನುಗಳೆಲ್ಲ ಬೇರೆದೇಶಗಳಿಂದ ಬರತಕ್ಕ ನಾಯಕರ ಮತ್ತು ಇತರ ದೇಶಗಳವರ ಮನಸ್ಸನ್ನು ತೃಪ್ತಿ ಪಡಿಸುವುದಕ್ಕೆ ತಯಾರು ಮಾಡಿದಂಥ ಕಾನೂನುಗಳೇ ವಿನಾ ಹರಿಜನರನ್ನು ಉದ್ಧಾರ ಮಾಡಲಿಕ್ಕೆ ತಯಾರುಮಾಡಿದ ಕಾನೂನುಗಳಲ್ಲವೆಂದು ನಿರ್ಭಯದಿಂದ ಹೇಳಬಹುದಾಗಿದೆ. ಹಳ್ಳಿಗಳ ಕಡೆ ಹರಿಜನರಿಗೆ ಗೌಡರು ನೀರನ್ನು ಒಡ್ಡಿದರೆ ಉಂಟು ಇಲ್ಲದೆ ಇದ್ದರೆ ಇಲ್ಲ. ದೇಹಿ ಎಂದು ಕೇಳಿ ನೀರನ್ನು ಹಾಕಿಸಿಕೊಳ್ಳಬೇಕಾಗಿದೆ. ಇದು ನಾಚಿಕೆಗೇಡಿನ ವಿಷಯ ಮತ್ತು ತಲೆ ಬಗ್ಗಿಸಿಕೊಂಡು ತಿರುಗಾಡಬೇಕಾದ ವಿಷಯ.

ಇವರುಗಳು ಪ್ರಜಾಪ್ರಭುತ್ವವೆಂದು ಹೇಳುತ್ತಾರೆ. ಸರಿಯಾಗಿ ವಿಚಾರ ಮಾಡಿನೋಡಿದರೆ ಇದು ಪ್ರಜಾಪ್ರಭುತ್ವವಲ್ಲ, ಪ್ರಜೆಗಳನ್ನು ಕೊಲೆಮಾಡತಕ್ಕ ಪ್ರಭುತ್ವ ಎಂದು ಗೊತ್ತಾಗುತ್ತದೆ. ಇದು Secular State ಎಂದು ಹೇಳುತ್ತಾರೆ. ಆದರೆ ವಾಸ್ತವವಾಗಿ ಇದು Secular State ಅಲ್ಲ, it is a peculiar State with peculiar Laws ಎಂದು ಮಾತ್ರ ಹೇಳಬೇಕಾಗಿದೆ. ನಮ್ಮ ಪೂಜ್ಯ ಮಹಾತ್ಮ ಗಾಂಧೀಯವರು ಇಡೀ ಹಿಂದೂದೇಶದಲ್ಲಿ ರಾಮರಾಜ್ಯ ಸ್ಥಾಪನೆ ಮಾಡಬೇಕೆಂದು ಹೇಳುತ್ತಬಂದಿದ್ದರು. ಅದೇ ರೀತಿಯಾಗಿ ಇತರ ಮುಖಂಡರೂ ಹೇಳುತ್ತ ಬಂದರು. ಆದರೆ ರಾಮರಾಜ್ಯ ಸ್ಥಾಪನೆಯಾಗುವುದಕ್ಕೆ ಬದಲಾಗಿ ರಾಕ್ಷಸರಾಜ್ಯ ಸ್ಥಾಪನೆಯಾಗಿದೆ. ಮತ್ತು ಈಗಿರುವುದು ಜನರನ್ನು ಕೊಲೆ ಮಾಡಲಿಕ್ಕೆ ಇರತಕ್ಕ ಸರ್ಕಾರವೆಂದು ಮಾತ್ರ ನಾನು ಇವೊತ್ತು ಹೇಳಬೇಕಾಗಿದೆ.

12-30 P.M.

ಹರಿಜನರನ್ನು ಉದ್ಧಾರ ಮಾಡುವುದಕ್ಕೆಂದು ಮಾಡಿರುವ ಕಾನೂನುಗಳು ತೋರಿಕೆಗೆ ಇವೆಯೇ ಹೊರತು ಅವುಗಳಿಂದ ಹರಿಜನರ ಅಭಿವೃದ್ಧಿಸಾಧನೆಯು ಆಗುತ್ತಿಲ್ಲ. ಈ ರೀತಿಯಾಗಿ ಹರಿಜನರಿಗೆ ಮೋಸವಾಗುತ್ತಿರುವುದು ಸರಕಾರಕ್ಕೂ ನಷ್ಟ, ದೇಶಕ್ಕೂ ನಷ್ಟ. ಕಾಂಗ್ರೆಸ್ಸಿಗರು ನಾವು ರಾಮರಾಜ್ಯ ಮಾಡುತ್ತೇವೆಂದು ಬಾಯಿಂದ ಹೇಳುವುದು ಸರಿಯಾಗಿ ಕೃತಿಯಲ್ಲಿ ಬರುತ್ತಿಲ್ಲ. ಹೀಗಾಗುತ್ತ ಹೋದರೆ ಜನತೆಯು ಉದ್ಧಾರವಾಗುವುದಿಲ್ಲ. ಕಮ್ಯೂನಿಸ್ಟರಿಂದ ಕ್ರಾಂತಿಯಾಗುವುದೆಂದು ಒಬ್ಬ ಕಮ್ಯುನಿಸ್ಟನನ್ನು ಕಂಡರೂ ಸರಕಾರ ಬೆದರುತ್ತದೆ. ಆದರೆ ಇಂದು ಭಾರತದಲ್ಲಿ ಕ್ರಾಂತಿಯನ್ನು ಕಮ್ಯುನಿಸ್ಟರು ಉಂಟು ಮಾಡಲಾರರು. ಕ್ರಾಂತಿಯಾಗುವುದು ಸರಕಾರದ ಮೋಸದಿಂದ ಅತೃಪ್ತಿಗೊಂಡ ನಿಮ್ನವರ್ಗದವರಿಂದ. ಹರಿಜನರ ಅಭಿವೃದ್ಧಿಗಾಗಿ ಸರಕಾರ ಕೈಗೊಂಡ ಶಾಸನಗಳೆಲ್ಲ ಹೊರಗಿನಿಂದ ಬಂದವರಿಗೆ ತೋರಿಸಲೋಸುಗವಾಗಿ ಇವೆ. ಹರಿಜನರಿಗೆ ಕುಡಿಯಲಿಕ್ಕೆ ನೀರು ದೊರೆಯುವುದಿಲ್ಲ. ಇರಲು ಮನೆಯಿಲ್ಲ. ಸರಕಾರದ ನೀತಿಯಿಂದ ಅತೃಪ್ತಿಗೊಂಡ ಹರಿಜನರು ದಂಗೆ ಎದ್ದಾರು ಎಂದು ಎಚ್ಚರಿಸಬೇಕಾಗಿದೆ. ಹರಿಜನರ ಪರಿಸ್ಥಿತಿ ಏನಾಗಿದೆ ಎಂಬುದನ್ನು ಕನ್ನಡಿ ಇಟ್ಟುಕೊಂಡು ನೋಡುವಂತೆ ನೋಡಿ ತಿಳಿದುಕೊಳ್ಳಬೇಕು. ಹರಿಜನರು ಅಸ್ಪೃಶ್ಯರೆಂಬ ಈ ಅಂಟುಮುಟ್ಟು ಹಿಂದೂದೇಶದ ಮರ್ಯಾದೆಗೆ ದೊಡ್ಡ ಕಲಂಕವಾಗಿದೆ. ಹರಿಜನರು ಸಾವಿರಾರು ವರ್ಷಗಳಿಂದ ಸಮಾಜದಲ್ಲಿ ಕೆಳಗೆ ಬಿದ್ದವರಾಗಿದ್ದಾರೆ. ಅವರ ಪ್ರಗತಿಯನ್ನು ನಿರ್ಲಕ್ಷಿಸಲಾಗಿದೆ. ಅಧಿಕಾರಿಗಳಿಗೂ ಕೂಡ ಈ ವಿಷಯದಲ್ಲಿ ಆಸ್ಥೆವಹಿಸುತ್ತಿಲ್ಲ. ನಮ್ಮ ಜಿಲ್ಲೆಯಲ್ಲಿ ಹರಿಜನರ ಅಭಿವೃದ್ಧಿಗಾಗಿ ಸರಕಾರದವರು 20 ಸಾವಿರ ಮಂಜೂರು ಮಾಡಿದರೆ ಅದರಲ್ಲಿ 12 ಸಾವಿರ ರೂಪಾಯಿ ಖರ್ಚುಮಾಡಿ ಉಳಿದಿದ್ದನ್ನು ವಾಪಸ್ಸು ಮಾಡಿದ್ದಾರೆ. ಈ ರೀತಿಯಾಗಿ ಯಾಕೆ ಆಗುತ್ತದೆ ಎಂದರೆ ಅಧಿಕಾರಿಗಳಿಗೆ ಹರಿಜನರ ನಿಜವಾದ ಕಷ್ಟಸುಖಗಳ ಅರಿವು ಇಲ್ಲ; ಅವರು ಆಸ್ಥೆ ವಹಿಸುತ್ತಿಲ್ಲ. ಯಾವರೀತಿಯಾಗಿ ಪಾನ ಪ್ರತಿ ಬಂಧವನ್ನು ಯಶಸ್ವಿಯನ್ನಾಗಿ ಮಾಡಲು ಪ್ರತ್ಯೇಕ ಒಂದು ಇಲಾಖೆಯನ್ನು ಮಾಡಿ ಅದಕ್ಕೊಂದು ಪ್ರತ್ಯೇಕ ಅಧಿಕಾರಿಯನ್ನು ನಿಯಮಿಸಲಾಗಿದೆಯೋ ಅದೇರೀತಿಯಾಗಿ ಹರಿಜನರ ಅಭಿವೃದ್ಧಿಗಾಗಿ ಹಿಂದುಳಿದ ವರ್ಗದವರ ಪ್ರಗತಿಗಾಗಿ ಒಂದು ಪ್ರತ್ಯೇಕ ಇಲಾಖೆಯನ್ನು ಮಾಡಬೇಕು. ಅದಕ್ಕೆ ಒಬ್ಬ ಪ್ರತ್ಯೇಕ ಅಧಿಕಾರಿಯನ್ನು ನಿಯಮಿಸಬೇಕು. ಲಂಚನಿರೋಧ ಶಾಖೆಯನ್ನು ಪ್ರತ್ಯೇಕವಾಗಿ ಒಂದು ಇಲಾಖೆಯನ್ನು ಮಾಡಿದಂತೆ ಹರಿಜನರ ಸಲುವಾಗಿ ಸಹ ಒಂದು Special Department ಮಾಡಬೇಕೆಂದು ಸೂಚಿಸಲಿಚ್ಛಿಸುತ್ತೇನೆ. ಹರಿಜನರ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವುದಕ್ಕೋಸ್ಕರ ಪ್ರತ್ಯೇಕವಾದ ಒಂದು Department ಇರುವುದು ಅವಶ್ಯವಾಗಿದೆ. ಮಾತನಾಡಲು ನನಗೆ ಅವಕಾಶ ಕೊಟ್ಟುದುದಕ್ಕೆ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈ ಆಯುವ್ಯಯದ ಸಾಮಾನ್ಯ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಲು ಅಪೇಕ್ಷಿಸುವ ಸದಸ್ಯರು ಇನ್ನೂ ಯಾರು ಯಾರು ಇದ್ದಾರೋ ಅವರೆಲ್ಲರೂ ನಿಂತುಕೊಳ್ಳಬೇಕು.

(ಅನೇಕ ಮಾನ್ಯ ಸದಸ್ಯರು ಎದ್ದು ನಿಂತರು)

ಇಷ್ಟು ಜನ ಸದಸ್ಯರು ಮಾತನಾಡುವುದಾದರೆ ಕಾಲಾವಕಾಶ ಇಲ್ಲ. ಕಾಂಗ್ರೆಸ್ ಪಕ್ಷದಲ್ಲಿಯ ಎಲ್ಲ ಸದಸ್ಯರೂ ಮಾತನಾಡಬೇಕೆಂದರೆ ಅದು ಅಸಾಧ್ಯವಾದ ಮಾತು. ಈಗಾಗಲೇ 45 ಜನ ಸದಸ್ಯರು ಮಾತನಾಡಿದ್ದಾರೆ. ಅದರಲ್ಲಿ 24 ಕಾಂಗ್ರೆಸ್ ಪಕ್ಷದ ಸದಸ್ಯರಿಗೆ ಮಾತನಾಡಲು ಕೊಟ್ಟಿದ್ದೇನೆ. ಪಿ.ಎಸ್.ಪಿ. ಪಕ್ಷದಿಂದ ಹತ್ತು ಸದಸ್ಯರು ಮಾತನಾಡಿದ್ದಾರೆ. ಮಾತನಾಡುವುದಕ್ಕೆ ಅವಕಾಶ ಕೊಡಲು ಕೆಲವು ಸದಸ್ಯರನ್ನು ಆರಿಸಬೇಕಾಗುತ್ತದೆ. ಡಿಮಾಂಡುಗಳ ಮೇಲಿನ ಹನ್ನೆರಡು ದಿವಸಗಳ ಚರ್ಚೆಯಲ್ಲಿ ಎಲ್ಲರಿಗೂ ಅವಕಾಶ ಕೊಡಲಾಗುವುದು. ಈಗ ಸಾಮಾನ್ಯ ಚರ್ಚೆಯಮೇಲೆ ಮಾತನಾಡಲು ಹೆಚ್ಚು ಸದಸ್ಯರಿಗೆ ಅವಕಾಶ ಕೊಡಲು ಆಗುವದಿಲ್ಲ.

ಶ್ರೀ ಜಿ. ಶಿವಪ್ಪ (ಚಿತ್ರದುರ್ಗ).—ಸಾಧ್ಯವಾದ ಮಟ್ಟಿಗೆ ಪ್ರತಿಯೊಂದು ಜಿಲ್ಲೆಯ ಎರಡು ಅಥವಾ ಮೂರು ಸದಸ್ಯರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಚೆನ್ನಾಗಿ ಆಗುವುದಿಲ್ಲವೇ ?

ಅಧ್ಯಕ್ಷರು.—ಆ ರೀತಿಯಾಗಿ ಮಾತನಾಡಲು ಅವಕಾಶ ಕೊಡುವುದು ಸರಿಯಾಗಲಾರದು. ಅವಧಿ ಇರುವವಮಟ್ಟಿಗೆ ಮಾತ್ರ ಕೊಡಲಾಗುವುದು. ಪುನಃ 3-30 ಗಂಟೆಗೆ ಸಭೆ ಪ್ರಾರಂಭವಾದ ಮೇಲೆ ಮಂತ್ರಿಗಳಿಗೆ ಉತ್ತರ ಕೊಡಲು ಎರಡೂವರೆ ಗಂಟೆಯವರೆಗೆ ಅವಧಿ ಬೇಕಾಗುವದು. ಪುನಃ ಸಭೆ ಸೇರಿದಾಗ ಒಬ್ಬ ಸದಸ್ಯರಿಗೆ ಮಾತ್ರ ಮಾತನಾಡಲು ಅವಕಾಶ ಕೊಡುತ್ತೇನೆ. ಅನಂತರ ಮಂತ್ರಿಗಳು ಉತ್ತರ ಕೊಡುವರು. ಮಾತನಾಡಬೇಕೆಂದು ಅಪೇಕ್ಷಿಸುವ ಇನ್ನುಳಿದ ಸದಸ್ಯರಿಗೆ ಡಿಮಾಂಡ್ ಚರ್ಚೆಯ ಕಾಲದಲ್ಲಿ ಅವಕಾಶ ಕೊಡುವೆನು. ಮೂರೂವರೆ ಗಂಟೆಗೆ ಪುನಃ ಕೂಡೋಣ.

The House adjourned at Forty Minutes past Twelve of the Clock and re-assembled at Thirty Minutes past Three of the Clock.